ಬುಧವಾರ, ಜನವರಿ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 19 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವಿಜ್ಞಾನದ ಆವಿಷ್ಕಾರಗಳು ಶೂನ್ಯದಿಂದ ಉದ್ಭವಿಸುವುದಿಲ್ಲ ಎಂಬ ಮಾತು ಲಸಿಕೆಯ ವಿಚಾರದಲ್ಲೂ ಸತ್ಯ. ಹಾಗಾದರೆ, ಲಸಿಕೆಯ ವೃತ್ತಾಂತವೇನು? ಇಲ್ಲಿದೆ ಮಾಹಿತಿ...



ಆಳ-ಅಗಲ
ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಟ್ಯಾಬ್ಲೊಗಳು ಸ್ತಬ್ಧ

ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ದಿಢೀರ್ ರದ್ದು 8
ಬಿಜೆಪಿ ನಾಯಕರ ವಿರುದ್ಧ ಕ್ರಮಕ್ಕೆ ಆಗ್ರಹ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,754 ▼	18,113 ▼	₹49,730 (ಬೆಂಗಳೂರು) ▲	₹63,500 (ಬೆಂಗಳೂರು) ▲	74.58 ▼

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ
ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ 5

ಉತ್ತುಂಗ ಸಂದರ್ಭದ ಅಂದಾಜು: ಕೋವಿಡ್ ತಾಂತ್ರಿಕ ಸಲಹಾ ಸಮಿತಿ ವರದಿ

ದಿನಕ್ಕೆ 1.2 ಲಕ್ಷ ಪ್ರಕರಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆ ಗರಿಷ್ಠ ಮಟ್ಟ ತಲುಪಿದಾಗ ದಿನಕ್ಕೆ 1.2 ಲಕ್ಷ ಪ್ರಕರಣಗಳು ವರದಿಯಾಗುವ ಸಾಧ್ಯತೆ ಇದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.


ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ವರ್ಚುವಲ್ ರೂಪದಲ್ಲಿ ನಡೆಸಿದ 18 ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಆರೋಗ್ಯಾಧಿಕಾರಿಗಳ ಸಭೆ ಬಳಿಕ ಸಚಿವ ಸುಧಾಕರ್ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಕೊರೊನಾ ಸೋಂಕು ತಾರಕಕ್ಕೆ ಏರಿದಾಗ ಏನಾಗಬಹುದು ಎಂಬ ಬಗ್ಗೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ನೀಡಿರುವ ವರದಿಯನ್ನು ಉಲ್ಲೇಖಿಸಿ ವಿವರ ನೀಡಿದ ಅವರು, ಅದಕ್ಕಿಂತ ಉತ್ತಮ ಸ್ಥಿತಿ ಎಂದರೆ 80 ಸಾವಿರ ಪ್ರಕರಣಗಳು ವರದಿಯಾಗಬಹುದು. ಎರಡನೇ ಅಲೆಗೆ ಹೋಲಿಸಿದರೆ, ಈ ಬಾರಿ ಅತ್ಯಂತ ತ್ವರಿತಗತಿಯಲ್ಲಿ ಅಂದರೆ ನಾಲ್ಕರಿಂದ ಐದು ಪಟ್ಟು ವೇಗವಾಗಿ ಕೋವಿಡ್ ಹರಡುತ್ತಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ ಸೋಮವಾರ 27,156 ಹೊಸ ಪ್ರಕರಣ ವರದಿಯಾಗಿದ್ದವು. ಮಂಗಳವಾರ 41,457 ಹೊಸ ಪ್ರಕರಣಗಳು ವರದಿಯಾಗಿವೆ ಎಂದರು.

8ನೇ ಪುಟ ನೋಡಿ

ವೈದ್ಯರ ನಡೆ ಹಳ್ಳಿ ಕಡೆ:ಸಿ.ಎಂ ಸೂಚನೆ



ವೈದ್ಯರು ಮತ್ತು ಆರೋಗ್ಯ ಸಹಾಯಕಿಯರು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಮನೆಗೂ ಭೇಟಿ ನೀಡಬೇಕು. ಇದಕ್ಕಾಗಿ ವಿಶೇಷ ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ರೂಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆಯಲ್ಲಿ ಸೂಚಿಸಿದರು.

ಬೆಂಗಳೂರಿನಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರ ರೋಗಿ ವಿಭಾಗಗಳನ್ನು(ಒಪಿಡಿ) ಬಲಪಡಿಸಲು ಹಾಗೂ ಜನಸಂಖ್ಯೆಗೆ ಅನುಗುಣವಾಗಿ ಹೊಸ ಒಪಿಡಿಗಳನ್ನು ಆರಂಭಿಸುವಂತೆಯೂ ತಿಳಿಸಿದರು.

ಪ್ರಮುಖ ನಿರ್ದೇಶನಗಳು

- ಜಿಲ್ಲಾಡಳಿತಗಳು ಪ್ರತಿ ಗ್ರಾಮದ ಕಟ್ಟಕಡೆಯ ಮನೆಗೂ ಔಷಧದ ಕಿಟ್‌ಗಳನ್ನು ತಲುಪಿಸಲು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಬೇಕು.
- ಜಿಲ್ಲಾಧಿಕಾರಿಗಳು, ಡಿ.ಎಚ್.ಒಗಳು ತಾಲ್ಲೂಕುಗಳಿಗೆ ಭೇಟಿ ನೀಡಿ ಔಷಧ ವಿತರಣೆಯ ಬಗ್ಗೆ ಪರಿಶೀಲನೆ ನಡೆಸಬೇಕು.

8ನೇ ಪುಟ ನೋಡಿ

> ಮುನ್ನೆಚ್ಚರಿಕಾ ಕ್ರಮಗಳು ಉತ್ತಮವಾಗಿದ್ದರೆ ಕೋವಿಡ್ ಮೂರನೇ ಅಲೆ ಏರುಗತಿ ತಲುಪಿದರೂ ಆತಂಕ ಪಡದೆ ಯಶಸ್ವಿಯಾಗಿ ಪರಿಸ್ಥಿತಿ ನಿಭಾಯಿಸಬಹುದು
> **ಬಸವರಾಜ ಬೊಮ್ಮಾಯಿ**
> ಮುಖ್ಯಮಂತ್ರಿ

ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

ನವದೆಹಲಿ (ಪಿಟಿಐ): ಅನೇಕ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್–19 ಪರೀಕ್ಷೆಗಳು ಇಳಿಮುಖವಾಗಿರುವ ಬಗ್ಗೆ ಗಮನ ಸೆಳೆದಿರುವ ಕೇಂದ್ರ ಸರ್ಕಾರ, ಪರೀಕ್ಷೆಗಳನ್ನು ಹೆಚ್ಚಿಸಬೇಕು ಎಂದು ಸೂಚಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜಾ ಅವರು ಈ ಸಂಬಂಧ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದಾರೆ.

'ಕೋವಿಡ್ ಪಿಡುಗಿನ ನಿರ್ವಹಣೆಯಲ್ಲಿ ಪರೀಕ್ಷೆಗಳು ಮಹತ್ವದ ಪಾತ್ರ ವಹಿಸುತ್ತವೆ. ಹೊಸ ಕ್ಲಸ್ಟರ್‌ಗಳು/ಹಾಟ್‌ಸ್ಪಾಟ್‌ಗಳನ್ನು ಗುರುತಿಸಿ, ಸೋಂಕು ಪ್ರಸರಣಕ್ಕೆ ಕಡಿವಾಣ ಹಾಕುವ ಸಂಬಂಧ ಕಾರ್ಯತಂತ್ರ ರೂಪಿಸಲು ಅನುಕೂಲವಾಗುವುದು' ಎಂದಿದ್ದಾರೆ.

ಡಬ್ಲ್ಯುಇಎಫ್ ಭಾಷಣದಲ್ಲಿ ತೊಡಕು ಪ್ರಧಾನಿಗೆ ಲೇವಡಿ

ನವದೆಹಲಿ (ಪಿಟಿಐ): ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಕಾರ್ಯಸೂಚಿ ಭಾಷಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಎರಡನೇ ಬಾರಿ ಆರಂಭಿಸಿದ್ದನ್ನು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಲೇವಡಿ ಮಾಡಿದ್ದಾರೆ. 4B

'ಕೋವಿಡ್: ತಪ್ಪು ಮಾಹಿತಿ ಕೊಡುವ ವೈದ್ಯರ ವಿರುದ್ಧ ಕ್ರಮ'

ಬೆಂಗಳೂರು: ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಕೋವಿಡ್ ಕುರಿತು ತಪ್ಪು ಮಾಹಿತಿ ನೀಡುವ ಅಥವಾ ವಾಸ್ತವಕ್ಕೆ ದೂರವಾದ ದತ್ತಾಂಶಗಳನ್ನು ನೀಡುವ ವೈದ್ಯರು, ತಜ್ಞರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ. 4B

ನೌಕೆಯಲ್ಲಿ ಸ್ಫೋಟ ಮೂವರು ಸಿಬ್ಬಂದಿ ಸಾವು

ಮುಂಬೈ (ಪಿಟಿಐ): ಇಲ್ಲಿನ ನೌಕಾಪಡೆಯ ಹಡಗುಕಟ್ಟೆಯಲ್ಲಿ ಮಂಗಳವಾರ ಐಎನ್‌ಎಸ್ ರಣವೀರ್ ನೌಕೆಯಲ್ಲಿ ಸ್ಫೋಟ ಸಂಭವಿಸಿದ್ದು, ನೌಕಾಪಡೆಯ ಮೂವರು ಮೃತಪಟ್ಟು, 11 ಮಂದಿ ಗಾಯಗೊಂಡಿದ್ದಾರೆ. 4B

ದ್ವಿತೀಯ ಪಿಯುಸಿ ಪರೀಕ್ಷೆ: ತಾತ್ಕಾಲಿಕ ವೇಳಾಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯು 2021–22ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಿದೆ.

ಏಪ್ರಿಲ್ 16ರಿಂದ ಮೇ 4ರವರೆಗೂ ಪರೀಕ್ಷೆ ನಿಗದಿಪಡಿಸಲಾಗಿದೆ. ಫೆಬ್ರುವರಿ 1ರವರೆಗೆ jdexam.dpue@gmail.com ಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯು ಮಾರ್ಚ್ 28 ರಿಂದ ಏಪ್ರಿಲ್ 13ರವರೆಗೆ ನಿಗದಿಯಾಗಿದೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಹೊಣೆಯನ್ನು ಆಯಾ ಜಿಲ್ಲೆಗಳ ಉಪನಿರ್ದೇಶಕರಿಗೆ ವಹಿಸಲಾಗಿದೆ.

8ನೇ ಪುಟ ನೋಡಿ

ಡ್ರಗ್ಸ್: ಸಿಎಂ ಮನೆ ಭದ್ರತಾ ಸಿಬ್ಬಂದಿ ಬಂಧನ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್.ಟಿ.ನಗರದ ಖಾಸಗಿ ನಿವಾಸದ ಭದ್ರತಾ ಸಿಬ್ಬಂದಿಯಾಗಿದ್ದ ಇಬ್ಬರು ಪೊಲೀಸರು ಸೇರಿ, ನಾಲ್ವರನ್ನು ಡ್ರಗ್ಸ್ ಸಾಗಣೆ ಆರೋಪದಡಿ ಪೊಲೀಸರು ಬಂಧಿಸಿದ್ದಾರೆ.


ಸಂತೋಷ್


ಶಿವಕುಮಾರ್

ಕೋರಮಂಗಲ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸಂತೋಷ್, ಕಾನ್‌ಸ್ಟೆಬಲ್ ಶಿವಕುಮಾರ್, ಆಟೊ ಚಾಲಕ ಅಮ್ಜದ್ ಬಂಧಿತರು. ಇನ್ನೊಬ್ಬನ ಹೆಸರು ಗೊತ್ತಾಗಿಲ್ಲ.

8ನೇ ಪುಟ ನೋಡಿ

ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚನೆ

ಸಮುದಾಯ ಅಡುಗೆಮನೆ: ಯೋಜನೆ ರೂಪಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಗಳ ಎಲ್ಲೆಡೆ ಸಮುದಾಯ ಅಡುಗೆಮನೆಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿ ಮಾದರಿ ಯೋಜನೆಯೊಂದನ್ನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಮಂಗಳವಾರ ಸೂಚಿಸಿತು.

ಅರ್ಜಿಯೊಂದರ ವಿಚಾರಣೆ ವೇಳೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಹಾಗೂ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ ಈ ನಿರ್ದೇಶನ ನೀಡಿತು.

ಸಮುದಾಯ ಅಡುಗೆಮನೆಗಳ ಸ್ಥಾಪನೆಗೆ ಸಂಬಂಧಿಸಿ ಕೇಂದ್ರ ಸರ್ಕಾರ ಮಾದರಿ ಯೋಜನೆ ರೂಪಿಸಬೇಕು. ಯೋಜನೆಯ ಅನುಷ್ಠಾನ ಜವಾಬ್ದಾರಿಯನ್ನು ರಾಜ್ಯಗಳಿಗೆ ವಹಿಸಬೇಕು ಎಂದೂ ಹೇಳಿತು.

ಅಪೌಷ್ಟಿಕತೆ, ಹಸಿವಿನ ಸಮಸ್ಯೆಯನ್ನು ಬಗೆಹರಿಸಲು ಯಾವುದೇ ಸಿದ್ಧಸೂತ್ರ ಇಲ್ಲ. ಹೀಗಾಗಿ ಸಮುದಾಯ ಅಡುಗೆಮನೆಗಳ ಸ್ಥಾಪನೆಗೆ ಸಂಬಂಧಿಸಿ ಸಾರ್ವತ್ರಿಕ ಯೋಜನೆಯನ್ನೇ ರೂಪಿಸಬೇಕು ಎಂಬುದು ನ್ಯಾಯಾಲಯದ ಅಭಿಮತವಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು. ರಾಜ್ಯಗಳಿಗೆ ಹೆಚ್ಚುವರಿಯಾಗಿ ಆಹಾರ ಧಾನ್ಯಗಳನ್ನು ಪೂರೈಸಲು ಸಾಧ್ಯವೇ ಎಂಬುದರ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲಿಸಲಿ. ಆಹಾರ ಧಾನ್ಯಗಳ ಸಾಗಣೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳೇ ವಹಿಸಿಕೊಳ್ಳಬೇಕು ಎಂದೂ ಸೂಚಿಸಿತು.

ಸ್ಥಳೀಯ ಆಹಾರ ಪದ್ಧತಿಗೆ ಅನುಗುಣವಾಗಿ ರಾಜ್ಯಗಳು ಈ 'ಮಾದರಿ ಯೋಜನೆ'ಯನ್ನು ಬದಲಾಯಿಸಿಕೊಳ್ಳಬಹುದು ಎಂದು ಹೇಳಿದ ನ್ಯಾಯಪೀಠ, ಕರ್ನಾಟಕದಲ್ಲಿ ಆರಂಭಿಸಲಾಗಿರುವ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಉಲ್ಲೇಖಿಸಿತು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಅವರು, 'ಕೇಂದ್ರ ಸರ್ಕಾರ ಈಗಾಗಲೇ 131 ಯೋಜನೆಗಳಿಗೆ ಅನುದಾನ ನೀಡುತ್ತಿದೆ. ಹೀಗಾಗಿ, ದೇಶದಾದ್ಯಂತ ಸಮುದಾಯ ಅಡುಗೆಮನೆಗಳ ಯೋಜನೆಯನ್ನು ಅನುಷ್ಠಾನಗೊಳಿಸಲು ಹಣಕಾಸಿನ ಕೊರತೆಯಾಗಲಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲೆಡೆ ಕಡಿಮೆ ದರದಲ್ಲಿ ಆಹಾರ ಒದಗಿಸುವ ಕ್ಯಾಂಟೀನ್‌ಗಳನ್ನು ಸ್ಥಾಪಿಸಬೇಕು ಎಂದು ಕೋರಿ ಅರುಣ್ ಧವನ್ ಎಂಬುವವರು ಅರ್ಜಿ ಸಲ್ಲಿಸಿದ್ದರು.

ಅರ್ಜಿದಾರ ಪರ ವಕೀಲೆ ಅಸೀಮಾ ಮಾಂಡ್ಲಾ, 'ದೇಶದಾದ್ಯಂತ ಸಮುದಾಯ ಅಡುಗೆಮನೆಗಳ ಸ್ಥಾಪಿಸುವ ಯೋಜನೆ ರೂಪಿಸಲು ತಜ್ಞರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

'ಹಸಿವಿನಿಂದ ಸಾವು ಸಂಭವಿಸಿಲ್ಲ'



ಅರ್ಜಿ ವಿಚಾರಣೆ ವೇಳೆ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು, 'ಹಸಿವಿನಿಂದಾಗಿ ಸಾವುಗಳು ಸಂಭವಿಸಿದ ಬಗ್ಗೆ ರಾಜ್ಯಗಳು ವರದಿ ಮಾಡಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.


ತಮಿಳುನಾಡಿನಲ್ಲಿ 5 ವರ್ಷದ ಮಗು ಹಸಿವಿನಿಂದ ಬಳಲಿ ಮೃತಪಟ್ಟಿದೆ ಎಂಬ ಮಾಧ್ಯಮಗಳ ವರದಿಯನ್ನು ಅವರು ಪ್ರಸ್ತಾಪಿಸಿದರು. 'ಮಗು ಆಹಾರ ಸೇವಿಸಿದ್ದರ ಕುರಿತು ಯಾವುದೇ ಕುರುಹು ಮರಣೋತ್ತರ ಪರೀಕ್ಷೆ ವೇಳೆ ಪತ್ತೆಯಾಗಿರಲಿಲ್ಲ ಎಂಬುದಾಗಿ ವರದಿಯಾಗಿತ್ತು' ಎಂದೂ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ದೇಶದಲ್ಲಿ ಹಸಿನಿಂದಾಗಿ ಸಾವುಗಳು ಸಂಭವಿಸಿಲ್ಲ ಎಂಬುದನ್ನು ನಂಬಬಹುದೇ' ಎಂದು ಅಚ್ಚರಿ ವ್ಯಕ್ತಪಡಿಸಿತು.

'ಹಸಿವಿನ ಸಮಸ್ಯೆಯನ್ನು ನಿರ್ಮೂಲನೆ ಮಾಡಲೇಬೇಕಾಗಿದೆ' ಎಂದ ನ್ಯಾಯಪೀಠ, 'ಚುನಾವಣೆಗಳ ಸಂದರ್ಭದಲ್ಲಿ ವಿವಿಧ ಸೌಲಭ್ಯಗಳನ್ನು ಉಚಿತವಾಗಿ ನೀಡುವುದಾಗಿ ಘೋಷಣೆ ಮಾಡುವ ರಾಜಕೀಯ ಪಕ್ಷಗಳು ಅಪೌಷ್ಟಿಕತೆ ನಿವಾರಣೆಗೆ ಏನೂ ಮಾಡುತ್ತಿಲ್ಲ ಏಕೆ' ಎಂದು ಪ್ರಶ್ನಿಸಿತು.

ಅಪೌಷ್ಟಿಕತೆ ಹಾಗೂ ದೇಶದಲ್ಲಿ ಹಸಿವಿನಿಂದಾಗಿ ಸಂಭವಿಸಿದ ಸಾವುಗಳ ಕುರಿತು ಎಲ್ಲ ರಾಜ್ಯಗಳು ಎರಡು ವಾರಗಳ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆಯೂ ನ್ಯಾಯಪೀಠ ಸೂಚಿಸಿತು.

ಒಳ ಪುಟ



ಪಥಸಂಚಲನಕ್ಕೆ ಹೊಸ ಮೆರುಗು, ರಾಜಪಥಕ್ಕೆ ಸಿಂಗಾರ 9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬುಧವಾರದ ಉಷ್ಣಾಂಶ 28° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ಬಳಿಕ ಶುಭ್ರ ಆಕಾಶ

ಹವಾಮಾನ

ಗುರುವಾರ	ಶುಕ್ರವಾರ	ಶನಿವಾರ
29° 16°	30° 17°	30° 17°

ಹುಂಡೈನಿಂದ ಹೊಸ ಜಾಹೀರಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ ಕಂಪನಿಯು ತನ್ನ ಅಲ್ಕಜಾರ್ ಕಾರಿಗೆ ಸಂಬಂಧಿಸಿದಂತೆ ಶಾರುಖ್ ಖಾನ್ ಮತ್ತು ದೇಶದ ನಾಲ್ವರು ಮಹಿಳಾ ಕ್ರಿಕೆಟ್ ತಾರೆಯರನ್ನು ಒಳಗೊಂಡಿರುವ ಹೊಸ ಟಿ.ವಿ. ಜಾಹೀರಾತಿಗೆ ಚಾಲನೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ಮೃತಿ ಮಂದಣ್ಣ, ಜೆಮಿಮಾ ರಾಡ್ರಿಗಸ್, ತಾನಿಯಾ ಭಾಟಿಯಾ ಮತ್ತು ಶಫಾಲಿ ವರ್ಮ ಈ ಜಾಹೀರಾತಿನಲ್ಲಿ ಇರುವ ಮಹಿಳಾ ಕ್ರಿಕೆಟಿಗರು. 'ಹೊಸ ಜಾಹೀರಾತು, ಮಿಲೆನಿಯಲ್‌ಗಳ ಆಯ್ಕೆಗಳನ್ನು ತೋರಿಸುತ್ತದೆ. ವಿಶ್ವದರ್ಜೆಯ ಉತ್ಪನ್ನಗಳ ಮೂಲಕ ಅತ್ಯುತ್ತಮವಾದುದನ್ನು ಗ್ರಾಹಕರಿಗೆ ನೀಡುವ ಹುಂಡೈನ ಬದ್ಧತೆಯನ್ನೂ ಇದು ಹೇಳುತ್ತದೆ' ಎಂದು ಕಂಪನಿಯ ಮಾರಾಟ, ಮಾರುಕಟ್ಟೆ ಮತ್ತು ಸೇವೆಗಳ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಪ್ರತಿಕ್ರಿಯೆ ನೀಡಿದ್ದಾರೆ.

ಇಂದು ಹುಣಸೆ ಹರಾಜು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಮರಗಳಲ್ಲಿರುವ ಈ ಸಾಲಿನ ಹುಣಸೆ ಫಸಲಿನ ಬಹಿರಂಗ ಹರಾಜು ಜ.19ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ.

ಹರಾಜಿಗೆ ಮುಂಚಿತವಾಗಿ ₹3 ಸಾವಿರ ಠೇವಣಿ ಪಾವತಿಸಬೇಕು. ಕನಿಷ್ಠ ಮೂರು ಮಂದಿ ಸವಾಲುದಾರರು ಬರದಿದ್ದರೆ, ಸದರಿ ಹರಾಜನ್ನು ಮುಂದೂಡಲಾಗುವುದು.

ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಜ್ಞಾನಭಾರತಿಯಲ್ಲಿರುವ ಸಸ್ಯಕ್ಷೇತ್ರ ತೋಟಗಾರಿಕೆ ಇಲಾಖೆ ಅಧೀಕ್ಷರ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೊಳ್ಳುತ್ತಿರುವುದರಿಂದ ಇದೇ 19ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯ ಆಗಲಿರುವ ಸ್ಥಳಗಳು: ಸೂರ್ಯಸಿಟಿ ಎರಡನೇ ಹಂತ, ಹಿಣಕ್ಕಿ ರಾಜಾಪುರ, ರಾಮಕೃಷ್ಣಾಪುರ, ರಿಚ್ಮಂಡ್, ಜೆ.ಆರ್.ಗ್ರೀನ್ ಪಾರ್ಕ್, ಆನೇಕಲ್ ಮುಖ್ಯರಸ್ತೆ, ಮರಸೂರು, ನಾಗಯನಹಳ್ಳಿ, ಸೂರ್ಯನಗರ ಮೊದಲನೇ ಹಂತ ಹಾಗೂ ಸುತ್ತಲಿನ ಪ್ರದೇಶ.

ಬಾಲಾಜಿ ಬಡಾವಣೆ, ವಿಜಯಶ್ರೀ ಬಡಾವಣೆ, [illegible] ಬಡಾವಣೆ, ದೊಡ್ಡಬೆಲೆ ರಸ್ತೆ, ಕೃಷ್ಣ ಗಾರ್ಡನ್, ಅಂದ್ರಹಳ್ಳಿ ಮುಖ್ಯರಸ್ತೆ, ಬೃಂದಾವನ ನಗರ, ಅನ್ನಪೂರ್ಣೇಶ್ವರಿ ನಗರ, ಹೊಸಹಳ್ಳಿ ರಸ್ತೆ, ಗಾಂಧಿನಗರ, ದುಬಾಸಿಪಾಳ್ಯ, ಕೋಡಿಪಾಳ್ಯ, ಉತ್ತರಹಳ್ಳಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಆಗ್ರಹ

'ಕೇರಳ ಕೇಂದ್ರೀಯ ವಿ.ವಿ: ಕನ್ನಡ ವಿಭಾಗ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳದ ಕಾಸರಗೋಡಿನಲ್ಲಿರುವ ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗವನ್ನು ಉಳಿಸಲು ಕ್ರಮವಹಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ಶೋಭಾ ಕರಂದ್ಲಾಜೆ ಅವರಿಗೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. 'ಕಾಸರಗೋಡಿನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರ. ವಿಶ್ವವಿದ್ಯಾಲಯದಲ್ಲಿ ಆರಂಭ ಉಪನ್ಯಾಸಕರೊಬ್ಬರ ನೆರವಿನಿಂದ 11 ವಿದ್ಯಾರ್ಥಿಗಳ ಪ್ರವೇಶಾತಿಯೊಂದಿಗೆ 2018ರಲ್ಲಿ ಕನ್ನಡ ವಿಭಾಗ ಪ್ರಾರಂಭಿಸಲಾಯಿತು. ಈ ವಿಭಾಗವು ಈಗ ತಾನೆ ಸಶಕ್ತವಾಗಿ ಬೆಳೆಯುವ ಹುರುಪಿನಲ್ಲಿ ಇದೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯವು ವಿಭಾಗವನ್ನು ಮುಚ್ಚುವ ಬಗ್ಗೆ ಕ್ರಮವಹಿಸುತ್ತಿದೆ. ಇದರಿಂದಾಗಿ ಉನ್ನತ ಶಿಕ್ಷಣ ಪಡೆಯುವ ಕನ್ನಡದ ವಿದ್ಯಾರ್ಥಿಗಳಲ್ಲಿ ಆತಂಕ ಉಂಟಾಗಿದೆ' ಎಂದು ನಾಗಾಭರಣ ಬೇಸರ ವ್ಯಕ್ತಪಡಿಸಿದ್ದಾರೆ.

'ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಎನ್‌ಟಿಎ ಸಂಸ್ಥೆಯ ಪ್ರವೇಶ ಪರೀಕ್ಷೆಯ ಮೂಲಕ ಮಾಡಲಾಗುತ್ತಿದೆ. ಕನ್ನಡ ವಿಭಾಗಕ್ಕೂ ಪ್ರವೇಶ ಪರೀಕ್ಷೆ ನಡೆಸಬೇಕೆಂಬ ವಾದವನ್ನು ವಿಶ್ವವಿದ್ಯಾಲಯ ಮುಂದಿಡುತ್ತಿದೆ. ಸಾಮಾನ್ಯವಾಗಿ ಭಾಷೆಯಂತಹ ಸ್ನಾತಕೋತ್ತರ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆ ಸೀಮಿತವಾಗಿರುತ್ತದೆ. ಕನ್ನಡ ಮಾತ್ರವಲ್ಲದೇ, ಹಿಂದಿ, ಉರ್ದು, ಮಲೆಯಾಳ ಸೇರಿದಂತೆ ಎಲ್ಲ ಭಾಷೆಗಳಿಗೆ ಈ ಪದ್ಧತಿ ಇದೆ. ಕಳೆದ ವರ್ಷ ನೇರ ಪ್ರವೇಶಾತಿ ಮೂಲಕವೇ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿತ್ತು. ಇದರಿಂದ 18 ವಿದ್ಯಾರ್ಥಿಗಳ ಪ್ರವೇಶಾತಿ ಸಾಧ್ಯವಾಗಿದೆ. ಈ ಬಾರಿಯೂ ನೇರ ಪ್ರವೇಶಾತಿ ಪಡೆಯಲು 10 ವಿದ್ಯಾರ್ಥಿಗಳು ಸಿದ್ಧರಾಗಿದ್ದಾರೆ' ಎಂದು ತಿಳಿಸಿದ್ದಾರೆ.

ಆರೋಗ್ಯ ಇಲಾಖೆ: ಆಂಗ್ಲ ಭಾಷೆಯಲ್ಲಿ ಆದೇಶ

'ಆರೋಗ್ಯ ಇಲಾಖೆಯು ಕೋವಿಡ್‌ಗೆ ಸಂಬಂಧಿಸಿದ ಸುತ್ತೋಲೆ ಹಾಗೂ ಆದೇಶಗಳನ್ನು ಆಂಗ್ಲ ಭಾಷೆಯಲ್ಲಿ ಹೊರಡಿಸುತ್ತಿದೆ. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕು' ಎಂದು ಟಿ.ಎಸ್. ನಾಗಾಭರಣ ಅವರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. 'ಆಂಗ್ಲ ಭಾಷೆಯಲ್ಲಿ ಆದೇಶಗಳನ್ನು ಹೊರಡಿಸಿದರೆ ಗ್ರಾಮೀಣ ಭಾಗದ ಜನರಿಗೆ ಅರ್ಥವಾಗುವುದಿಲ್ಲ. ಈ ಬಗ್ಗೆ ಪ್ರಾಧಿಕಾರಕ್ಕೆ ದೂರುಗಳು ಬಂದಿವೆ. ಸರ್ಕಾರಿ ಆದೇಶಗಳನ್ನು ಕನ್ನಡ ಕಡ್ಡಾಯವಾಗಿ ಹೊರಡಿಸಲು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಜರುಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಆಡಳಿತದ ವೇಗ ಹೆಚ್ಚಲಿ'

ಬೆಂಗಳೂರು: 'ನಾವೀಗ ಡಿಜಿಟಲ್ ಯುಗಕ್ಕೆ ಕಾಲಿಟ್ಟಿದ್ದೇವೆ. ಬೆಳಕಿನ ವೇಗದಲ್ಲಿ ಮಾಹಿತಿ ಪಸರಿಸುವ ಈ ಕಾಲಘಟ್ಟದಲ್ಲಿ ಆಡಳಿತ ಯಂತ್ರವೂ ಚುರುಕು ಪಡೆದುಕೊಳ್ಳಬೇಕು' ಎಂದು ನವದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿಸ್ಟ್ರೇಷನ್‌ನ (ಐಐಪಿಎ) ವ್ಯವಸ್ಥಾಪಕ ನಿರ್ದೇಶಕ ಸುರೇಂದ್ರನಾಥ್ ತ್ರಿಪಾಠಿ ತಿಳಿಸಿದರು.

ಐಐಪಿಎ ಹಾಗೂ ಸಾರ್ವಜನಿಕ ವ್ಯವಹಾರಗಳ ಕೇಂದ್ರ (ಪಿಎಸಿ) ಹಮ್ಮಿಕೊಂಡಿದ್ದ 'ಸಾರ್ವಜನಿಕ ವ್ಯವಹಾರಗಳ ಸೂಚ್ಯಂಕ–ಭಾರತದ ರಾಜ್ಯಗಳಲ್ಲಿ ಆಡಳಿತ' ವಿಷಯದ ಕುರಿತ ವೆಬಿನಾರ್‌ನಲ್ಲಿ ಮಂಗಳವಾರ ಅವರು ಮಾತನಾಡಿದರು.

'ಹಿಂದೆಲ್ಲಾ ಯೋಜನೆಯೊಂದನ್ನು ಸಿದ್ಧಪಡಿಸಲು 100 ದಿನ ತೆಗೆದುಕೊಳ್ಳಲಾಗುತ್ತಿತ್ತು. ಅದು ಮುಗಿದ ಅಧ್ಯಾಯ. ಈಗ ನಾವು ಯೋಜನೆಗಳನ್ನು ರೂಪಿಸಿದಷ್ಟೇ ಕ್ಷಿಪ್ರ ಗತಿಯಲ್ಲಿ ಅವುಗಳನ್ನು ಅನುಷ್ಠಾನಗೊಳಿಸಬೇಕು' ಎಂದರು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ (ಎನ್‌ಐಎಎಸ್) ಪ್ರೊ. ಸುಪ್ರಿಯಾ ರಾಯ್ ಚೌಧರಿ ಮಾತನಾಡಿದರು. ನಿವೃತ್ತ ಐಎಎಸ್ ಅಧಿಕಾರಿ ಕೆ.ಜೈರಾಜ್, ಪಿಎಸಿಯ ಅನ್ನಪೂರ್ಣ ರವಿಚಂದರ್ ಇದ್ದರು.

ಯಶವಂತಪುರ ಕ್ಷೇತ್ರದ ಕಸ ಸಂಸ್ಕರಣಾ ಘಟಕ

ಮೂಲಸೌಕರ್ಯಕ್ಕೆ ಮತ್ತೆ ₹50 ಕೋಟಿ: ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ಕ್ಷೇತ್ರದ ಕಸ ಸಂಸ್ಕರಣಾ ಘಟಕಗಳ ಸುತ್ತಲಿನ ಪ್ರದೇಶಗಳಲ್ಲಿ ₹50 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುಮೋದನೆ ಕೋರಿ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದೆ.

ಪ್ರತಿ ಘಟಕದ ಸುತ್ತ ₹10 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ಅನುದಾನದಲ್ಲಿ ಕಾಮಗಾರಿ ನಡೆಸಲು ಒಪ್ಪಿಗೆ ನೀಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಪ್ರಸ್ತಾವದಲ್ಲಿ ಕೋರಿದ್ದಾರೆ. ಪ್ರಸ್ತಾವವು ಪರಿಶೀಲನೆಯ ಹಂತದಲ್ಲಿದೆ ಎಂದು ನಗರಾಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

'ಬಿಬಿಎಂಪಿಯ ಕಸವನ್ನು ನಗರದ ಹೊರವಲಯದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಹೀಗಾಗಿ, ಆ ಕ್ಷೇತ್ರಗಳ ಅಭಿವೃದ್ಧಿಗೆ (ನೆಲಮಂಗಲ, ದೇವನಹಳ್ಳಿ, ಮಾಗಡಿ, ರಾಮನಗರ) ₹50 ಕೋಟಿ ಅನುದಾನ ನೀಡಲಾಗುತ್ತಿದೆ' ಎಂದು ಮುಖ್ಯಮಂತ್ರಿಯಾಗಿದ್ದ ವೇಳೆ ಎಚ್.ಡಿ.ಕುಮಾರಸ್ವಾಮಿ ಪ್ರಕಟಿಸಿದ್ದರು. ಬಿಜೆಪಿ ಸರ್ಕಾರ ಆ ಅನುದಾನವನ್ನು ತಡೆ ಹಿಡಿದಿತ್ತು. ಬಳಿಕ ಈ ಅನುದಾನವನ್ನು ಯಶವಂತಪುರ ಕ್ಷೇತ್ರದ ಕಸ ಸಂಸ್ಕರಣಾ ಘಟಕಗಳ ಸುತ್ತಲಿನ ಪ್ರದೇಶಗಳ ಅಭಿವೃದ್ಧಿಗೆ ವರ್ಗಾಯಿಸಲಾಗಿತ್ತು. ಇದೀಗ ಮತ್ತೆ ಆ ಪ್ರದೇಶಗಳ ಅಭಿವೃದ್ಧಿಗೆ ಅನುದಾನ ಕೋರಿರುವುದು ಚರ್ಚೆಗೆ ಗ್ರಾಸವಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡಲು 7 ಸಂಸ್ಕರಣಾ ಘಟಕಗಳನ್ನು ಹಾಗೂ ಒಂದು ಭೂಭರ್ತಿ ಘಟಕವನ್ನು ಸ್ಥಾಪಿಸಲಾಗಿದೆ. ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಪ್ರತಿನಿಧಿಸುವ ಯಶವಂತಪುರ ಕ್ಷೇತ್ರದಲ್ಲಿ ದೊಡ್ಡಬಿದರಕಲ್ಲು, ಕನ್ನಹಳ್ಳಿ, ಸೀಗೆಹಳ್ಳಿ, ಸುಬ್ಬರಾಯನಪಾಳ್ಯ ಹಾಗೂ ಲಿಂಗಧೀರನಹಳ್ಳಿಯಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ. ಈ ಘಟಕಗಳಿಂದ ತಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ ಎಂದು ಗ್ರಾಮಸ್ಥರು ಪ್ರತಿಭಟಿಸಿದ್ದರು. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೂಲಸೌಕರ್ಯ ಕಾಮಗಾರಿ ನಡೆಸಿ ಗ್ರಾಮಸ್ಥರ ಮನವೊಲಿಸಿ ಕಸ ಸಂಸ್ಕರಣೆ ಮಾಡುವುದು ಸೂಕ್ತ ಎಂದು ಸಚಿವರು ಬಿಬಿಎಂಪಿಗೆ ಪತ್ರ ಬರೆದಿದ್ದರು.

ಸ್ಥಳೀಯರ ವಿರೋಧದಿಂದಾಗಿ ಸೀಗೆಹಳ್ಳಿ, ಸುಬ್ಬರಾಯನಪಾಳ್ಯ ಹಾಗೂ ಲಿಂಗಧೀರನಹಳ್ಳಿ ಘಟಕಗಳು ಸ್ಥಗಿತಗೊಂಡಿವೆ. ದೊಡ್ಡಬಿದರಕಲ್ಲು ಹಾಗೂ ಕನ್ನಹಳ್ಳಿ ಘಟಕಗಳಲ್ಲಿ ವಿನ್ಯಾಸದ ಸಾಮರ್ಥ್ಯಕ್ಕಿಂತ ಕಡಿಮೆ ಕಸವನ್ನು ಸಂಸ್ಕರಣೆ ಮಾಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಈ ಘಟಕಗಳ ಸ್ಥಾಪನೆಗೆ ಸರ್ಕಾರದ ಹಾಗೂ ಪಾಲಿಕೆ ಅನುದಾನದಿಂದ ವೆಚ್ಚ ಮಾಡಲಾಗಿದೆ. ಹೀಗಾಗಿ, ಘಟಕಗಳನ್ನು ಪುನರಾರಂಭಿಸುವುದು ಸೂಕ್ತ. ಇದಕ್ಕಾಗಿ ಮೂಲಸೌಕರ್ಯ ಕಾಮಗಾರಿಗಳನ್ನು ನಡೆಸಬೇಕು. ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ ಎಂದು ಗೌರವ್ ಗುಪ್ತ ಪ್ರಸ್ತಾವದಲ್ಲಿ ತಿಳಿಸಿದ್ದಾರೆ.

'ತಮ್ಮ ಕ್ಷೇತ್ರದಲ್ಲಿರುವ ಘನತ್ಯಾಜ್ಯ ಘಟಕಗಳ ಅಭಿವೃದ್ಧಿ ಹಾಗೂ ಮೂಲಸೌಕರ್ಯದ ಹೆಸರಿನಲ್ಲಿ ಕೆಲವು ಜನಪ್ರತಿನಿಧಿಗಳು ಹೆಚ್ಚುವರಿ ಅನುದಾನ ಕೋರುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಕಳೆದ 15 ವರ್ಷಗಳಲ್ಲಿ ಘನತ್ಯಾಜ್ಯ ವಿಲೇವಾರಿಗೆ ಮಾಡಿದ ವೆಚ್ಚದ ಬಗ್ಗೆ ಲೆಕ್ಕಪರಿಶೋಧನೆ ನಡೆಸಬೇಕು. ಆಗ ಅನುದಾನ ದುರುಪಯೋಗದ ಸತ್ಯ ಮಾಹಿತಿ ಹೊರ ಬರಲಿದೆ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಸೀಗೇಕುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ಅಕ್ರಮ: ಆರೋಪ

ಬೆಂಗಳೂರು: 'ಮಾಗಡಿ ತಾಲ್ಲೂಕಿನ ಸೀಗೇಕುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಕಾಮಗಾರಿಗಳು ನಡೆಯದೆ, ನಕಲಿ ಬಿಲ್ ಮಾಡಿ ಹಣ ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು' ಎಂದು ಕರ್ನಾಟಕ ರೈತರ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಗುಡ್ಡೇಗೌಡ, '2017-18ನೇ ಸಾಲಿನಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಈ ಪಂಚಾಯಿತಿಗೆ ₹2 ಕೋಟಿ ಅನುದಾನ ಮಂಜೂರಾಗಿತ್ತು. ಕ್ರಿಯಾ ಯೋಜನೆ ತಯಾರಾಗಿ ಐದು ವರ್ಷಗಳು ಕಳೆದರೂ ಶೇ 50ರಷ್ಟು ಕೆಲಸ ಮುಗಿದಿಲ್ಲ. ನರೇಗಾ ಯೋಜನೆಯಡಿ ಪೂರ್ಣಗೊಂಡಿರುವ ಕಾಮಗಾರಿಗಳನ್ನು ಗ್ರಾಮ ವಿಕಾಸ ಯೋಜನೆಗೆ ಸೇರಿಸಿ ನಕಲಿ ಬಿಲ್ ಮಾಡಲಾಗಿದೆ' ಎಂದು ಆರೋಪಿಸಿದರು.

'ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯದ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿದೆ. ಇದರಲ್ಲಿ ಸ್ಥಳೀಯ ಕೆಲ ರಾಜಕೀಯ ಪುಡಾರಿಗಳು ಶಾಮೀಲಾಗಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಸರ್ಕಾರ ಪಾಪರ್ ಆಗಿದ್ರೆ ನಾನೇ ಸಂಬಳ ಕೊಡ್ತೇನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲೆ ಹೊಳೆನರಸೀಪುರ ಸರ್ಕಾರಿ ಕಾಲೇಜಿಗೆ ಎರಡು ಸ್ನಾತಕೋತ್ತರ ಕೋರ್ಸ್‌ಗಳಿಗೆ ಅನುಮತಿ ನೀಡುವ ವಿಷಯದಲ್ಲಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ ಮಧ್ಯೆ ಮಂಗಳವಾರ ವಾಕ್ಸಮರ ನಡೆದಿದೆ.

ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜಿನಲ್ಲಿ ಮನೋವಿಜ್ಞಾನ ಮತ್ತು ಫುಡ್ ಅಂಡ್ ನ್ಯೂಟ್ರಿಷಿಯನ್ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಬೇಕೆಂಬ ಬೇಡಿಕೆ ಈಡೇರಿಸಬೇಕು ಎಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಲು ಶಾಸಕ ಎಚ್.ಡಿ.ರೇವಣ್ಣ ಅವರು ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ'ಗೆ ಬಂದಿದ್ದರು. ಬೇಡಿಕೆ ಈಡೇರಿಸದೇ ಇದ್ದರೆ ಧರಣಿ ಮಾಡುತ್ತೇನೆ ಎಂದೂ ಬೆದರಿಕೆ ಒಡ್ಡಿದರು.

ಈ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ರೇವಣ್ಣ, 'ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಅವಧಿಯಲ್ಲಿ ಕೊಟ್ಟಿದ್ದನ್ನು ಸಚಿವ ಅಶ್ವತ್ಥನಾರಾಯಣ ರದ್ದು ಮಾಡಿದ್ದಾರೆ. ನಮಗೆ ಕೊಟ್ಟಿರುವ ಅನುದಾನವನ್ನು ಬಿಜೆಪಿ ಸರ್ಕಾರ ತಡೆ ಹಿಡಿದಿದೆ. ಬಡವರ ಮಕ್ಕಳು ಓದುವ ಕಾಲೇಜುಗಳಿಗೆ ಏಕೆ ರಾಜಕೀಯ' ಎಂದು ಪ್ರಶ್ನಿಸಿದರು.

'ಸಚಿವರು ಉದ್ದೇಶಪೂರ್ವಕವಾಗಿಯೇ ತಿರಸ್ಕರಿಸಿದ್ದಾರೆ. ಸರ್ಕಾರ ಪಾಪರ್ ಬಿದ್ದಿದ್ದರೆ ನಾನೇ ಟೀಚರ್‌ಗಳಿಗೆ ಸಂಬಳ ಕೊಡುತ್ತೇನೆ. ಬೇಕಿದ್ದರೆ ಛಾಪಾ ಕಾಗದದ ಮೇಲೂ ಬರೆದುಕೊಡಲು ಸಿದ್ಧನಿದ್ದೇನೆ' ಎಂದು ರೇವಣ್ಣ ಸವಾಲು ಹಾಕಿದರು.

'ಇವರಿಗೆ ಖಾಸಗಿ ಕಾಲೇಜುಗಳಿಗೆ ಅನುಮತಿ ಕೊಡಲು ಆಗುತ್ತದೆ. ಆದರೆ, ಸರ್ಕಾರಿ ಕಾಲೇಜಿಗೆ ಕೊಡಲು ಆಗಲ್ಲ. ಕೆಲವರಿಗೆ ₹300 ರಿಂದ ₹400 ಕೋಟಿ ನಿಯಮ ಮೀರಿ ಅನುದಾನ ಕೊಟ್ಟಿದ್ದಾರೆ' ಎಂದು ಅವರು ಗುಡುಗಿದರು.

'ಇವೆರಡೂ ಕೋರ್ಸ್‌ಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅಗತ್ಯವಿದೆ. ಈ ಕೋರ್ಸ್‌ಗಳ ಬೋಧನೆಗೆ ಉಪನ್ಯಾಸಕರಿಗೆ ನೀಡಬೇಕಾಗುವ ವೇತನ ವೆಚ್ಚವನ್ನು ತಾತ್ಕಾಲಿಕವಾಗಿ ಸಿಡಿಸಿ ಸಮಿತಿ ಅಥವಾ ಸ್ವಂತ ಖರ್ಚಿನಲ್ಲಿ ಭರಿಸುತ್ತೇನೆ' ಎಂದೂ ರೇವಣ್ಣ ಹೇಳಿದರು.



ಹಾಸನ ಜಿಲ್ಲೆ ಹೊಳೆನರಸೀಪುರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಮಂಗಳವಾರ ಧರಣಿ ನಡೆಸಲು ಮುಂದಾಗಿದ್ದ ಕ್ಷಣ


ಹೊಳೆನರಸೀಪುರದಲ್ಲಿ ಎಷ್ಟು ಕಾಲೇಜುಗಳಿವೆ?

ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ 8 ಸರ್ಕಾರಿ ಪ್ರಥಮ ದರ್ಜೆ, 6 ಸ್ನಾತಕೋತ್ತರ, 3 ಪಾಲಿಟೆಕ್ನಿಕ್, 1 ಸರ್ಕಾರಿ ಎಂಜಿನಿಯರಿಂಗ್ ಮತ್ತು 5 ಐಟಿಐ ಕಾಲೇಜುಗಳಿವೆ ಎಂದು ಸಚಿವ ಅಶ್ವತ್ಥನಾರಾಯಣ ಹೇಳಿದರು.

ಕಳೆದ ಐದು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಿಗೆ ₹65.40 ಕೋಟಿ ಮತ್ತು ಸಾಧನ ಸಲಕರಣೆಗಳ ಖರೀದಿಗೆ ₹93.26 ಲಕ್ಷ ನೀಡಲಾಗಿದೆ. ಅಲ್ಲದೆ ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಿಗೆ ₹84 ಕೋಟಿ ಹಾಗೂ ಸಾಧನ ಸಲಕರಣೆಗಳಿಗೆಂದು ₹1.80 ಕೋಟಿ ಕೊಡಲಾಗಿದೆ ಅಂದ ಮೇಲೆ ರಾಜಕೀಯ ಅಥವಾ ತಾರತಮ್ಯದ ಮಾತು ಎಲ್ಲಿಂದ ಬಂತು ಎಂದು ಅವರು ಪ್ರಶ್ನಿಸಿದರು.

'ಚೆನ್ನವೀರ ಕಣವಿ ವೈದ್ಯಕೀಯ ವೆಚ್ಚ ಭರಿಸಿ'

ಪ್ರಜಾವಾಣಿ ವಾರ್ತೆ



ಚೆನ್ನವೀರ ಕಣವಿ

ಬೆಂಗಳೂರು: 'ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಸಾಹಿತಿ ಚೆನ್ನವೀರ ಕಣವಿ ಅವರ ವೈದ್ಯಕೀಯ ವೆಚ್ಚವನ್ನು ಸರ್ಕಾರ ಭರಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. 'ಕಣವಿ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದು, ಧಾರವಾಡದ ಎಸ್.ಡಿ.ಎಂ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಇರಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಗೌರವ ಸಂಕೇತವಾಗಿ ಅವರ ಚಿಕಿತ್ಸೆಯ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.


ಡಾ. ಕಣವಿ ಆರೋಗ್ಯದಲ್ಲಿ ತುಸು ಏರುಪೇರು

ಧಾರವಾಡ: ಹಿರಿಯ ಕವಿ ಡಾ. ಚೆನ್ನವೀರ ಕಣವಿ ಅವರ ಆರೋಗ್ಯದಲ್ಲಿ ತುಸು ಏರುಪೇರು ಉಂಟಾಗಿದ್ದು, ವೈದ್ಯಕೀಯ ಆಮ್ಲಜನಕದ ಪ್ರಮಾಣವನ್ನು 8 ಲೀ. ಗೆ ಹೆಚ್ಚಿಸಲಾಗಿದೆ ಎಂದು ಮಂಗಳವಾರ ರಾತ್ರಿ ಎಸ್‌ಡಿಎಂ ಆಸ್ಪತ್ರೆ ಬುಲೆಟಿನ್ ತಿಳಿಸಿದೆ.

ಸೋಮವಾರ ಅವರಿಗೆ 4 ಲೀ. ಆಮ್ಲಜನಕ ನೀಡಲಾಗುತ್ತಿತ್ತು. ಆ ಪ್ರಮಾಣವನ್ನು ಮಂಗಳವಾರ ದುಪ್ಪಟ್ಟು ಮಾಡಲಾಗಿದೆ. ಡಾ. ಕಣವಿ ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ಹೇಳಲಾಗಿದೆ.

ಸಂಸ್ಕೃತದ ಮಮತೆ ತುಳು-ಕೊಡವ ಭಾಷೆಗಳಿಗೂ ಕೊಡಿ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ



ಹರಿಪ್ರಸಾದ್

ಬೆಂಗಳೂರು: 'ಬಿಜೆಪಿ ಸರ್ಕಾರ ಕೇವಲ 24,821 ಮಂದಿ ಸಂಸ್ಕೃತ ಭಾಷಿಗರ ಮೇಲೆ ತೋರಿಸುತ್ತಿರುವ ಅಗಾಧ ಮಮತೆಯನ್ನು ರಾಜ್ಯದಲ್ಲಿ ಮೂಲೆಗುಂಪಾಗಿರುವ ತುಳು ಮತ್ತು ಕೊಡವ ಭಾಷೆಗಳ ಮೇಲೆ ತೋರಿಸಲಿ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದ್ದಾರೆ.

'2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 18,46,427 ಮಂದಿ ತುಳು ಭಾಷೆ ಮಾತನಾಡುವವರು ಹಾಗೂ 1,13,857 ಮಂದಿ ಕೊಡವ ಭಾಷೆ ಮಾತನಾಡುವ ಜನರಿದ್ದಾರೆ. ಆದರೆ, ಇದಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿರುವ ಸಂಸ್ಕೃತ ಭಾಷಿಗರ ಮೇಲೆ ಬಿಜೆಪಿ ಸರ್ಕಾರ ಅಗಾಧ ಪ್ರೀತಿ ತೋರಿಸುತ್ತಾ ಬಂದಿದೆ. ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವಿದೆ, ಅದಕ್ಕೆ ಬೇಕಾದ ಎಲ್ಲ ಸೌಕರ್ಯಗಳನ್ನೂ ನೀಡಲಾಗಿದೆ. ಆದರೆ, ತುಳು ಮತ್ತು ಕೊಡವ ಭಾಷೆಗಳ ಅಭಿವೃದ್ಧಿಯನ್ನು ನಿರ್ಲಕ್ಷ್ಯಿಸಲಾಗಿದೆ' ಎಂದು ದೂರಿದ್ದಾರೆ.

'ಭಾಷಾವಾರು ಪ್ರಾಂತ್ಯ ರಚನೆಯಾದಾಗ ಪ್ರಭಾವಿ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ಬಂದವು. ಆದರೆ, ಅವುಗಳ ಆಶ್ರಯದಲ್ಲಿರುವ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾಗಿವೆ. ದೇಶದಲ್ಲಿ ಹಲವಾರು ರಾಜ್ಯಗಳು ಒಂದಕ್ಕೂ ಹೆಚ್ಚು ಭಾಷೆಗಳನ್ನು ಅಧಿಕೃತವಾಗಿ ಘೋಷಿಸಿಕೊಂಡಿವೆ. ರಾಜ್ಯದಲ್ಲಿ ಕನ್ನಡ ಹೊರತುಪಡಿಸಿ ಬೇರೆ ಭಾಷೆಗಳಿಗೆ ಅಧಿಕೃತ ಸ್ಥಾನ ನೀಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಲಕ್ಷಾಂತರ ಮಂದಿ ಪ್ರತಿನಿತ್ಯ ಮಾತನಾಡುವ ಕೊಡವ, ತುಳು ಭಾಷೆಗಳನ್ನು ರಾಜ್ಯದ ಅಧಿಕೃತ ಭಾಷೆಗಳೆಂದು ಮಾನ್ಯ ಮಾಡಬೇಕು. ಸಂಸ್ಕೃತಕ್ಕೆ ನೀಡುತ್ತಿರುವಷ್ಟೇ ಮಹತ್ವವನ್ನು ಕನ್ನಡ, ತುಳು ಹಾಗೂ ಕೊಡವ ಭಾಷೆಗಳಿಗೂ ನೀಡಬೇಕು. ಆ ಮೂಲಕ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಎನ್ನುವ ನೀತಿಯನ್ನು ಬಿಡಬೇಕು. ನಮ್ಮ ಭಾಷೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕು' ಎಂದೂ ಒತ್ತಾಯಿಸಿದ್ದಾರೆ.

ಸಂಸ್ಕೃತಕ್ಕೂ ಮಹತ್ವ ನೀಡಬೇಕು: ಬ್ರಾಹ್ಮಣ ಮಹಾಸಭಾ

'ಕನ್ನಡ ಮತ್ತು ಸಂಸ್ಕೃತ ಪರಸ್ಪರ ಪೂರಕ ಭಾಷೆಗಳು. ಒಂದರಿಂದ ಮತ್ತೊಂದಕ್ಕೆ ಹಾನಿಯಿಲ್ಲ. ಹಾಗಾಗಿ, ನಾವು ಸಮನ್ವಯತೆಯ ಸೂತ್ರ ಅನುಸರಿಸಬೇಕು. ಸಂಸ್ಕೃತಕ್ಕೂ ಮಹತ್ವ ನೀಡಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ತಿಳಿಸಿದ್ದಾರೆ.

'ಕನ್ನಡದ ಪರ ಎಲ್ಲರೂ ನಿಲ್ಲಬೇಕು. ಮನೆ ಮನೆಗಳಲ್ಲಿ, ಶಿಕ್ಷಣದಲ್ಲಿ ಕನ್ನಡ ಅರಳಬೇಕು. ಹಾಗೆಯೇ ಸಂಸ್ಕೃತ ಸಕಲ ಭಾರತೀಯರ ಭಾಷೆ. ಅದನ್ನು ವಿರೋಧಿಸುವುದರಿಂದ ಕನ್ನಡದ ಅಭಿವೃದ್ಧಿ ಸಾಧ್ಯ ಎಂದುಕೊಳ್ಳಬಾರದು. ದೇಶದ ಎಲ್ಲ ಭಾಷೆಗಳು ಸಂಸ್ಕೃತದ ಮಡಿಲಲ್ಲಿ ಬೆಳೆದಿರುವುದನ್ನು ಮರೆಯಬಾರದು' ಎಂದು ಹೇಳಿದ್ದಾರೆ.

'ಇಂಗ್ಲಿಷ್ ಅನ್ನು ಭಾರತದ 'ಲಿಂಕ್ ಭಾಷೆ' ಎಂದು ಒಪ್ಪಿಕೊಂಡಿರುವ ನಾವು, ನಮ್ಮದೇ ಸಂಸ್ಕೃತದ ವಿರುದ್ಧ ಹರಿಹಾಯುವುದರಲ್ಲಿ ಅರ್ಥವಿಲ್ಲ. ವಿಶ್ವದ ಅತ್ಯಂತ ವೈಜ್ಞಾನಿಕ ಭಾಷೆ ಎನಿಸಿರುವ ಸಂಸ್ಕೃತದ ಕುರಿತು ಮಿಥ್ಯ, ಆರೋಪಗಳು ಮಾಡುವುದು ಬೇಡ'.

'ಭಾಷೆಯ ವಿಷಯದಲ್ಲಿ ಸರಿಯಾದ ಚಿಂತನೆ ಮೂಲಕ ಮಾತ್ರ ಅರಳಲು ಸಾಧ್ಯವೇ ಹೊರತು ಅನವಶ್ಯಕ ಗೋಜಲುಗಳಿಂದ ಅಲ್ಲ. ಈಗ ಕನ್ನಡದ ಹೆಸರಿನಲ್ಲಿ ಸಂಸ್ಕೃತದ ವಿರುದ್ಧ ದನಿ ಎತ್ತಿರುವ ಕೆಲವರು ಇದನ್ನು ಗ್ರಹಿಸಬೇಕು' ಎಂದೂ ಹೇಳಿದ್ದಾರೆ.

ಬಂದ್ ನಷ್ಟ: ಕಮಿಷನರ್ ನೇಮಕ

ಬೆಂಗಳೂರು: 'ಮಹದಾಯಿ ನ್ಯಾಯಮಂಡಳಿ ತೀರ್ಪು ವಿರೋಧಿಸಿ 2018ರಲ್ಲಿ ನಡೆದ ಬಂದ್ ಹಾಗೂ ಜಾರಿ ನಿರ್ದೇಶನಾಲಯದಿಂದ ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಬಂಧನವಾಗಿದ್ದ ವೇಳೆ ಅದನ್ನು ಖಂಡಿಸಿ 2019ರಲ್ಲಿ ನಡೆದ ಪ್ರತ್ಯೇಕ ಬಂದ್‌ಗಳ ಸಂದರ್ಭದಲ್ಲಿ ಉಂಟಾದ ಆಸ್ತಿಪಾಸ್ತಿ ನಷ್ಟದ ಅಂದಾಜು ಮಾಡಲು ಕ್ಲೇಮ್ ಕಮಿಷನರ್‌ಗಳನ್ನು ನೇಮಕ ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಡಿ.ಕೆ. ಶಿವಕುಮಾರ್ ಬಂಧನ ವಿರೋಧಿಸಿ ನಡೆದ ಬಂದ್ ಮತ್ತು ಪ್ರತಿಭಟನೆಯಿಂದ ಉಂಟಾದ ನಷ್ಟವನ್ನು ಅಂದಾಜಿಸಲು ನೇಮಿಸಿರುವ ಕ್ಲೇಮ್ ಕಮಿಷನರ್ ರಾಮನಗರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ಕಚೇರಿ ಹಾಗೂ ಮೂಲಸೌಕರ್ಯ ಒದಗಿಸಲಾಗಿದೆ. ಮತ್ತೊಂದು ಬಂದ್‌ಗೆ ಸಂಬಂಧಿಸಿದಂತೆಯೂ ಕ್ಲೇಮ್ ಕಮಿಷನರ್ ನೇಮಕ ಮಾಡಲಾಗಿದೆ. ಇವರೆಡರ ಪ್ರಗತಿ ವರದಿ ಸಲ್ಲಿಸಲು ಕಾಲಾವಕಾಶ ಬೇಕು' ಎಂದು ಸರ್ಕಾರಿ ವಕೀಲರು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆ ಮುಂದೂಡಿದೆ.

'ಪಾದಚಾರಿ ಸ್ನೇಹಿ ರಸ್ತೆ' ಕೇಂದ್ರದ ಯೋಜನೆಗೆ ಬೆಂಗಳೂರು ಆಯ್ಕೆ

ನವದೆಹಲಿ (ಪಿಟಿಐ): ರಸ್ತೆಗಳನ್ನು 'ಪಾದಚಾರಿ ಸ್ನೇಹಿ'ಯಾಗಿ ಅಭಿವೃದ್ಧಿಪಡಿಸುವ ಉದ್ದೇಶದ 'ಸ್ಟ್ರೀಟ್ಸ್ ಫಾರ್ ಪೀಪಲ್ ಚಾಲೆಂಜ್' ಯೋಜನೆ ಜಾರಿಗೆ ಪ್ರಾಯೋಗಿಕವಾಗಿ ಬೆಂಗಳೂರು ಸೇರಿ 11 ನಗರಗಳನ್ನು ಕೇಂದ್ರ ಆಯ್ಕೆ ಮಾಡಿದೆ.

ಕೇಂದ್ರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು ಈ ಯೋಜನೆ ಕಾರ್ಯಗತಗೊಳಿಸುತ್ತಿದ್ದು ಗುರುಗ್ರಾಮ, ಕೊಚ್ಚಿ, ಕೊಹಿಮಾ, ನಾಗಪುರ, ಪಿಂಪ್ರಿ, ಚಿಂಚ್‌ವಾಡ್, ಪುಣೆ, ಉದಯ್‌ಪುರ, ಉಜ್ಜಯಿನಿ ಮತ್ತು ವಿಜಯವಾಡ, ಔರಂಗಾಬಾದ್ ನಗರಗಳು ಆಯ್ಕೆಯಾಗಿವೆ ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

ಪಾದಚಾರಿಗಳಿಗೆ ಪ್ರಾಮುಖ್ಯತೆ ಸಿಗುವಂತೆ ಪ್ರಮುಖ ರಸ್ತೆಗಳನ್ನು ಸಜ್ಜುಗೊಳಿಸುವುದು ಇದರ ಉದ್ದೇಶ. ಇದಕ್ಕಾಗಿ ಗುರುತಿಸಿದ್ದ 38 ನಗರಗಳಲ್ಲಿ 11 ನಗರಗಳು ಆಯ್ಕೆಯಾಗಿವೆ. ಈ ನಗರಗಳಿಗೆ ತಲಾ ₹ 50 ಲಕ್ಷ ನೆರವು ಸಿಗಲಿದೆ.

ಬಡಾವಣೆಗಳಲ್ಲಿನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆಗಳನ್ನು ಭಾಗಿಯಾಗಿಸಿಕೊಂಡು ಸಾರ್ವಜನಿಕ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮ ಜಾರಿಗೆ ಬೆಂಗಳೂರು ನಗರವನ್ನು ಆಯ್ಕೆ ಮಾಡಲಾಗಿದೆ.

ಅಲ್ಲದೆ, 'ನೆರೆಹೊರೆ ಪೋಷಣೆ ಸವಾಲು' ಯೋಜನೆಯಡಿ ಮಕ್ಕಳಿಗೆ ಉತ್ತಮ ವಾತಾವರಣ ಕಲ್ಪಿಸಲಿದ್ದು, ಅಂಗನವಾಡಿ, ಶೌಚಾಲಯ, ಆಟದ ತಾಣವನ್ನು ಮಕ್ಕಳ ಖುಷಿಗೆ ಪೂರಕವಾಗಿ ರೂಪಿಸುವುದು ಇದರಲ್ಲಿ ಸೇರಿದೆ. ಈ ಯೋಜನೆಗೂ ಬೆಂಗಳೂರು ಆಯ್ಕೆಯಾಗಿದೆ. ನೆರೆಹೊರೆ ಉದ್ಯಾನ ಅಭಿವೃದ್ಧಿ ಯೋಜನೆಯಡಿ ಮಕ್ಕಳಿಗೆ ಅನುವಾಗುವಂತೆ ಉದ್ಯಾನ ಅಭಿವೃದ್ಧಿಪಡಿಸಲಿದ್ದು, ಇದಕ್ಕೆ ಕರ್ನಾಟಕದ ಹುಬ್ಬಳ್ಳಿ-ಧಾರವಾಡ ಸೇರಿದಂತೆ ದೇಶದ ಎಂಟು ನಗರಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದೆ.

ಬಿಇಎಂಎಲ್ ಖಾಸಗೀಕರಣ: ತಡೆಗೆ ಹೈಕೋರ್ಟ್ ನಕಾರ

ಬೆಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ 'ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್' (ಬಿಇಎಂಎಲ್) ಕಂಪನಿಯನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಬೇಕು ಎಂಬ ಮನವಿಯನ್ನು ಹೈಕೋರ್ಟ್ ತಳ್ಳಿಹಾಕಿದೆ.

ಈ ಸಂಬಂಧ ಬಿಇಎಂಎಲ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ರುದ್ರಯ್ಯ ಸೇರಿದಂತೆ ನಾಲ್ವರು ಪದಾಧಿಕಾರಿಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್, 'ಖಾಸಗೀಕರಣ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಬೇಕು ಅಥವಾ ಯಥಾಸ್ಥಿತಿ ಕಾಯ್ದುಕೊಳ್ಳಲು ಮಧ್ಯಂತರ ಆದೇಶ ಹೊರಡಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ನಿರಾಕರಿಸಿದ ನ್ಯಾಯಪೀಠ, ಕೇಂದ್ರ ಹಣಕಾಸು ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಮತ್ತು ಬಿಇಎಂಎಲ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆಬ್ರುವರಿ 10ಕ್ಕೆ ಮುಂದೂಡಿತು.

ಅನ್ನ-ಅಕ್ಷರದ ಮಹತ್ವ ಸಾರಿದ್ದ ಗುರುಗಳು: ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಟ್ಯಂತರ ಜನರಿಗೆ ಅನ್ನ, ಅಕ್ಷರ ಮತ್ತು ಆಶ್ರಯ ನೀಡುವ ಮೂಲಕ ಅವುಗಳ ಮಹತ್ವವನ್ನು ವಿಶ್ವಕ್ಕೆ ಸಾರಿದ ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ಶಿವಕುಮಾರ ಸ್ವಾಮೀಜಿ ಸಮಾಜದ ಎರಡು ಕಣ್ಣುಗಳು ಇದ್ದಂತೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ವಿ.ಸೋಮಣ್ಣ ಪ್ರತಿಷ್ಠಾನದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಬಾಲಗಂಗಾಧರನಾಥ ಸ್ವಾಮಿ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಾಲಗಂಗಾಧರನಾಥ ಸ್ವಾಮೀಜಿ ನನ್ನ ಜೀವನಕ್ಕೆ ಶಕ್ತಿ ತುಂಬಿ, ಇಂದು ಸಚಿವನಾಗಿ ಸಮಾಜ ಸೇವೆ ಮಾಡಲು ಪ್ರೇರಣೆ ನೀಡಿದರು. 29 ವರ್ಷಗಳಿಂದ ಪಾಳು ಬಿದ್ದ ಜಾಗವನ್ನು ಸುಂದರವಾದ ಬಿ.ಜಿ.ಎಸ್.ಕ್ರೀಡಾಂಗಣ ಮಾಡಲು ಅವರ ಆಶೀರ್ವಾದವೇ ಕಾರಣ' ಎಂದರು.

'ಅವರ ಮಾರ್ಗದರ್ಶನದಿಂದ ದೀಪಾಂಜಲಿ ನಗರದ ಕೊಳೆಗೇರಿ ಅಭಿವೃದ್ಧಿ, ಬಾಳಯ್ಯನ ಕೆರೆ ಸಂರಕ್ಷಣೆ ಹಾಗೂ 2 ಕೋಟಿ ಸಸಿ ನೆಡುವ ಕಾರ್ಯಗಳು ಯಶಸ್ವಿಯಾದವು' ಎಂದು ಹೇಳಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ,'ಗುರುಗಳ ಬಳಿ ಸೇವಾ ಮನೋಭಾವದಿಂದ ಸಮರ್ಪಣೆ ಮಾಡಿದವರಿಗೆ ಅವರ ಸಂಪೂರ್ಣ ಆಶೀರ್ವಾದ ಲಭಿಸುತ್ತದೆ. ನಾನು ಎಂಬುದನ್ನು ಬಿಟ್ಟರೆ ಸಮಾಜದ ಅಭಿವೃದ್ಧಿ ಸಾಧ್ಯ' ಎಂದರು.

ಆದಿಚುಂಚನಗಿರಿ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ,'ಸಮಾಜ ಸುಧಾರಣೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಬಾಲಗಂಗಾಧರನಾಥ ಸ್ವಾಮೀಜಿ ಜಾತಿ, ಮತಗಳನ್ನು ನೋಡದೆ ಸಮಾಜಕ್ಕೆ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿದ್ದರು' ಎಂದರು.



ಕಾರ್ಯಕ್ರಮದಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಸಚಿವರಾದ ಮುನಿರತ್ನ, ವಿ.ಸೋಮಣ್ಣ, ಶಿವರುದ್ರ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ವಿ.ಸೋಮಣ್ಣ, ಪದಾಧಿಕಾರಿಗಳಾದ ಬಿ.ಎಸ್‌.ನವೀನ್, ಅರುಣ್ ಸೋಮಣ್ಣ, ಪಾಲನೇತ್ರ, ಗೋವಿಂದರಾಜನಗರ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ ಇದ್ದಾರೆ ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಆರ್‌ಪಿಐ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ಹಾಗೂ ಮುಖಂಡರ ಸಮಾವೇಶ: ಉದ್ಘಾಟನೆ–ಎಂ.ವೆಂಕಟಸ್ವಾಮಿ, ಅಧ್ಯಕ್ಷತೆ–ಪಿ.ಪಿಳ್ಳರಾಜು ಬೋಸಪ್ಪ, ಅತಿಥಿಗಳು–ಇಂಡ್ಲವಾಡಿ ಬಸವರಾಜು, ರವೀಂದ್ರನಾಥ್, ಮಂಜುನಾಥ್, ಆಯೋಜನೆ–ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ), ಸ್ಥಳ–ತಾಮರ ಸಭಾಂಗಣ, ಮೌರ್ಯ ಹೋಟೆಲ್, ಬೆಳಿಗ್ಗೆ 11

ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಕುರಿತು ದುಂಡು ಮೇಜಿನ ಸಭೆ: ಸಾನ್ನಿಧ್ಯ–ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ–ಎಂ.ಪಿ.ಕುಮಾರಸ್ವಾಮಿ, ಅತಿಥಿಗಳು–ಶಾಸಕರಾದ ಎನ್. ಮಹೇಶ್, ಪಿ.ರಾಜೀವ್, ಎಚ್. ಕೆ.ಕುಮಾರಸ್ವಾಮಿ, ಬಿ.ಹರ್ಷವರ್ಧನ್, ಎನ್.ಲಿಂಗಣ್ಣ, ಅಬ್ಬಯ್ಯ ಪ್ರಸಾದ್, ಪಿ.ಟಿ.ಪರಮೇಶ್ವರ ನಾಯಕ್, ಎಂ.ಚಂದ್ರಪ್ಪ, ಅನಿಲ್ ಚಿಕ್ಕಮಾದು, ಡಿ.ಎಸ್.ಹೂಲಗೇರಿ, ಬಾಲಚಂದ್ರ ಜಾರಕಿಹೊಳಿ, ಆಯೋಜನೆ–ಪಿಟಿಸಿಎಲ್ ಕಾಯ್ದೆ ಸಂರಕ್ಷಣಾ ಸಮಿತಿ, ಸ್ಥಳ–ಶಾಸಕರ ಭವನ–2ರ ಸಭಾಂಗಣ, ಮಧ್ಯಾಹ್ನ 2.30

'ಚದುರಂಗ ಮತ್ತು ಕತ್ತೆ' ನಾಟಕ ಪ್ರದರ್ಶನ: ನಿರ್ದೇಶನ–ಅಭಿಮನ್ಯು ಭೂಪತಿ, ಕನ್ನಡಕ್ಕೆ–ಡಿ.ಎಸ್.ಚೌಗಲೆ, ಮೂಲ–ಚಂ.ಪ್ರ.ದೇಶಪಾಂಡೆ, ಆಯೋಜನೆ–ಪಂಚಮುಖಿ ನಟರ ಸಮೂಹ, ಸ್ಥಳ–ರಂಗಶಂಕರ, ಜೆ.ಪಿ. ನಗರ 2ನೇ ಹಂತ, ಸಂಜೆ 7.30

ಉದ್ಯೋಗ ವಾಣಿ

ಶಾಲಾ–ಕಾಲೇಜುಗಳಲ್ಲಿ ನೇತಾಜಿ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ನೇತಾಜಿ ಸುಭಾಷ್ ಚಂದ್ರಬೋಸ್ ಅವರ 125 ನೇ ಜಯಂತಿಯನ್ನು ಎಲ್ಲ ಶಾಲಾ–ಕಾಲೇಜುಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಜಯಂತಿ ಕಾರ್ಯಕ್ರಮ(ಜ.23) ಪೂರ್ವಭಾವಿ ಸಿದ್ಧತೆಗಳ ಕುರಿತು ಮಂಗಳವಾರ ಹಿರಿಯ ಅಧಿಕಾರಿಗಳ ಜತೆ ವರ್ಚುವಲ್ ಮೂಲಕ ಸಭೆ ನಡೆಸಿದ ಸಭೆಯಲ್ಲಿ ಈ ವಿಷಯ ತಿಳಿಸಿದರು.

ರಾಜ್ಯದ ಎಲ್ಲ ಶಾಲಾ–ಕಾಲೇಜುಗಳಲ್ಲಿ ವರ್ಷವಿಡೀ ಸುಭಾಷ್ ಚಂದ್ರಬೋಸ್ ಅವರ ಕುರಿತದಾದ ಕಾರ್ಯಕ್ರಮಗಳನ್ನು ಆಚರಣೆ ಮಾಡಲು ತೀರ್ಮಾನಿಸಲಾಗಿದೆ ಎಂದರು.

ಇನಾಂ ಜಮೀನಿಗೆ ಅರ್ಜಿ ವರ್ಷ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನಾಂ ಜಮೀನುಗಳ ಮರು ಮಂಜೂರಾತಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ. ಈ ಕ್ರಮದಿಂದ ಸಾವಿರಾರು ರೈತರಿಗೆ ಅನುಕೂಲವಾಗಲಿದೆ.

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಕಂದಾಯ ಸಚಿವ ಆರ್.ಅಶೋಕ ಅವರು ಈ ಬಗ್ಗೆ ತಿದ್ದುಪಡಿ ಮಸೂದೆ ಮಂಡಿಸಿದ್ದರು. ಈ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಏನಿದು?: ರಾಜ್ಯದಲ್ಲಿ ಸುಮಾರು 70 ಸಾವಿರ ಎಕರೆ ಇನಾಂ ಜಮೀನು ಇದೆ. ಹಿಂದೆ ರಾಜ–ಮಹಾರಾಜರು ಹಾಗೂ ಬ್ರಿಟಿಷರ ಕಾಲದಲ್ಲಿ ನೂರಾರು ಎಕರೆ ಜಮೀನನ್ನು ಹಲವರಿಗೆ ಇನಾಂ ರೂಪದಲ್ಲಿ ನೀಡಿದ್ದರು. ಈ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ಪಹಣಿ ಕೊಡುವ ಕೆಲಸ ಸರ್ಕಾರದಿಂದ ನಡೆಯುತ್ತಿತ್ತು ಎಂದು ಅಶೋಕ ಹೇಳಿದರು. ಆದರೆ, ಈ ಬಗ್ಗೆ ಮಾಹಿತಿ ಇಲ್ಲದೇ ಲಕ್ಷಾಂತರ ರೈತರು ಸಮಸ್ಯೆ ಒಳಗಾಗಿದ್ದರು. ಈ ಬಗ್ಗೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿ ವರದಿ ಆಧರಿಸಿ ಮಸೂದೆ ಮಂಡನೆಯಾಗಿತ್ತು.

ಖುಷಿಕುಮಾರ ಸ್ವಾಮೀಜಿ ಬಂಧನ



ಖುಷಿಕುಮಾರ ಸ್ವಾಮೀಜಿ

ಶ್ರೀರಂಗಪಟ್ಟಣ, ಮಂಡ್ಯ: 'ಐತಿಹಾಸಿಕ ಜಾಮಿಯಾ ಮಸೀದಿ ಒಡೆದು ಹನುಮ ಮಂದಿರ ನಿರ್ಮಿಸಬೇಕು' ಎಂಬ ಹೇಳಿಕೆ ನೀಡಿರುವ ಕಾಳಿಮಠದ ಖುಷಿಕುಮಾರ ಸ್ವಾಮೀಜಿಯನ್ನು ಮಂಗಳವಾರ ಪಟ್ಟಣ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಕಾಳಿಮಠದಲ್ಲಿದ್ದ ಸ್ವಾಮೀಜಿಯನ್ನು ಮಂಗಳವಾರ ನಸುಕಿನಲ್ಲಿ ಬಂಧಿಸಿ ಶ್ರೀರಂಗಪಟ್ಟಣಕ್ಕೆ ಕರೆತರಲಾಗಿದೆ. ಅಪಘಾತದಲ್ಲಿ ಮೃತಪಟ್ಟಿದ್ದ ಬಾಲ ಕಲಾವಿದೆ ಸಮನ್ವಿ ಅಪರಕರ್ಮ ನೆರವೇರಿಸಲು ಜ.16ರಂದು ಸ್ವಾಮೀಜಿ ಪಟ್ಟಣಕ್ಕೆ ಭೇಟಿ ನೀಡಿದ್ದರು. ಆಗ ಜಾಮೀಯಾ ಮಸೀದಿ ಮುಂದೆ ನಿಂತು ವಿಡಿಯೊ ಮಾಡಿದ್ದರು.

'ಬಾಬ್ರಿ ಮಸೀದಿ ಧ್ವಂಸ ಮಾಡಿದಂತೆಯೇ ಈ ಮಸೀದಿಯನ್ನೂ ಒಡೆದು ಹನುಮ ದೇವಾಲಯ ನಿರ್ಮಿಸಬೇಕು. ಇದಕ್ಕೆ ಎಲ್ಲ ಹಿಂದೂ ಸಂಘಟನೆಗಳು ಒಂದಾಗಬೇಕು' ಎಂಬ ಸಂದೇಶವಿದ್ದ ವಿಡಿಯೊ ಅನ್ನು ಜಾಲತಾಣಗಳಲ್ಲಿ ಹಾಕಿದ್ದರು.

ಜಾಮಿಯಾ ಮಸೀದಿಯು ಭಾರತೀಯ ಪುರಾತತ್ವ ಮತ್ತು ಸರ್ವೇಕ್ಷಣಾ ಇಲಾಖೆ ಸುಪರ್ದಿಯಲ್ಲಿದೆ. ಇಲಾಖೆಯ ಸಿಬ್ಬಂದಿ ಯತಿರಾಜ್, ಸೋಮವಾರ ಪಟ್ಟಣ ಠಾಣೆಗೆ ದೂರು ನೀಡಿದ್ದರು.

ಸ್ವಾಮೀಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಕೋರ್ಟ್ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಸ್ವಾಮೀಜಿ ಬಿಡುಗಡೆ ಕೋರಿ ವಕೀಲರಾದ ಬಾಲರಾಜು, ಎಸ್.ಆರ್.ಸಿದ್ದೇಶ್ ಮತ್ತು ಎ.ಟಿ.ಜಯಕುಮಾರ್ ಜೆಎಂಎಫ್‌ಸಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ವಿಚಾರಣೆ ಬುಧವಾರ ನಡೆಯಲಿದೆ.

ಪಾದಯಾತ್ರೆ

ಬೆಳಗಾವಿ: 'ಕೊರೊನಾ ಸೋಂಕು ಹರಡುವಿಕೆ ಕಡಿಮೆಯಾದ ಬಳಿಕ ಮೇಕೆದಾಟು ಪಾದಯಾತ್ರೆ ಮಾದರಿಯಲ್ಲಿಯೇ ಮಹದಾಯಿ ಯೋಜನೆ ಜಾರಿಗೆ ಆಗ್ರಹಿಸಿ ಹೋರಾಟ ನಡೆಸಲಾಗುವುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ ಜಾರಕಿಹೊಳಿ ತಿಳಿಸಿದರು.

ಅಮೃತ ನಗರೋತ್ಥಾನ ಯೋಜನೆಗೆ ಆದ್ಯತೆ ಯಾವುದು?

ಬಸ್ ಬೇಕು, ಪಾದಚಾರಿ ಮಾರ್ಗ ಅಭಿವೃದ್ಧಿ ಆಗಬೇಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ನಗರದ 12 ಅತಿ ದಟ್ಟಣೆ ಕಾರಿಡಾರ್‌ಗಳ ಅಭಿವೃದ್ಧಿ ಸೇರಿದಂತೆ ₹6 ಸಾವಿರ ಕೋಟಿ ಮೊತ್ತದ ಕಾಮಗಾರಿಗೆ ರಾಜ್ಯ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ.

ರಸ್ತೆ ಅಭಿವೃದ್ಧಿ, ಕೆಳ ಸೇತುವೆ (ಗ್ರೇಡ್ ಸಪರೇಟರ್), ಕೆರೆ ಅಭಿವೃದ್ಧಿ, ರಾಜಕಾಲುವೆ, ಉದ್ಯಾನ, ಘನತಾಜ್ಯ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕೊಳಚೆ ಪ್ರದೇಶಗಳ ಅಭಿವೃದ್ಧಿ, ಆಸ್ಪತ್ರೆ ಮತ್ತು ಶಾಲಾ ಕಟ್ಟಡಗಳ ನಿರ್ಮಾಣವನ್ನು ಮುಂದಿನ ಮೂರು ವರ್ಷಗಳಲ್ಲಿ ಮಾಡಲು ಸರ್ಕಾರ ಉದ್ದೇಶಿಸಿದೆ. ರಾಜ್ಯ ಸರ್ಕಾರದಿಂದ ಶೇ 50ರಷ್ಟು ಅನುದಾನ, ಶೇ 10ರಷ್ಟನ್ನು ಬಿಬಿಎಂಪಿ ಸಂಪನ್ಮೂಲದಿಂದ, ಶೇ 40ರಷ್ಟನ್ನು ಕೆಯುಐಡಿಎಫ್‌ಸಿಯ 'ಕರ್ನಾಟಕ ವಾಟರ್ ಆ್ಯಂಡ್ ಸ್ಯಾನಿಟೈಸೇಷನ್ ಪೂಲ್ಡ್ ಫಂಡ್ ಟ್ರಸ್ಟ್'ನಿಂದ ಸಾಲ ಪಡೆಯಲು ಯೋಜಿಸಿದೆ.

ನಗರದ ಅಭಿವೃದ್ಧಿಗೆ ಏನೆಲ್ಲಾ ಯೋಜನೆಗಳ ಅಗತ್ಯವಿದೆ, ಯಾವುದು ಅಗತ್ಯ ಇಲ್ಲ ಎಂಬುದರ ಬಗ್ಗೆ ನಗರ ಯೋಜನಾ ತಜ್ಞರು 'ಪ್ರಜಾವಾಣಿ' ಜತೆ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ರಾಜಧಾನಿ ಒಡಲದನಿ

'ಬಿಬಿಎಂಪಿಗೆ ಯೋಗ್ಯತೆ ಇಲ್ಲ'



ನಗರಕ್ಕೆ ಬೇಕಿರುವುದು ಬಿಎಂಟಿಸಿ ಬಸ್ ಮತ್ತು ಉತ್ತಮವಾದ ಪಾದಚಾರಿ ಮಾರ್ಗ. ಬೆಂಗಳೂರಿನಲ್ಲಿ ಈಗ 6 ಸಾವಿರ ಬಿಎಂಟಿಸಿ ಬಸ್‌ಗಳಿವೆ. ಈ ಸಂಖ್ಯೆಯನ್ನು ಕನಿಷ್ಠ 14 ಸಾವಿರಕ್ಕೆ ಹೆಚ್ಚಿಸಬೇಕು. ನಗರದಲ್ಲಿ ಇತ್ತಿಚೆಗೆ 10ರಿಂದ 15 ರಸ್ತೆಗಳಲ್ಲಷ್ಟೇ ಉತ್ತಮ ಪಾದಚಾರಿ ಮಾರ್ಗಗಳಿವೆ. ಈ ರೀತಿಯ ಪಾದಚಾರಿ ಮಾರ್ಗ ಇರುವ ರಸ್ತೆಗಳ ಸಂಖ್ಯೆ ಕನಿಷ್ಠ 1,500ಕ್ಕೆ ಹೆಚ್ಚಾಗಬೇಕು. ಪಾದಚಾರಿ ಮಾರ್ಗಗಳು ಅಭಿವೃದ್ಧಿಯಾದರೆ ಜನ ನಡೆದೇ ಹೋಗಲು ಬಯಸುತ್ತಾರೆ. ಸ್ವಲ್ಪ ದೂರಕ್ಕೂ ವಾಹನಗಳನ್ನು ಬಳಕೆ ಮಾಡುವುದನ್ನು ಕಡಿಮೆ ಮಾಡುತ್ತಾರೆ. ಇದನ್ನು 15 ವರ್ಷಗಳಿಂದ ಹೇಳುತ್ತಲೇ ಇದ್ದೇವೆ. ಬಿಬಿಎಂಪಿ ಏನ್ನನ್ನೂ ಮಾಡಿಲ್ಲ. ಈಗ ಸರ್ಕಾರ ಘೋಷಣೆ ಮಾಡಿರುವ ಅನುದಾನ ಖರ್ಚು ಮಾಡಲು ಬಿಬಿಎಂಪಿಗೆ ಯೋಗ್ಯತೆ ಇಲ್ಲ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

'ಮೊದಲು ಲೆಕ್ಕ ಕೊಡಲಿ'



ಬಿಬಿಎಂಪಿ ವರ್ಷಕ್ಕೆ ₹10 ಸಾವಿರ ಕೋಟಿಯಷ್ಟು ಬಜೆಟ್ ಮಂಡಿಸುತ್ತದೆ. ಅದೆಲ್ಲವನ್ನೂ ಖರ್ಚು ಮಾಡಿದ್ದರೂ ನಗರದಲ್ಲಿ ರಸ್ತೆಗಳು ಹಾಗೇ ಇವೆ. ರಸ್ತೆ ನಿರ್ಮಾಣಕ್ಕೆ, ರಸ್ತೆ ಗುಂಡಿ ಮುಚ್ಚಲು ಮಾಡಿರುವ ಹಣ ಎಲ್ಲಿ ಹೋಯಿತು ಎಂಬುದರ ಬಗ್ಗೆ ಮೊದಲು ಬಿಬಿಎಂಪಿ ಲೆಕ್ಕ ಕೊಡಬೇಕು. ಮಳೆ ಬಂದರೆ ಮನೆಗಳಿಗೆ ನೀರು ನುಗ್ಗುವ ಸ್ಥಿತಿ ಇದೆ. ಇದು ಪ್ರತಿ ಮಳೆಗಾಲದಲ್ಲೂ ತಪ್ಪಿದಲ್ಲ. ಚುನಾವಣೆಗಳು ಸಮೀಪಿಸುತ್ತಿವೆ ಎಂಬ ಕಾರಣಕ್ಕೆ ಸಾವಿರಾರು ಕೋಟಿ ಮೊತ್ತದ ಯೋಜನೆಗಳನ್ನು ಘೋಷಣೆ ಮಾಡಲಾಗುತ್ತಿದೆ. ಇದರಿಂದ ಯಾವುದೇ ಪ್ರಯೋಜನ ಇಲ್ಲ. ಬಿಜೆಪಿ ಸರ್ಕಾರ ಬಂದು ಎರಡೂವರೆ ವರ್ಷಗಳಾಗಿವೆ. ಇಷ್ಟು ದಿನ ಏನು ಮಾಡಿದೆ ಎಂಬುದು ಗೊತ್ತಿದೆ. ಬಿಬಿಎಂಪಿ ಚುನಾವಣೆ ಘೋಷಣೆ ಆಗಲಿದೆ ಎಂಬ ಕಾರಣಕ್ಕೆ ಈಗ ಹೊಸ ಯೋಜನೆಗಳನ್ನು ಸರ್ಕಾರ ಘೋಷಣೆ ಮಾಡುತ್ತಿದೆ.

ಶಾಂತಲಾ ದಾಮ್ಲೆ, ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷೆ

'ತಪ್ಪು ಆದ್ಯತೆ'



ಬಿಎಂಟಿಸಿ ಬಸ್, ಮೆಟ್ರೊ ರೈಲು ಮತ್ತು ಸ್ಥಳೀಯ ರೈಲುಗಳ(ಉಪನಗರ) ಸಂಚಾರ ಹೆಚ್ಚಳ ಆಗುವಂತೆ ಮಾಡಿದರೆ ಈ ರೀತಿಯ ದಟ್ಟಣೆ ಕಾರಿಡಾರ್‌ಗಳಿಗೆ ಹಣ ಖರ್ಚು ಮಾಡಬೇಕಾದ ಅಗತ್ಯ ಇರುವುದಿಲ್ಲ. ರಸ್ತೆ ಮತ್ತು ಮೇಲ್ಸೇತುವೆ ಅಭಿವೃದ್ಧಿ ಮೂಲಕ ವಾಹನ ಖರೀದಿಗೆ ಸರ್ಕಾರವೇ ಪರೋಕ್ಷ ಪ್ರೋತ್ಸಾಹ ನೀಡುತ್ತಿದೆ. ಈಗಲೇ ನಗರದಲ್ಲಿ 1 ಕೋಟಿಗೂ ಹೆಚ್ಚು ವಾಹನಗಳಿವೆ. ಪರಿಸರ ಸಂಪೂರ್ಣ ಹಾಳಾಗುತ್ತಿದೆ. ಈ ರೀತಿ ಉಪಯೋಗ ಇಲ್ಲದ ಯೋಜನೆಗಳಿಗೆ ಹಣ ಖರ್ಚು ಮಾಡುವ ಬದಲು ಈ ಹಣವನ್ನು ಬಿಎಂಟಿಸಿ, ಮೆಟ್ರೊ ರೈಲು ನಿಗಮ ಮತ್ತು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆ–ರೈಡ್) ನೀಡುವುದು ಸೂಕ್ತ. ಆಗ ದಟ್ಟಣೆ ಕಾರಿಡಾರ್‌ಗಳ ಅಗತ್ಯ ಇರುವುದಿಲ್ಲ.

ರಾಜಕುಮಾರ್ ದುಗಾರ್, ರೈಲ್ವೆ ಹೋರಾಟಗಾರ

ಗಡಿ ನಿರ್ಣಯ ಆಯೋಗ: ಆಕ್ಷೇಪಣೆಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದು, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ರಚಿಸಲು 'ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆ'ಗೆ ತಿದ್ದುಪಡಿ ತಂದಿರುವ ಕ್ರಮ ಪ್ರಶ್ನಿಸಿರುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ಹೈಕೋರ್ಟ್ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

ಕರ್ನಾಟಕ ಪಂಚಾಯತ್ ರಾಜ್ ಹಾಗೂ ಗ್ರಾಮ ಸ್ವರಾಜ್ (ತಿದ್ದುಪಡಿ) ಕಾಯ್ದೆ- 2021ರ ಜಾರಿಗೆ ಸೆಪ್ಟೆಂಬರ್ 18ರಂದು ಸರ್ಕಾರ ಹೊರಡಿಸಿರುವ ಗೆಜೆಟ್ ಅಧಿಸೂಚನೆ ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಹೈಕೋರ್ಟ್ ಸುದ್ದಿ

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ನಾಲ್ಕು ವಾರ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು.

ಇದಕ್ಕೆ ಚುನಾವಣಾ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ರಾಜ್ಯದ ವಿವಿಧ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಅವಧಿ ಈಗಾಗಲೇ ಪೂರ್ಣಗೊಂಡಿದೆ. ಇವುಗಳಿಗೆ ಚುನಾವಣೆ ನಡೆಸಲು ಆಯೋಗವು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದೆ. ಇದರಿಂದ, ಆಯೋಗ ಇಷ್ಟು ದಿನ ನಡೆಸಿರುವ ಎಲ್ಲ ಸಿದ್ಧತೆಗಳೂ ವ್ಯರ್ಥವಾಗಲಿವೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ನ್ಯಾಯಪೀಠ, 'ಸರ್ಕಾರ ಮೊದಲು ಆಕ್ಷೇಪಣೆ ಸಲ್ಲಿಸಲಿ' ಎಂದು ತಿಳಿಸಿ, ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿ, ವಿಚಾರಣೆಯನ್ನು ಫೆಬ್ರುವರಿ 14ಕ್ಕೆ ಮುಂದೂಡಿತು.

21 ವರ್ಷಗಳ ಅಗಲಿಕೆಗೆ ವಿಚ್ಛೇದನದ ಮುದ್ರೆ

ಬೆಂಗಳೂರು: 'ಕಳೆದ 21 ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವ ದಂಪತಿ ನಡುವೆ ವಿವಾಹ ಸಂಪೂರ್ಣ ಮುರಿದು ಬಿದ್ದಿದೆ. ಇಂತಹ ಸಂಬಂಧವನ್ನು ಒಗ್ಗೂಡಿಸುವುದರಲ್ಲಿ ಯಾವುದೇ ಅರ್ಥವಿಲ್ಲ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಪತಿಯ ಮನವಿಯಂತೆ ವಿಚ್ಛೇದನಕ್ಕೆ ಆದೇಶಿಸಿದ್ದು, ಪತಿ ತನ್ನ ವಿಚ್ಛೇದಿತ ಪತ್ನಿಗೆ ನಾಲ್ಕು ತಿಂಗಳಲ್ಲಿ ₹ 30 ಲಕ್ಷ ಜೀವನಾಂಶ ನೀಡಬೇಕು ಎಂದು ನಿರ್ದೇಶಿಸಿದೆ.

ಈ ಕುರಿತಂತೆ ಪತಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

'ಪತ್ನಿ ಕಾರಣ ನೀಡದೆ ತವರಿಗೆ ಹೋಗಿದ್ದಾಳೆ. ಪತ್ನಿಯನ್ನು ವಾಪಸು ಕಳುಹಿಸಿಕೊಡುವಂತೆ ಮಾವನ ಮನೆಗೆ ತೆರಳಿ ಕೋರಿದ್ದರೂ ಆಕೆ ಬರಲು ಒಪ್ಪಿಲ್ಲ. ಈ ದಿಸೆಯಲ್ಲಿ ಕುಟುಂಬದ ಸದಸ್ಯರು ಹಾಗೂ ಹಿತೈಷಿಗಳು ಹೋಗಿ ಕೇಳಿಕೊಂಡರೂ ವಾಪಸು ಬಂದಿಲ್ಲ. ಆದ್ದರಿಂದ, ಸಹಜೀವನ ಮುಂದುವರೆಸಲು ಒಪ್ಪದ ಪತ್ನಿಯಿಂದ ವಿಚ್ಛೇದನ ಕೊಡಿಸಬೇಕು' ಎಂದು ಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು.

'ದಂಪತಿಗೆ ಈಗಾಗಲೇ 56 ವರ್ಷವಾಗಿದೆ. ಸತತ 21 ವರ್ಷಗಳಿಂದ ಇಬ್ಬರೂ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ದಂಪತಿಯಲ್ಲಿ ಯಾರೊಬ್ಬರೂ ತಮ್ಮ ವೈವಾಹಿಕ ಹಕ್ಕುಗಳ ಪುನರ್ ಸ್ಥಾಪನೆಗೆ ಪ್ರಯತ್ನಿಸಿಲ್ಲ. ವಿಚ್ಛೇದನ ಬೇಡ ಎನ್ನುತ್ತಿರುವ ಪತ್ನಿ ಕೂಡ ತಮ್ಮ ವೈವಾಹಿಕ ಹಕ್ಕುಗಳನ್ನು ಪುನರ್ ಸ್ಥಾಪಿಸಲು ಕೋರಿ ಅರ್ಜಿ ಸಲ್ಲಿಸಿಲ್ಲ' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.



ಜೀವನ್ ಭಿಮಾನಗರದಲ್ಲಿ ಕರ್ಣಾಟಕ ಬ್ಯಾಂಕ್‌ನ ನೂತನ ಶಾಖೆಯನ್ನು ಸಿಸಿಬಿ ಡಿಸಿಪಿ ಎಸ್‌.ಡಿ.ಶರಣಪ್ಪ ಉದ್ಘಾಟಿಸಿದರು. ಬ್ಯಾಂಕ್‌ನ ಉಪ ಪ್ರಧಾನ ವ್ಯವಸ್ಥಾಪಕ ನಾಗರಾಜ ಐತಾಳ್, ಬೆಂಗಳೂರು ವಲಯದ ಸಹಾಯಕ ಮುಖ್ಯ ವ್ಯವಸ್ಥಾಪಕ ಮಹೇಶ್ ಶೆಟ್ಟಿ, ಶಾಖಾ ವ್ಯವಸ್ಥಾಪಕಿ ಪಲ್ಲವಿ ಪ್ರಶಾಂತ್ ಹಾಗೂ ಇತರರು ಇದ್ದಾರೆ.

ಅಪಘಾತದಲ್ಲಿ ಮೃತಪಟ್ಟಿದ್ದ ಸಮನ್ವಿ ಮನೆಗೆ ಡಿಕೆಶಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಸಂಭವಿಸಿದ್ದ ಅಪಘಾತದಲ್ಲಿ ಮೃತಪಟ್ಟಿದ್ದ ಬಾಲಕಿ ಸಮನ್ವಿ ಮನೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಂಗಳವಾರ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

'ಕಲರ್ಸ್ ಕನ್ನಡ ವಾಹಿನಿಯ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋ ಸ್ಪರ್ಧಿಯಾಗಿದ್ದ ಸಮನ್ವಿ ಅಪಾರ ಅಭಿಮಾನಿಗಳನ್ನು ಹೊಂದಿದ್ದಳು. ಆಕೆಯಲ್ಲಿ ಅಗಾಧ ಪ್ರತಿಭೆ ಇತ್ತು. ಚಿಕ್ಕ ವಯಸ್ಸಿನಲ್ಲೇ ಮೃತಪಟ್ಟಿದ್ದು ನೋವಿನ ಸಂಗತಿ' ಎಂದು ಅವರು ಹೇಳಿದರು.

ಸಮನ್ವಿ ಹಾಗೂ ಆಕೆಯ ತಾಯಿ ಅಮೃತಾ ನಾಯ್ಡು ಕೋಣನಕುಂಟೆ ಬಳಿಯ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಸ್ಕೂಟಿಯಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿತ್ತು. ಆರು ವರ್ಷದ ಸಮನ್ವಿ ಮೃತಪಟ್ಟಿದ್ದಳು.

ವೈದ್ಯ ಆತ್ಮಹತ್ಯೆ; ಬ್ಲ್ಯಾಕ್‌ಮೇಲ್ ಮಾಡಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ವಂಚಕರ 'ಬೆತ್ತಲೆ ವಿಡಿಯೊ' ಬ್ಲ್ಯಾಕ್‌ಮೇಲ್‌ಗೆ ಹೆದರಿ ವೈದ್ಯರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣ ಸಂಬಂಧ, ಆರೋಪಿಯನ್ನು ನಗರದ ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

'ನಗರದ ಆಸ್ಪತ್ರೆಯೊಂದರಲ್ಲಿ ಕೆಲಸ ಮಾಡುತ್ತಿದ್ದ 30 ವರ್ಷದ ವೈದ್ಯ, ಕೆಂಗೇರಿ ರೈಲು ನಿಲ್ದಾಣದ ಸಮೀಪ ಹಳಿ ಮೇಲೆ ರೈಲಿಗೆ ತಲೆಕೊಟ್ಟು ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರು. ಮರಣಪತ್ರ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಸೈಬರ್ ವಂಚಕರೊಬ್ಬರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸಾಮಾಜಿಕ ಮಾಧ್ಯಮಗಳಲ್ಲಿ ವೈದ್ಯ ಖಾತೆಗಳನ್ನು ತೆರೆದಿದ್ದರು. ಯುವತಿ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ವಂಚಕ, ವೈದ್ಯನಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ಸ್ವೀಕರಿಸಿದ್ದ ವೈದ್ಯ, ಖಾತೆಯಿಂದ ಬಂದ ಸಂದೇಶಗಳಿಗೆ ಪ್ರತಿಕ್ರಿಯಿಸಲಾರಂಭಿಸಿದ್ದರು. ರಾತ್ರಿ ಕರೆ ಮಾಡಿದ್ದ ವಂಚಕ, ವೈದ್ಯನನ್ನು ಪ್ರಚೋದಿಸಿ ಬೆತ್ತಲೆ ವಿಡಿಯೊ ಸೆರೆಹಿಡಿದು ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದ' ಎಂದೂ ಹೇಳಿದರು.

'ವಂಚಕನ ಬ್ಲ್ಯಾಕ್‌ಮೇಲ್‌ನಿಂದ ಹೆದರಿದ್ದ ವೈದ್ಯ ಆತ್ಮಹತ್ಯೆ ಮಾಡಿಕೊಂಡಿದ್ದರು. ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಯನ್ನು ಬಂಧಿಸಲಾಗಿದ್ದು, ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಬೇಕಿದೆ' ಎಂದೂ ತಿಳಿಸಿದರು.

ನಕಲಿ ಚಿನ್ನದಂಗಡಿ ತೆರೆದು ಮೋಸ: ಬಂಧನ

ಬೆಂಗಳೂರು: ನಕಲಿ ಚಿನ್ನದಂಗಡಿ ತೆರೆದು, ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಂದ ಅಸಲಿ ಚಿನ್ನಾಭರಣ ಪಡೆದು ವಂಚಿಸುತ್ತಿದ್ದ ಆರೋಪದಡಿ ಫರ್ಹಾನ್ ಅಬ್ಬಾಸ್ ಎಂಬಾತನನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ಗೌರಿಬಿದನೂರಿನ ಫರ್ಹಾನ್, ರಾಜಾಜಿನಗರ ಬಳಿ 'ವಸುಂಧರಾ ಆಭರಣ ಮಳಿಗೆ' ತೆರೆದಿದ್ದ. ಆತನ ವಿರುದ್ಧ ಕಾಟನ್‌ಪೇಟೆಯ ಅಕ್ಕಸಾಲಿಗ ಸೋಹಿದುಲ್ ಮೊಂಡೆಲ್ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಯಿಂದ ₹ 5 ಲಕ್ಷ ಮೌಲ್ಯದ 115 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಆತನ ಇಬ್ಬರು ಸಹಚರರು ತಲೆಮರೆಸಿಕೊಂಡಿದ್ದಾರೆ' ಎಂದೂ ತಿಳಿಸಿವೆ.

'ತನ್ನ ಅಂಗಡಿಗೆ ಬೇಕೆಂದು ಹೇಳಿ ಆರೋಪಿ, ಅಕ್ಕಸಾಲಿಗನ ಬಳಿ ಹಲವು ಆಭರಣ ತಯಾರಿಸಿಕೊಂಡಿದ್ದ. ಪರಿಶೀಲನೆ ನೆಪದಲ್ಲಿ ಆಭರಣ ಸಮೇತ ಆರೋಪಿ ಪರಾರಿಯಾಗಿದ್ದ' ಎಂದೂ ಹೇಳಿವೆ.

ಆಧ್ಯಾತ್ಮಿಕ ಪ್ರಭಾವ; ಗುಜರಾತ್‌ನಲ್ಲಿ ಬಾಲಕಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನಿಷ್ಟದ ಶಾಲೆಗೆ ಸೇರಿಸಲಿಲ್ಲವೆಂಬ ಕಾರಣಕ್ಕೆ ಆಧ್ಯಾತ್ಮಿಕ ಪ್ರಭಾವಕ್ಕೆ ಒಳಗಾಗಿ ಮನೆಯಿಂದ ನಾಪತ್ತೆಯಾಗಿದ್ದ 15 ವರ್ಷದ ಬಾಲಕಿ ಗುಜರಾತ್‌ನಲ್ಲಿ ಪತ್ತೆಯಾಗಿದ್ದಾಳೆ.

'ಸುಬ್ರಹ್ಮಣ್ಯನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಬಾಲಕಿ, 2021ರ ಅಕ್ಟೋಬರ್ 31ರಂದು ಮನೆಯಿಂದ ನಾಪತ್ತೆಯಾಗಿದ್ದಳು. ಈ ಬಗ್ಗೆ ಠಾಣೆಗೆ ದೂರು ನೀಡಿದ್ದ ಪೋಷಕರು, 'ಆಧ್ಯಾತ್ಮಿಕ ಪ್ರಭಾವಕ್ಕೆ ಒಳಗಾಗಿದ್ದ ಮಗಳು, ಆತ್ಮಗಳ ಜೊತೆ ಮಾತುಕತೆ ನಡೆಸುವುದಾಗಿ ಹೇಳುತ್ತಿದ್ದಳು. ಅದೇ ಕಾರಣಕ್ಕೆ ಆಕೆ ಮನೆ ಬಿಟ್ಟು ಹೋಗಿದ್ದು, ಹುಡುಕಿಕೊಡಿ' ಎಂದು ಕೋರಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಅಪರಾಧ ಸುದ್ದಿ


'ಮನೆ ಹಾಗೂ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿತ್ತು. ಬಾಲಕಿಯೊಬ್ಬಳೇ ಸುತ್ತಾಡುತ್ತಿದ್ದ ಸಂಗತಿ ಗೊತ್ತಾಗಿತ್ತು. ಸ್ವಯಂಪ್ರೇರಿತವಾಗಿ ಬಾಲಕಿ ಮನೆ ಬಿಟ್ಟು ಹೋಗಿರುವುದು ತಿಳಿಯಿತು.'

'ಬಾಲಕಿ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಗುಜರಾತ್‌ನಲ್ಲಿರುವ ಆಶ್ರಮವೊಂದಕ್ಕೆ ಬಾಲಕಿ ಹೋಗಿರುವ ಮಾಹಿತಿ ಸಿಕ್ಕಿತ್ತು. ಜ. 15ರಂದು ಆಶ್ರಮಕ್ಕೆ ಹೋಗಿದ್ದ ತಂಡ, ಬಾಲಕಿಯನ್ನು ರಕ್ಷಿಸಿ ಸುರಕ್ಷಿತವಾಗಿ ನಗರಕ್ಕೆ ಕರೆತಂದಿದೆ. ಮಕ್ಕಳ ಮಾನಸಿಕ ತಜ್ಞರ ಬಳಿ ಕೌನ್ಸೆಲಿಂಗ್ ಮಾಡಿಸಿ ಬಾಲಕಿಯನ್ನು ಪೋಷಕರ ಸುಪರ್ದಿಗೆ ವಹಿಸಲಾಗಿದೆ' ಎಂದೂ ಅಧಿಕಾರಿ ತಿಳಿಸಿದರು.

'ಶಾಲೆಗೆ ಸೇರಿಸುವ ವಿಚಾರವಾಗಿ ಬಾಲಕಿ ಹಾಗೂ ಪೋಷಕರ ನಡುವೆ ಗೊಂದಲವಿತ್ತು. ಆ ಬಗ್ಗೆ ಜಗಳವೂ ಆಗಿತ್ತು. ತನ್ನಿಷ್ಟದ ಶಾಲೆಗೆ ಪೋಷಕರು ಸೇರಿಸುತ್ತಿಲ್ಲವೆಂದು ಬಾಲಕಿ ನೊಂದಿದ್ದಳು. ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊಗಳನ್ನು ನೋಡಿ, ಆತ್ಮಗಳ ಜೊತೆ ಮಾತನಾಡುತ್ತಿರುವುದಾಗಿ ಆಕೆ ಹೇಳುತ್ತಿದ್ದಳು. ₹ 2,500 ನಗದು ಹಾಗೂ ಎರಡು ಜೊತೆ ಬಟ್ಟೆ ತೆಗೆದುಕೊಂಡು ಮನೆ ಬಿಟ್ಟು ಹೋಗಿದ್ದಳು. ಈ ಬಗ್ಗೆ ಬಾಲಕಿ ಹೇಳಿಕೆ ನೀಡಿದ್ದಾಳೆ' ಎಂದೂ ಅಧಿಕಾರಿ ಮಾಹಿತಿ ನೀಡಿದರು.

ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಕಾರ್ಯಸೂಚಿ

ಭಾಷಣದಲ್ಲಿ ತೊಡಕು: ಮೋದಿಗೆ ಕಾಂಗ್ರೆಸ್ ಲೇವಡಿ



ನವದೆಹಲಿ (ಪಿಟಿಐ): ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಕಾರ್ಯಸೂಚಿ ಭಾಷಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಎರಡನೇ ಬಾರಿ ಆರಂಭಿಸಿದ್ದನ್ನು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಲೇವಡಿ ಮಾಡಿದ್ದಾರೆ. 'ಟೆಲಿಪ್ರಾಂಪ್ಟರ್ ಕೂಡ ಅಷ್ಟೊಂದು ಸುಳ್ಳುಗಳನ್ನು ತಡೆದುಕೊಳ್ಳಲು ಸಾಧ್ಯವಿಲ್ಲ' ಎಂದು ರಾಹುಲ್ ಹೇಳಿದ್ದಾರೆ. ಇದು ಡಬ್ಲ್ಯುಇಎಫ್ ಕಡೆಯಿಂದ ಆಗಿರುವ ತಾಂತ್ರಿಕ ಸಮಸ್ಯೆ ಎಂದು ಬಿಜೆಪಿ ಸಮಜಾಯಿಷಿ ನೀಡಿದೆ.

ಡಬ್ಲ್ಯುಇಎಫ್‌ನಲ್ಲಿ ನಡೆದ ಘಟನೆಯ ಬಗ್ಗೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ದಾವೋಸ್ ಕಾರ್ಯಸೂಚಿ 2022 ಶೃಂಗಸಭೆಯಲ್ಲಿ ಮೋದಿ ಅವರು ತಮ್ಮ ಭಾಷಣ ಆರಂಭಿಸಿ ನಂತರ ನಿಲ್ಲಿಸಿದ್ದರು. ಬಳಿಕ, ಭಾಷಣ ಪುನರಾರಂಭಿಸಿದ್ದರು. ಹೀಗೆ ಆಗಲು ಟೆಲಿಪ್ರಾಂಪ್ಟರ್‌ನಲ್ಲಿ ಆಗಿದ್ದ ಎಡವಟ್ಟು ಕಾರಣ ಎಂದು ಕಾಂಗ್ರೆಸ್‌ನ ಹಲವು ಮುಖಂಡರು ಮತ್ತು ಸಾಮಾಜಿಕ ಜಾಲತಾಣ ಬಳಕೆದಾರರು ಹೇಳಿದ್ದಾರೆ. ಸಭೆಯು ವರ್ಚುವಲ್ ಆಗಿ ನಡೆದಿತ್ತು.

ಪ್ರಧಾನಿ ಅವರಿಗೆ ಟೆಲಿಪ್ರಾಂಪ್ಟರ್ ಸಮಸ್ಯೆ ಆಗಿರುವ ಸಾಧ್ಯತೆ ಇಲ್ಲ ಎಂದು ಫ್ಯಾಕ್ಟ್ ಚೆಕ್ ವೆಬ್‌ಸೈಟ್ ಆಲ್ಟ್ ನ್ಯೂಸ್‌ನ ಸಹ ಸಂಸ್ಥಾಪಕ ಪ್ರತೀಕ್ ಸಿನ್ಹಾ ಹೇಳಿದ್ದಾರೆ.

'ಸರ್, ಎಲ್ಲರ ಸಂಪರ್ಕಗಳು ಸರಿಯಾಗಿದೆಯೇ ಎಂದು ಕೇಳಿಕೊಳ್ಳಿ' ಎಂದು ಹೇಳುವ ಧ್ವನಿಯು ಪ್ರಧಾನಿ ಭಾಷಣದ ಧ್ವನಿಮುದ್ರಣದ ಹಿನ್ನೆಲೆಯಲ್ಲಿ ಕೇಳಿಸುತ್ತದೆ. ಅದಾದ ಬಳಿಕ, ತಮ್ಮ ಮತ್ತು ಭಾಷಾಂತರಕಾರರ ಧ್ವನಿಯು ಸರಿಯಾಗಿ ಕೇಳಿಸುತ್ತಿದೆಯೇ ಎಂದು ಪ್ರಧಾನಿ ಪ್ರಶ್ನಿಸುತ್ತಾರೆ. 'ಸರಿಯಾಗಿ ಕೇಳಿಸುತ್ತಿದೆ' ಎಂದು ಡಬ್ಲ್ಯು ಇಎಫ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಕ್ಲಾಸ್ ಶ್ವಾಬ್ ಅವರು ಪ್ರತಿಕ್ರಿಯಿಸುತ್ತಾರೆ. ಆದರೆ, ಶ್ವಾಬ್ ಅವರು ಮಧ್ಯಪ್ರವೇಶಿಸಿ ಮತ್ತೊಮ್ಮೆ ಪೀಠಿಕೆ ಭಾಷಣ ಮಾಡುತ್ತಾರೆ. ಪ್ರಧಾನಿಯವರು ತಮ್ಮ ಇಡೀ ಭಾಷಣವನ್ನು ಪುನರಾವರ್ತಿಸುತ್ತಾರೆ' ಎಂದು ಸಿನ್ಹಾ ಅವರು ಪ್ರಧಾನಿಯ ಭಾಷಣದ ಸಂದರ್ಭವನ್ನು ವಿವರಿಸಿದ್ದಾರೆ. ಆದರೆ, ಕಾಂಗ್ರೆಸ್‌ನ ಹಲವು ಮುಖಂಡರು ಈ ಘಟನೆಯನ್ನು ಲೇವಡಿ ಮಾಡಿದ್ದಾರೆ.

'ನೀವು ಟೆಲಿಪ್ರಾಂಪ್ಟರ್ ಇರಿಸಿಕೊಂಡು ಭಾಷಣ ಮಾಡಬಹುದು. ಆದರೆ, ದೇಶ ಆಳಲು ಸಾಧ್ಯವಿಲ್ಲ ಎಂಬುದು ನಿನ್ನೆಯ (ಸೋಮವಾರ) ಘಟನೆಯಿಂದ ಇಡೀ ದೇಶಕ್ಕೆ ತಿಳಿದಿದೆ' ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಪ್ರಧಾನಿಯು ಭಾಷಣ ನಿಲ್ಲಿಸಿ ಮತ್ತು ಆರಂಭಿಸಿದ ವಿಡಿಯೊವನ್ನು ಕಾಂಗ್ರೆಸ್ ಪಕ್ಷದ ಟ್ವಿಟರ್ ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. ಅವರನ್ನು 'ಟೆಲಿಪ್ರಾಂಪ್ಟರ್ ಆಸಾಮಿ' ಎಂದು ಹೇಳಲಾಗಿದೆ.

'ಟೆಲಿಪ್ರಾಂಪ್ಟರ್ ಕೆಲಸ ಮಾಡುವುದು ನಿಲ್ಲಿಸಿದಾಗ ಭಾಷಣ ಮಾಡಲು ಸಾಧ್ಯವಾಗಲಿಲ್ಲ. ಡಬ್ಲ್ಯುಇಎಫ್‌ನಲ್ಲಿ ದೇಶವನ್ನು ಪ್ರತಿನಿಧಿಸುವಲ್ಲಿ ಪ್ರಧಾನಿ ಮೋದಿ ವಿಫಲರಾದರು' ಎಂದು ಯುವ ಕಾಂಗ್ರೆಸ್ ಹೇಳಿದೆ.



ಜನಜಂಗುಳಿ ನಗರದ ಅವೆನ್ಯೂ ರಸ್ತೆಯಲ್ಲಿ ಮಂಗಳವಾರ ಜನಜಂಗುಳಿ ಕಂಡು ಬಂತು. ಕೋವಿಡ್ ಹೆಚ್ಚಾಗಿದ್ದರೂ ಜನರು ಅಂತರ ಕಾಯ್ದುಕೊಳ್ಳುವುದನ್ನು ಮರೆತರು –ಪ್ರಜಾವಾಣಿ ಚಿತ್ರ/ ರಂಜು ಪಿ

ನೌಕೆಯಲ್ಲಿ ಸ್ಫೋಟ ಮೂವರು ಸಾವು

ಮುಂಬೈ (ಪಿಟಿಐ): ಇಲ್ಲಿನ ನೌಕಾಪಡೆಯ ಹಡಗುಕಟ್ಟೆಯಲ್ಲಿ ಮಂಗಳವಾರ ಐಎನ್‌ಎಸ್ ರಣವೀರ್ ನೌಕೆಯಲ್ಲಿ ಸ್ಫೋಟ ಸಂಭವಿಸಿದ್ದು, ನೌಕಾಪಡೆಯ ಮೂವರು ಮೃತಪಟ್ಟು, 11 ಮಂದಿ ಗಾಯಗೊಂಡಿದ್ದಾರೆ.

'ಹಡಗಿನ ಆಂತರಿಕ ಕಂಪಾರ್ಟ್‌ಮೆಂಟ್ ಒಂದರಲ್ಲಿ ಸ್ಫೋಟ ಸಂಭವಿಸಿದೆ. ತೀವ್ರವಾಗಿ ಗಾಯಗೊಂಡ ಮೂವರು ಸಿಬ್ಬಂದಿ ಮೃಪಟ್ಟಿದ್ದಾರೆ. ತಕ್ಷಣ ಪರಿಸ್ಥಿತಿ ನಿಭಾಯಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ' ಎಂದು ನೌಕಾಪಡೆ ಯು ಹೇಳಿಕೆಯಲ್ಲಿ ತಿಳಿಸಿದೆ.

ಪೂರ್ವನೌಕಾ ಕಮಾಂಡ್‌ಗೆ ಸೇರಿದ ರಣವೀರ್, 2021ರ ನವೆಂಬರ್‌ನಿಂದ ಕರಾವಳಿ ಕಾರ್ಯಾಚರಣೆಯ ನಿಯೋಜನೆಯಲ್ಲಿತ್ತು. ಶೀಘ್ರದಲ್ಲೇ ಅದು ತನ್ನ ಮೂಲ ನೆಲೆಗೇ ತೆರಳುವುದರಲ್ಲಿತ್ತು.


ಘಟನೆಯ ಬಗ್ಗೆ ತನಿಖೆ ನಡೆಸಲು ತನಿಖಾ ಸಮಿತಿಗೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತಪ್ಪು ಮಾಹಿತಿ ಕೊಡುವ ವೈದ್ಯರ ವಿರುದ್ಧ ಕ್ರಮ'

ಬೆಂಗಳೂರು: ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಕೋವಿಡ್ ಕುರಿತು ತಪ್ಪು ಮಾಹಿತಿ ನೀಡುವ ಅಥವಾ ವಾಸ್ತವಕ್ಕೆ ದೂರವಾದ ದತ್ತಾಂಶಗಳನ್ನು ನೀಡುವ ವೈದ್ಯರು ಹಾಗೂ ತಜ್ಞರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ.

'ಕೋವಿಡ್ ಕುರಿತಾಗಿ ವಿವಿಧ ಮಾಧ್ಯಮಗಳ ಮೂಲಕ ಕೆಲವು ವೈದ್ಯಕೀಯ ಪರಿಣಿತರು ಹಾಗೂ ವೈದ್ಯರು ಸಾರ್ವಜನಿಕರಿಗೆ ಅಪೂರ್ಣವಾದ, ತಪ್ಪಾದ ಮತ್ತು ಆಧಾರ ರಹಿತ ಮಾಹಿತಿಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ತಪ್ಪು ಮಾಹಿತಿಗಳಿಂದ ನಾಗರಿಕರು ಗೊಂದಲಕ್ಕೀಡಾಗಿ ಕೋವಿಡ್ ನಿರ್ವಹಣೆಗಾಗಿ ಆರೋಗ್ಯ ಹಾಗೂ ಕಂದಾಯ ಇಲಾಖೆಗಳು ಬಿಡುಗಡೆ ಮಾಡಿರುವ ಮಾರ್ಗಸೂಚಿಗಳನ್ನೇ ಪಾಲಿಸದಿರುವ ಸಾಧ್ಯತೆ ಹೆಚ್ಚಾಗಬಹುದು' ಎಂದು ಇಲಾಖೆ ಎಚ್ಚರಿಕೆ ನೀಡಿದೆ.

'ಚಿಕಿತ್ಸೆ ಹಾಗೂ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿರುವ ವೈದ್ಯಕೀಯ ಪರಿಣಿತರು ಹಾಗೂ ವೈದ್ಯರು, ನಾಗರಿಕರಿಗೆ ಕೋವಿಡ್ ಕುರಿತು ಮಾಹಿತಿ ನೀಡುವ ವೇಳೆ ಹೆಚ್ಚು ಜಾಗ್ರತೆ ವಹಿಸಬೇಕು. ಮಾಧ್ಯಮ ಅಥವಾ ಸಾಮಾಜಿಕ ಜಾಲತಾಣಗಳ ಮೂಲಕ ಮಾಹಿತಿ ನೀಡುವ ಮುನ್ನ ರಾಜ್ಯ ಹಾಗೂ ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆ, ಮಾರ್ಗಸೂಚಿ ಅಥವಾ ಆದೇಶಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು' ಎಂದು ಸೂಚಿಸಲಾಗಿದೆ. 'ತಪ್ಪು ಮಾಹಿತಿ ನೀಡುವುದು ಅಪರಾಧ. ವಿಪತ್ತು ನಿರ್ವಹಣಾ ಕಾಯ್ದೆ 2005ರ ನಿಯಮ (54) ಹಾಗೂ ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ 2020ರ ನಿಯಮ 4 (ಕೆ)ರಂತೆ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದೆ.



ಬೆಂಗಳೂರು ನಗರ ಜಿಲ್ಲಾ

ಕೋವಿಡ್ ಅಂಕಿ–ಅಂಶ

14,58,349 ▲ ಒಟ್ಟು ಸೋಂಕಿತರು (14,16,807 ನಿನ್ನೆಯ ವಿವರ)

1,78,328 ▲ ಸಕ್ರಿಯ ಪ್ರಕರಣಗಳು

12,63,555 ▲ ಗುಣಮುಖ ಆದವರು

16,465 ಒಟ್ಟು ಸಾವು ▲

ದಿನದ ಮಾಹಿತಿ

ಹೊಸ ಪ್ರಕರಣ	25,595	▲
ಗುಣಮುಖ	4,514	▼
ಸಾವು	07	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಭೌತಿಕ ತರಗತಿಗಳು ಬೇಡ: ಎಐಡಿಎಸ್‌ಒ

ಬೆಂಗಳೂರು: 'ಎಸ್ಸೆಸ್ಸೆಲ್ಸಿ, ಪಿಯುಸಿ, ಡಿಪ್ಲೊಮಾ ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳನ್ನು ನಡೆಸಲಾಗುತ್ತಿದೆ. ಕೋವಿಡ್ ದಿನೇ ದಿನೇ ಹೆಚ್ಚಳವಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಸೋಂಕು ತಗಲುವ ಅಪಾಯ ಇದೆ. ಹೀಗಾಗಿ ತರಗತಿಗಳನ್ನು ಕೂಡಲೇ ಸ್ಥಗಿತಗೊಳಿಸಬೇಕು' ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಆನ್‌ಲೈನ್ ಪ್ರತಿಭಟನೆ ಮೂಲಕ ಒತ್ತಾಯಿಸಿದೆ.

'ರಾಜ್ಯದ ಒಟ್ಟಾರೆ ಕೋವಿಡ್ ಪ್ರಕರಣಗಳ ಪೈಕಿ ಬೆಂಗಳೂರಿನಲ್ಲೇ ಗರಿಷ್ಠ (ಶೇ 85) ಪ್ರಕರಣಗಳು ಪತ್ತೆಯಾಗಿವೆ. ವಿದ್ಯಾರ್ಥಿಗಳು ಭಯದಿಂದಲೇ ತರಗತಿಗಳಿಗೆ ಹಾಜರಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ಶಾಲೆ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಉಪನ್ಯಾಸಕರಿಗೂ ಸೋಂಕು ತಗುಲಿರುವುದು ವರದಿಯಾಗಿದೆ. ಸರ್ಕಾರವು ನಿರ್ಲಕ್ಷ್ಯ ಧೋರಣೆ ಅನುಸರಿಸುವ ಮೂಲಕ ಶಾಲೆ ಹಾಗೂ ಕಾಲೇಜುಗಳನ್ನು ಕೋವಿಡ್ ಪ್ರಸರಣ ಕೇಂದ್ರಗಳನ್ನಾಗಿ ಮಾಡಲು ಹೊರಟಿದೆ' ಎಂದು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ ಕುಮಾರ್ ದೂರಿದ್ದಾರೆ.

'ಮಕ್ಕಳನ್ನು ಶಾಲೆ ಹಾಗೂ ಕಾಲೇಜುಗಳಿಗೆ ಕಳುಹಿಸಲು ಪೋಷಕರು ಹೆದರುತ್ತಿದ್ದಾರೆ' ಎಂದು ಹೇಳಿದರು.

ಕೋವಿಡ್ ಆರೈಕೆ ಕೇಂದ್ರ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಬಿಬಿಎಂಪಿ ಸಹಯೋಗದಲ್ಲಿ ಪ್ರಣವ್ ಫೌಂಡೇಷನ್ ಬೊಮ್ಮನಹಳ್ಳಿಯ ಆರ್‌ಎಂಆರ್ ಪಾರ್ಕ್‌ನಲ್ಲಿ ಕೋವಿಡ್ ಆರೈಕೆ ಕೇಂದ್ರ ಪುನರಾರಂಭಿಸಿದೆ.

ಈ ಕೇಂದ್ರದಲ್ಲಿ ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ 50 ಹಾಸಿಗೆಗಳನ್ನು ಅಳವಡಿಸಲಾಗಿದೆ. ಬಿಬಿಎಂಪಿ ವತಿಯಿಂದ 3 ಪರಿಣತ ವೈದ್ಯರು ಹಾಗೂ 9 ಶುಶ್ರೂಷಕರನ್ನು ನಿಯೋಜಿಸಲಾಗಿದೆ.

'ಕೋವಿಡ್ ಎರಡನೇ ಅಲೆಯಲ್ಲಿ ಹಾಸಿಗೆಗಳ ಅಭಾವ ಸೃಷ್ಟಿಯಾದಾಗ 15 ದಿನಗಳಲ್ಲಿ ಕೇಂದ್ರ ನಿರ್ಮಿಸಿ, ರೋಗಿಗಳನ್ನು ದಾಖಲಿಸಿಕೊಳ್ಳಲಾಗಿತ್ತು. ಸೋಂಕಿತರ ಸಂಖ್ಯೆ ಇಳಿಕೆಯಾದ ಬಳಿಕ ಈ ಕೇಂದ್ರವನ್ನು ಲಸಿಕೆ ವಿತರಣೆ ಹಾಗೂ ಆರೋಗ್ಯ ತಪಾಸಣೆಗೆ ಉಪಯೋಗಿಸಿಕೊಳ್ಳಲಾಯಿತು. ಈಗ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿರುವುದರಿಂದ ಕೇಂದ್ರವನ್ನು ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಲಾಗಿದೆ' ಎಂದು ಪ್ರಣವ್ ಫೌಂಡೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.



ಆರ್‌ಎಂಆರ್ ಪಾರ್ಕ್‌ನಲ್ಲಿ ನಿರ್ಮಿಸಿರುವ ಕೋವಿಡ್ ಆರೈಕೆ ಕೇಂದ್ರ

ಪ್ರವಾಸೋದ್ಯಮ :ವಾರಾಂತ್ಯ ಕರ್ಫ್ಯೂ ಬೇಡ

ಬೆಂಗಳೂರು: 'ಪ್ರಯಾಣ, ಪ್ರವಾಸ, ಆತಿಥ್ಯ ಸೇರಿದಂತೆ ಪ್ರವಾಸೋದ್ಯಮ ವಲಯಕ್ಕೆ ವಾರಾಂತ್ಯದ ಕರ್ಫ್ಯೂ ನಿರ್ಬಂಧಗಳನ್ನು ತೆಗೆದು ಹಾಕಬೇಕು' ಎಂದು ಕರ್ನಾಟಕ ಟೂರಿಸಂ ಸೊಸೈಟಿ ಒತ್ತಾಯಿಸಿದೆ.

ಈ ಸಂಬಂಧ ಸೊಸೈಟಿಯು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದೆ.'ಈಗ ತಾನೇ ಚೇತರಿಸಿಕೊಳ್ಳುತ್ತಿದ್ದ ಪ್ರವಾಸೋದ್ಯಮ ವಲಯ ಕೋವಿಡ್ ಮೂರನೇ ಅಲೆಯಿಂದಾಗಿ ಮತ್ತೆ ನೆಲಕಚ್ಚಿದೆ. ಪ್ರವಾಸೋದ್ಯಮ ಅವಲಂಬಿಸಿದ್ದ ಬಹುತೇಕರು ಜೀವನ ನಿರ್ವಹಣೆಗೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ' ಎಂದು ಕರ್ನಾಟಕ ಟೂರಿಸಂ ಸೊಸೈಟಿ ಅಧ್ಯಕ್ಷ ಕೆ.ಶ್ಯಾಮರಾಜು ಬೇಸರ ವ್ಯಕ್ತಪಡಿಸಿದ್ದಾರೆ.

'ಈ ವಲಯದಲ್ಲಿ ಕಾರ್ಯನಿರ್ವಹಿಸುವವರು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದು, ಮುಂಜಾಗ್ರತಾ ಕ್ರಮಗಳನ್ನು ಪಾಲಿಸುತ್ತಿದ್ದಾರೆ. ರಾಜ್ಯದಲ್ಲಿ ಪ್ರವಾಸೋದ್ಯಮ ವಲಯಕ್ಕೆ ವಾರಾಂತ್ಯ ಕರ್ಫ್ಯೂ ನಿರ್ಬಂಧಗಳನ್ನು ತೆರವು ಮಾಡಬೇಕು. ' ಎಂದು ಆಗ್ರಹಿಸಿದ್ದಾರೆ.


ವಿದ್ಯಾರ್ಥಿನಿಗೆ ಹೊಡೆದ ಶಿಕ್ಷಕಿಗೆ ಶಿಕ್ಷೆ

ತುಮಕೂರು: ವಿದ್ಯಾರ್ಥಿನಿ ಸರಿಯಾಗಿ ಓದಲಿಲ್ಲ ಎಂಬ ಕಾರಣಕ್ಕೆ ಆಕೆ ಕಣ್ಣಿಗೆ ಹೊಡೆದು ಗಾಯಗೊಳಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯವು ಭಾರತ್ ಮಾತಾ ಶಾಲೆಯ ಶಿಕ್ಷಕಿ ಫರಹತ್ ಫಾತಿಮಾಗೆ 3 ವರ್ಷ ಕಠಿಣ ಸಜೆ ಮತ್ತು ₹10 ಸಾವಿರ ದಂಡ ವಿಧಿಸಿದೆ. ಶಿಕ್ಷಕಿ ವಿರುದ್ಧ 2011ರ ಫೆಬ್ರುವರಿ 17ರಲ್ಲಿ ಪ್ರಕರಣ ದಾಖಲಾಗಿತ್ತು

ಐಷಾರಾಮಿ ನಿವಾಸ ತೊರೆಯಲು ಮಲ್ಯಗೆ ಸೂಚನೆ

ಲಂಡನ್ (ಪಿಟಿಐ): ಲಂಡನ್‌ನ ಪ್ರಮುಖ ಸ್ಥಳದಲ್ಲಿರುವ ತಮ್ಮ ಐಷಾರಾಮಿ ನಿವಾಸಕ್ಕೆ ಸಂಬಂಧಿಸಿದಂತೆ ಕಾನೂನು ಸಮರದಲ್ಲಿ ಉದ್ಯಮಿ ವಿಜಯ್ ಮಲ್ಯ ಪರಾಭವಗೊಂಡಿದ್ದಾರೆ. ಸ್ವಿಸ್ ಬ್ಯಾಂಕ್ ಯುಬಿಎಸ್ ವಿವಾದಕ್ಕೆ ಸಂಬಂಧಿಸಿದಂತೆ ಈ ಮನೆಯಲ್ಲಿ ವಾಸವಿರಲು ಅವಕಾಶವನ್ನು ಬ್ರಿಟನ್‌ನ ಕೋರ್ಟ್ ನಿರಾಕರಿಸಿದೆ.


ಪ್ರಸ್ತುತ ಮನೆಯಲ್ಲಿ ಮಲ್ಯ ಅವರ



ವಿಜಯ್ ಮಲ್ಯ

ತಾಯಿ, 95 ವರ್ಷದ ಲಲಿತಾ ಅವರು ವಾಸವಿದ್ದಾರೆ. ಲಂಡನ್‌ನಲ್ಲಿ 18/19 ಕಾರ್ನ್‌ವಾಲ್ ಟೆರೆಸ್ ಐಷರಾಮಿ ವಸತಿ ಸಮುಚ್ಚಯವು, ದುಬಾರಿಯಾಗಿದ್ದು, ನೂರಾರು ಮಿಲಿಯನ್ ಪೌಂಡ್‌ಗಳ ಮೌಲ್ಯದ್ದಾಗಿದೆ ಎಂದೂ ಕೋರ್ಟ್ ಅಭಿಪ್ರಾಯಪಟ್ಟಿದೆ.

ವರ್ಚುವಲ್ ಸ್ವರೂಪದಲ್ಲಿ ವಿಚಾರಣೆ ನಡೆಸಿ ತೀರ್ಪು ನೀಡಿದ ಹೈಕೋರ್ಟ್ ಚಾನ್ಸರಿ ವಿಭಾಗದ, ಡೆಪ್ಯೂಟಿ ಮಾಸ್ಟರ್ ಮ್ಯಾಥ್ಯೂ ಮಾರ್ಷ್ ಅವರು, ಯುಬಿಎಸ್ ಬ್ಯಾಂಕ್‌ಗೆ ನೀಡಬೇಕಾದ 20.4 ಮಿಲಿಯನ್ ಸಾಲ ಮರುಪಾವತಿಗೆ ಮಲ್ಯ ಮತ್ತು ಕುಟುಂಬ ಸದಸ್ಯರಿಗೆ ಇನ್ನಷ್ಟು ಕಾಲಾವಕಾಶ ನೀಡಲು ಯಾವುದೇ ಸಮರ್ಥನೆಯಿಲ್ಲ ಎಂದು ಹೇಳಿದರು.




ಹೀಗೊಂದು ಲಸಿಕೆಯ ಕಥೆ

ಶರತ್ ಭಟ್ ಸೇರಾಜೆ

ಕೋವಿಡ್ ಎಂದು ಹೇಳಿದ ಕೂಡಲೇ, 'ಮಹಾಮಾರಿ', 'ಹೆಮ್ಮಾರಿ', 'ಮೃತ್ಯುದೇವತೆ', 'ರಣಕೇಕೆ', 'ಅಟ್ಟಹಾಸ' ಮುಂತಾದ ಪದಗಳು ತಂತಾನೆ ಮನಸ್ಸಿಗೆ ಬರುತ್ತವೆ ಅನ್ನಿಸುವಷ್ಟು ಬಿರುದುಗಳನ್ನು ಟಿವಿ ವಾಹಿನಿಗಳು ಈ ರೋಗಕ್ಕೆ ದಿನಕ್ಕೆ ನಾಲ್ಕು ಸಲ ಎಂಬಂತೆ ಕೊಟ್ಟಿವೆ. ಆದರೆ ಲಸಿಕೆಗೆ ಮಾತ್ರ ಪಾಪ ಕದನತ್ರಿಣೇತ್ರನೆಂದೋ, ರಿಪು ಕುರಂಗ ಕಂಠೀರವನೆಂದೋ, ಜಗದೇಕಮಲ್ಲನೆಂದೋ, ಪಡೆಮೆಚ್ಚೆ ಗಂಡನೆಂದೋ ಯಾರೂ ಬಿರುದುಗಳನ್ನು ಕೊಟ್ಟಂತೆ ಕಾಣುವುದಿಲ್ಲ! ಅದಕ್ಕೆ ಬಿರುದು, ಪ್ರಶಸ್ತಿಗಳು ಸಿಗದಿದ್ದರೆ ಏನಂತೆ, ಅದರ ಜನ್ಮವೃತ್ತಾಂತವನ್ನಾದರೂ ಒಂದಿನಿತು ಅರಿತರೆ ಅಷ್ಟಾದರೂ ಸಾಕು.

ಈ ಲಸಿಕೆಗಳು ನಿಜವಾಗಿಯೂ ಬಂದದ್ದು ಭಯಾನಕ, ಬೀಭತ್ಸ ಮುಂತಾದ ವಿಶೇಷಣಗಳಿಂದ ವಿವರಿಸಬೇಕಾದ ಸಿಡುಬುರೋಗಕ್ಕೆ ಉತ್ತರವಾಗಿ. 'ಗೌಳಿಗರು, ಹಾಲುವಿತರಕರು cowpox ಎಂದು ಕರೆಯಲ್ಪಟ್ಟ ರೋಗದ ಸಂಪರ್ಕಕ್ಕೆ ಬಂದವರಿಗೆ ಸಿಡುಬು ಬರುತ್ತಿಲ್ಲ – ಅಂತೊಬ್ಬ ಗಮನಿಸಿದ. ದನದ ಕೀವನ್ನು ತನ್ನ ಹೆಂಡತಿ ಮತ್ತು ಮಗುವಿನ ತೋಳಿಗೆ ಚುಚ್ಚುಮದ್ದಾಗಿ ಕೊಟ್ಟ, ಹಾಗೆ ಚುಚ್ಚಿದ ಮೇಲೆ ಅವರಿಗೆ ಸಿಡುಬು ಬರಲಿಲ್ಲ' ಎಂದು ಹೇಳಿದರೆ ನಾನು ಹೇಳುತ್ತಿರುವುದು ಬ್ರಿಟಿಷ್ ವೈದ್ಯ ಎಡ್ವರ್ಡ್ ಜೆನ್ನರನ ಕಥೆ ಎಂದು ಯಾರಿಗಾದರೂ ಅನ್ನಿಸಬಹುದು. ಆದರೆ ಇದು ಬೆಂಜಮಿನ್ ಜೆಸ್ಟಿ ಎಂಬ ಬ್ರಿಟಿಷ್ ರೈತನೊಬ್ಬನ ಕಥೆ! ಜೆನ್ನರನ ಆವಿಷ್ಕಾರಕ್ಕಿಂತ ಇಪ್ಪತ್ತೆರಡು ವರ್ಷ ಹಿಂದಿನ ಘಟನೆಯಿದು.

ಜೆನ್ನರನು ಲಸಿಕೆಯನ್ನು ಕಂಡು ಹಿಡಿದ ವಿಧಾನವೂ ಹೆಚ್ಚು ಕಡಮೆ ಹೀಗೇ ಇರುವುದನ್ನು ನೋಡಿದರೆ ಇದು ಕಾಕತಾಳೀಯವೋ ಅವನಿಗೆ ಜೆಸ್ಟಿ ಕಂಡು ಹಿಡಿದದ್ದರ ಪರಿಚಯವಿತ್ತೋ ಹೇಳುವುದು ಕಷ್ಟ. ಏನೇ ಆದರೂ ಅದಕ್ಕೆ ಪ್ರಚಾರ ಕೊಟ್ಟು, ಲಸಿಕೆಯನ್ನು ಪೇಟೆಂಟ್ ಮಾಡಿಸದೇ, ಅದರಿಂದ ದುಡ್ಡು ಮಾಡದೇ ಅದನ್ನು ಜನರಿಗೆ ಉಪಕಾರವಾಗಲಿ ಎಂದು ತೀರ್ಮಾನಿಸಿದ ಸಜ್ಜನಿಕೆ ಜೆನ್ನರನದ್ದು. ಜೆಸ್ಟಿ ಹೀಗೆ ದನದ ಕೀವನ್ನು ಚುಚ್ಚಿದ್ದು ಸುತ್ತಮುತ್ತಲಿನವರ ಸಿಟ್ಟಿಗೆ ಕಾರಣವಾಯಿತು ಎಂದು ಕಾಣುತ್ತದೆ. ಮತ್ತು ಅದಕ್ಕೆ ಪ್ರಚಾರ ಕೊಡುವ ಕೆಲಸವನ್ನೂ ಜೆಸ್ಟಿ ಮಾಡದೇ ಹೋದದ್ದರಿಂದ ಈ ಪರಿಹಾರ ಜನಪ್ರಿಯವಾಗದೇ ಹೋಯಿತು. ಆಗಿನ ಕಾಲದಲ್ಲಿ ಸಿಡುಬಿನಿಂದ 400,000 ಯುರೋಪಿಯನ್ನರು ಸಾಯುತ್ತಿದ್ದರು; ಅಂದರೆ ಜೆಸ್ಟಿಯ ಮದ್ದಿಗೆ ಸಿಕ್ಕಿದ ಉಪೇಕ್ಷೆಗೆ ಅದೆಂಥ ಭಾರೀ ಬೆಲೆಯನ್ನೇ ತೆತ್ತಂತಾಯಿತು!





ಎಡ್ವರ್ಡ್ ಜೆನ್ನರ್ ಎಂಬವನು ಈ ಲಸಿಕೆಯ ಕ್ರಮವನ್ನು ಕಂಡು ಹಿಡಿದದ್ದು ಎಂದು ಈಗ ಸಾಧಾರಣವಾಗಿ ಹೇಳುತ್ತೇವಾದರೂ ವಿಷಯ ಅಷ್ಟು ಸರಳವಾಗಿಲ್ಲ, ಮತ್ತು ವಿಜ್ಞಾನದ ಆವಿಷ್ಕಾರಗಳು ಶೂನ್ಯದಿಂದ ಉದ್ಭವಿಸುವುದಿಲ್ಲ ಎಂಬ ಮಾತು ಲಸಿಕೆಯ ವಿಚಾರದಲ್ಲೂ ಸತ್ಯ ಅನ್ನಲಿಕ್ಕೆ ಇಷ್ಟು ಹೇಳಬೇಕಾಯಿತು. 'ಹೊಸತು ಶೂನ್ಯದಿಂದ ಹುಟ್ಟುವುದಿಲ್ಲ' ಎನ್ನುವುದು ಜೆಸ್ಟಿಯ ಆವಿಷ್ಕಾರಕ್ಕೂ ಅನ್ವಯಿಸುವ ಮಾತೇ.

ಈ ಲಸಿಕೆಗೂ ಮೊದಲು ಇದ್ದ variolation ಎಂಬ ಚಿಕಿತ್ಸೆಯೂ ಲಸಿಕೆಯ ಕ್ರಮಕ್ಕಿಂತ ಒರಟಾದ, ಆದರೆ ಒಂದು ಮಟ್ಟಕ್ಕೆ ಇದನ್ನು ಹೋಲುವ ಮದ್ದಿನ ಕ್ರಮವೇ. ರೋಗ ಇದ್ದವರ ದೇಹದಿಂದ ಕೀವು ತೆಗೆದು ತಮಗೇ ಸಣ್ಣಮಟ್ಟದಲ್ಲಿ ರೋಗ ಬರಿಸಿಕೊಳ್ಳುವ ಕ್ರಮ ಅದು. ಅದು ಎಲ್ಲಿಂದ ಬಂತು ಎಂದು ಹುಡುಕಿದರೆ ಟರ್ಕಿಯಿಂದ ಬ್ರಿಟನ್ನಿಗೆ ಬಂತು ಎಂಬುದು ಗೊತ್ತಾಗುತ್ತದೆ. ಆಗ ಟರ್ಕಿಯಲ್ಲಿ ರಾಯಭಾರಿಯಾಗಿದ್ದ ಲಾರ್ಡ್ ಮೊಂಟೆಗ್ಯೂ ಎಂಬವನ ಪತ್ನಿಯೇ ಇದನ್ನು ಪ್ರಚಾರ ಮಾಡಿದವಳು. ಅವಳಿಗೆ ಈ ಉಪಾಯ ಸಿಕ್ಕಿದ್ದು ಟರ್ಕಿಯ ಅವಳ ಗೆಳತಿಯರಿಂದ. ಟರ್ಕಿಗೆ ಇದು ಎಲ್ಲಿಂದ ಬಂತು ಎಂದು ಹುಡುಕಿದರೆ, ಚೀನಾ ಅಥವಾ ಭಾರತದಿಂದ ಇರಬಹುದು ಎಂಬ ಊಹೆಗಳು ಸಿಗುತ್ತವೆ!

ರಾಬರ್ಟ್ ಕೋಲ್ಟ್ ಎಂಬ ಸರ್ಜನ್ ಒಬ್ಬ ಒಲಿವರ್ ಕೋಲ್ಟ್ ಅನ್ನುವ ಇನ್ನೊಬ್ಬ ವೈದ್ಯನಿಗೆ 1731ರಲ್ಲಿ ಬರೆದ ಪತ್ರವೊಂದರಲ್ಲಿ ಭಾರತದ ಈ ತರದ ಚಿಕಿತ್ಸಾ ವಿಧಾನದ ಉಲ್ಲೇಖ ಸಿಗುತ್ತದೆಯಂತೆ. ರಾಬರ್ಟ್ ಕೋಲ್ಟ್ ಹೇಳುವ ಪ್ರಕಾರ ಭಾರತದಲ್ಲಿ ಅದಕ್ಕೂ 150 ವರ್ಷಗಳಷ್ಟು ಹಿಂದೆಯೇ ಇಂಥದ್ದೊಂದು ಚಿಕಿತ್ಸಾಪದ್ಧತಿ ಇತ್ತಂತೆ. ಕಬ್ಬಿಣದ ಸೂಜಿಯನ್ನು ರೋಗಿಯ ಬೊಕ್ಕೆಗೆ ಚುಚ್ಚಿ ತೆಗೆದು ಅನಂತರ ವೃತ್ತಾಕಾರವಾಗಿ ತೋಳಿಗೆ ಚುಚ್ಚುವುದು ಆ ಕಾಲದ ವ್ಯಾಕ್ಸಿನೇಷನ್ ಆಗಿದ್ದಂತೆ ತೋರುತ್ತದೆ. ಚುಚ್ಚುವುದಕ್ಕೆ ಬಳಸುವ ವಸ್ತುವನ್ನು ಒಂದೆರಡು ತಲೆಮಾರುಗಳಷ್ಟು ಕಾಲ ಸಂರಕ್ಷಿಸಿ ಬೇರೆ ಇಡುತ್ತಿದ್ದರಂತೆ. Charles Chais ಎಂಬ ಫ್ರೆಂಚ್ ಪಾದ್ರಿಯೊಬ್ಬ ಬರೆದ ಪುಸ್ತಕವೊಂದರಲ್ಲಿಯೂ ಭಾರತದಲ್ಲಿ ಬಹುಕಾಲದಿಂದಲೂ ಈ ಚಿಕಿತ್ಸಾವಿಧಾನ ಇದ್ದದ್ದರ ಉಲ್ಲೇಖ ಇರುವುದಾಗಿ ತಿಳಿಯುತ್ತದೆ.

ಮತ್ತೆ ಜೆನ್ನರನ ವಿಷಯಕ್ಕೇ ಬರುವುದಾದರೆ, 1802ರಲ್ಲಿ ಅವನ ಲಸಿಕೆಗೆ ಪ್ರಚಾರ ಸಿಕ್ಕಾಗ ಅದಕ್ಕೆ ಬಂದ ವಿರೋಧ ಒಂದೆರಡಲ್ಲ. ಜನ ದನಗಳಂತಾಗಿ ಹೋಗುತ್ತಾರೆ ಎಂಬಲ್ಲಿಂದ, ಲಸಿಕೆ ತೆಗೆದುಕೊಂಡವರ ದೇಹದಿಂದ ಯಾವುದೋ ವಿಚಿತ್ರ ದ್ರವ ಸುರಿಯುತ್ತದೆ ಅನ್ನುವವರೆಗೆ ಅಪಪ್ರಚಾರಗಳು ಇದ್ದವಂತೆ (ಟಾಲಸ್ಟಾಯ್, ಬರ್ನಾರ್ಡ್ ಷಾ ತರದವರೂ ಆಮೇಲೆ ಲಸಿಕೆಗಳನ್ನು ವಿರೋಧಿಸಿದರು ಅಂದರೆ ಆಶ್ಚರ್ಯವೇ). ಒಬ್ಬ ವ್ಯಂಗ್ಯಚಿತ್ರಕಾರನಂತೂ ಲಸಿಕೆ ತೆಗೆದುಕೊಂಡು ಕಾಲಿನಲ್ಲಿ ಗೊರಸು ಬರಿಸಿಕೊಂಡಿರುವ, ತಲೆಯಲ್ಲಿ ಕೊಂಬು ಮೊಳೆತಿರುವ ಜನರ ಕಾರ್ಟೂನು ಬಿಡಿಸಿಬಿಟ್ಟಿದ್ದನಂತೆ! ಇಂಥ ಪೊಳ್ಳುಸುದ್ದಿಗಳಿಂದ ಇಲ್ಲಿನ ಜನ ಹೆದರಿಯಾರು ಅಂತಲೋ ಏನೋ, ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ಅವರ ಕಿರಿಯ ರಾಣಿಯಾದ ದೇವಜಮ್ಮಣ್ಣಿ ಅವರಿಗೆ ಮೊದಲ ಲಸಿಕೆ ಕೊಡಿಸಿ, ಅದರ ವರ್ಣಚಿತ್ರವನ್ನೂ ಬರೆಸಿ ಜೆನ್ನರನ ಲಸಿಕೆಯ ಪರ ಪ್ರಚಾರ ಮಾಡಿದ್ದರಂತೆ. ಹೀಗಿದೆ ಲಸಿಕೆಯ ಕಥೆ.

ಚಾಲಕನಿಲ್ಲದೆ ಹೊಲದ ಕೆಲಸ

ಚಾಲಕರಹಿತ ವಾಹನಗಳು ಈ ಬಾರಿಯ 'ಸಿಇಎಸ್'ನಲ್ಲಿ ಹೆಚ್ಚು ಸದ್ದು ಮಾಡಿದವು. ಇವುಗಳಲ್ಲಿ ಜಾನ್ ಡೀರೊ ಅಟಾನಮಸ್ ಟ್ರ್ಯಾಕ್ಟರ್ ಕೂಡ ಒಂದು. ಇದದಲ್ಲಿ ಕ್ಯಾಮೆರಾ ಸೇರಿದಂತೆ ತಂತ್ರಜ್ಞಾನ ಆಧಾರಿತ ವಿವಿಧ ಉಪಕರಣಗಳನ್ನು ಅಳವಡಿಸಲಾಗಿದೆ. ಈ ಉಪಕರಣಗಳಿಂದಾಗಿ ಹೊಲದಲ್ಲಿ ಚಾಲಕನ ಸಹಾಯವಿಲ್ಲದೆ ಸ್ವಯಂಚಾಲಿತವಾಗಿ ಈ ಟ್ರ್ಯಾಕ್ಟರ್ ಕಾರ್ಯನಿರ್ವಹಿಸುತ್ತದೆ. ಸ್ಮಾರ್ಟ್‌ಫೋನ್ ನೆರವಿನಿಂದ ರೈತರು ಈ ಟ್ರ್ಯಾಕ್ಟರನ್ನು ನಿಯಂತ್ರಿಸಬಹುದು.



ಊಸರವಳ್ಳಿ ಕಾರುಗಳು!

ಪೃಥ್ವಿರಾಜ್

ಅತ್ಯಾಧುನಿಕ ತಂತ್ರಜ್ಞಾನ ಪ್ರದರ್ಶನಕ್ಕೆ ವೇದಿಕೆಯನ್ನು ಕಲ್ಪಿಸುವ ವಿಶ್ವದ ಅತಿದೊಡ್ಡ ಟೆಕ್ ಹಬ್ಬ 'ಸಿಇಎಸ್' (ಕನ್ಸ್ಯೂಮರ್ ಎಲೆಕ್ಟ್ರಾನಿಕ್ ಶೋ) ಈಚೆಗೆ ಅಮೆರಿಕದ ಲಾಸ್‌ವೆಗಾಸ್‌ನಲ್ಲಿ ಸಂಪನ್ನವಾಯಿತು. ನಿಬ್ಬೆರಗಾಗಿಸುವ ಅದ್ಭುತ ಆವಿಷ್ಕಾರಗಳು ತಂತ್ರಜ್ಞಾನ ಪ್ರಿಯರ ಗಮನ ಸೆಳೆದವು. ಅಂತಹ ಕೆಲವು ಆವಿಷ್ಕಾರಗಳ ಮಾಹಿತಿ ಇಲ್ಲಿದೆ.

ವಿಲಾಸಿಕಾರುಗಳನ್ನು ತಯಾರಿಸುವ ಬಿಎಂಡಬ್ಲ್ಯು ಸಂಸ್ಥೆ ಕ್ಷಣಾರ್ಧದಲ್ಲಿ ಬಣ್ಣ ಬದಲಿಸುವಂಥಹ ಅದ್ಭುತ ಕಾರನ್ನು ಈ ಬಾರಿಯ 'ಸಿಇಎಸ್'ನಲ್ಲಿ ಪ್ರದರ್ಶಿಸಿತು. ಒಂದು ಬಟನ್ ಒತ್ತಿದರೆ ಸಾಕು ಬಿಎಂಡಬ್ಲ್ಯು ಐಎಕ್ಸ್ ಫ್ಲೊ (BMW IX FLOW) ಹೆಸರಿನ ಈ ಐಷಾರಾಮಿ ಕಾರಿನ ಬಣ್ಣ ಬದಲಾಗುತ್ತದೆ. ಎಲೆಕ್ಟ್ರೊ ಫೊರೆಟಿಕ್ ತಂತ್ರಜ್ಞಾನ ಆಧರಿಸಿ ಇದು ಕಾರ್ಯನಿರ್ವಹಿಸುತ್ತದೆಯಂತೆ. ಈ ಕಾರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಸ್ಥೆ ಇನ್ನೂ ಹೊರಡಿಸಿಲ್ಲ. ಆದರೆ ಕಾರಿನ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.





ಬ್ಯಾಟರಿ ಇಲ್ಲದ ರಿಮೋಟ್

ಇ-ತ್ಯಾಜ್ಯ ಪ್ರಮಾಣ ಕಡಿಮೆ ಮಾಡುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿರುವ ಸ್ಯಾಮ್‌ಸಂಗ್ ಬ್ಯಾಟರಿಗಳ ಅಗತ್ಯವಿಲ್ಲದೆ ಕಾರ್ಯನಿರ್ವಹಿಸುವಂಥ ವಿಶೇಷ ರಿಮೋಟ್ ತಯಾರಿಸಿದೆ. ಇದರಲ್ಲಿ ವಿಶೇಷ ರೀತಿಯ ಸೌರಫಲಕಗಳನ್ನು ಅಳವಡಿಸಲಾಗಿದ್ದು, ಸೌರಶಕ್ತಿಯ ನೆರವಿನಿಂದ ಈ ರಿಮೋಟ್ ಕಾರ್ಯನಿರ್ವಹಿಸುತ್ತದೆ ಎಂದು ಸಂಸ್ಥೆ ಹೇಳಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 1: ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

ವಿಜ್ಞಾನ | **ಎಸ್ಸೆಸ್ಸೆಲ್ಸಿ**

ಪ್ರಮುಖಾಂಶಗಳು:

ಸಂಯೋಗಕ್ರಿಯೆ: ಎರಡು/ಹೆಚ್ಚು ಪ್ರತಿವರ್ತಕಗಳು ಸೇರಿ ಒಂದು ಉತ್ಪನ್ನವಾಗುವಿಕೆ.

ವಿಭಜನ ಕ್ರಿಯೆ: ಒಂದು ಪ್ರತಿವರ್ತಕ ವಿಭಜಿಸಿ ಎರಡು/ಹೆಚ್ಚು ಉತ್ಪನ್ನಗಳಾಗುವಿಕೆ.

ಸ್ಥಾನಪಲ್ಲಟ ಕ್ರಿಯೆ: ಹೆಚ್ಚು ಕ್ರಿಯಾಶೀಲ ಧಾತುಗಳು ಸಂಯುಕ್ತದಲ್ಲಿನ ಕಡಿಮೆ ಕ್ರಿಯಾಶೀಲ ಧಾತುಗಳನ್ನು ಸ್ಥಾನಪಲ್ಲಟಗೊಳಿಸುವಿಕೆ.

ದ್ವಿಸ್ಥಾನಪಲ್ಲಟ ಕ್ರಿಯೆ: ಪ್ರತಿವರ್ತಕಗಳ ನಡುವೆ ಅಯಾನುಗಳ ವಿನಿಮಯವಾಗುವಿಕೆ.

ಉತ್ಕರ್ಷಣೆ: ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು O_2 ಪಡೆದುಕೊಳ್ಳುವಿಕೆ/ H_2 ಕಳೆದುಕೊಳ್ಳುವಿಕೆ.

ಅಪಕರ್ಷಣೆ: ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು H_2 ಪಡೆದುಕೊಳ್ಳುವಿಕೆ/ O_2 ಕಳೆದುಕೊಳ್ಳುವಿಕೆ.

ರೆಡಾಕ್ಸ್ ಕ್ರಿಯೆ: ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣೆಗೊಂಡು ಮತ್ತೊಂದು ಪ್ರತಿವರ್ತಕವು ಅಪಕರ್ಷಣೆಗೊಳ್ಳುವಿಕೆ.

ಬಹಿರುಷ್ಣಕ ಕ್ರಿಯೆ: ರಾಸಾಯನಿಕಕ್ರಿಯೆ ನಡೆದಾಗ ಉತ್ಪನ್ನದ ಜೊತೆಗೆ ಶಕ್ತಿಯು ಉಷ್ಣದ ರೂಪದಲ್ಲಿ ಬಿಡುಗಡೆಯಾಗುವಿಕೆ.

ಅಂತರುಷ್ಣಕ ಕ್ರಿಯೆ: ರಾಸಾಯನಿಕಕ್ರಿಯೆ ನಡೆದಾಗ ಉತ್ಪನ್ನದ ಜೊತೆಗೆ ಶಕ್ತಿಯು ಉಷ್ಣದ ರೂಪದಲ್ಲಿ ಹೀರಿಕೆಯಾಗುವಿಕೆ.

ನಶಿಸುವಿಕೆ: ಲೋಹವು ತನ್ನ ಸುತ್ತಲಿನ ಗಾಳಿ, ತೇವಾಂಶ, ಆಮ್ಲಗಳೊಂದಿಗೆ ವರ್ತಿಸಿ, ತನ್ನ ಗುಣಗಳನ್ನು ಕಳೆದುಕೊಂಡು ಹಾಳಾಗುವಿಕೆ.

ಕಮಟುವಿಕೆ: ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಸುತ್ತಲಿನ ಗಾಳಿಯೊಂದಿಗೆ ವರ್ತಿಸಿ ಉತ್ಕರ್ಷಣೆಗೊಂಡು, ಅವುಗಳ ವಾಸನೆ ಮತ್ತು ರುಚಿ ಬದಲಾಗುವಿಕೆ.

ಸಂಭವನೀಯ ಪ್ರಶ್ನೆಗಳು– ಉತ್ತರಗಳು

1.ರಾಸಾಯನಿಕ ಕ್ರಿಯೆ ನಡೆದಿದೆ ಎಂದು ನಿರ್ಧರಿಸುವ ಅಂಶಗಳಾವುವು?

1.ಸ್ಥಿತಿ ಬದಲಾವಣೆ
2.ಬಣ್ಣದಲ್ಲಿ ಬದಲಾವಣೆ
3.ತಾಪದಲ್ಲಿ ಬದಲಾವಣೆ
4.ಅನಿಲದ ಬಿಡುಗಡೆ

2. ಈ ರಾಸಾಯನಿಕ ಕ್ರಿಯೆಗಳ ಸಮೀಕರಣ ಬರೆದು ಸರಿದೂಗಿಸಿರಿ.

ಎ) ಕಬ್ಬಿಣವು ತೇವಾಂಶದೊಂದಿಗೆ ವರ್ತಿಸಿದಾಗ

$Fe + 4H_2O \longrightarrow Fe_3O_4 + 4H_2$

ಬಿ) ಸೋಡಿಯಂ ಚೂರೊಂದನ್ನು ನೀರಿಗೆ ಹಾಕಿದಾಗ

$2Na + 2H_2O \longrightarrow 2NaOH + H_2$

ಸಿ) ಸೀಸದ ನೈಟ್ರೇಟ್ ಪುಡಿಯನ್ನು ಕಾಸಿದಾಗ

$2Pb(NO_3)_2 \longrightarrow 2PbO + 4NO_2 + O_2$

ಡಿ) ನೈಸರ್ಗಿಕ ಅನಿಲದ ದಹನ

$CH_4 + 2O_2 \longrightarrow CO_2 + 2H_2O$

3.ವಿಭಜನಾ ಕ್ರಿಯೆಯ ಮೂರು ವಿಧಗಳನ್ನು ಹೆಸರಿಸಿ. ಪ್ರತಿಯೊಂದಕ್ಕೂ ಉದಾಹರಣೆ ಕೊಡಿ.

*ಉಷ್ಣ ವಿಭಜನಾ ಕ್ರಿಯೆ.

ಉದಾ॥ $CaCO_3 \longrightarrow CaO + CO_2$

*ವಿದ್ಯುದ್ವಿಭಜನಾ ಕ್ರಿಯೆ.

$2H_2O \longrightarrow 2H_2 + O_2$

*ದ್ಯುತಿ ವಿಭಜನಾ ಕ್ರಿಯೆ.

ಉದಾ: $2AgCl \longrightarrow 2Ag + Cl_2$

4.ರೆಡಾಕ್ಸ್ ಕ್ರಿಯೆ ಎಂದರೇನು? ಉದಾಹರಣೆ ಕೊಡಿ.

ಒಂದು ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣೆಗೊಂಡು, ಮತ್ತೊಂದು ಪ್ರತಿವರ್ತಕವು ಅಪಕರ್ಷಣೆಗೊಂಡರೆ, ಅಂತಹ ಕ್ರಿಯೆಯನ್ನು ರೆಡಾಕ್ಸ್ ಕ್ರಿಯೆ ಎನ್ನುವರು.

ಉದಾ: $CuO + H_2 \longrightarrow Cu + H_2O$

5.ಸೋಡಿಯಂ ಸಲ್ಫೇಟ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ಬೇರಿಯಂ ಕ್ಲೋರೈಡ್ ದ್ರಾವಣವನ್ನು ಸೇರಿಸಿದಾಗ ಉಂಟಾಗುವ ಪ್ರಕ್ಷೇಪ ಯಾವುದು? ಈ ಕ್ರಿಯೆಯ ಸಮೀಕರಣ ಬರೆಯಿರಿ.

ಬೇರಿಯಂಸಲ್ಫೇಟ್ ($BaSO_4$)

$Na_2SO_4 + BaCl_2 \longrightarrow BaSO_4 + 2NaCl$

ಅನ್ವಯ ಮಾದರಿ ಪ್ರಶ್ನೆಗಳು– ಉತ್ತರಗಳು.

6.ಚಿಪ್ಸ್ ಪೊಟ್ಟಣದಲ್ಲಿ ನೈಟ್ರೋಜನ್‌ನಂತಹ ಅನಿಲವನ್ನು ಹಾಯಿಸುತ್ತಾರೆ. ಏಕೆ?

ಏಕೆಂದರೆ ನೈಟ್ರೋಜನ್ ಚಿಪ್ಸ್ ಉತ್ಕರ್ಷಣೆಗೊಳ್ಳುವುದನ್ನು ತಡೆಗಟ್ಟುತ್ತದೆ.

7.ಒಂದು ಬೀಕರ್‌ನಲ್ಲಿ ಸುಟ್ಟಸುಣ್ಣವನ್ನು ತೆಗೆದುಕೊಂಡು, ಅದಕ್ಕೆ ಸ್ವಲ್ಪ ನೀರನ್ನು ಸೇರಿಸಿ. ಬೀಕರಿನ ತಳಭಾಗವನ್ನು ಮುಟ್ಟಿದಾಗ ನಿಮಗಾಗುವ ಅನುಭವವೇನು? ಏಕೆ?

ಬೀಕರ್ ಬಿಸಿಯಾಗಿರುತ್ತದೆ. ಏಕೆಂದರೆ ಇದೊಂದು ಬಹಿರುಷ್ಣಕ ಕ್ರಿಯೆಯಾಗಿದ್ದು ಉಷ್ಣ ಬಿಡುಗಡೆಯಾಗುತ್ತದೆ.

8.ಫೆರಸ್ ಸಲ್ಫೇಟ್ ಹರಳುಗಳನ್ನು ಶುಷ್ಕ ಕುದಿಗೊಳವೆಯಲ್ಲಿ ಕಾಸಿದಾಗ ಅದರ ಬಣ್ಣ ಬದಲಾಗುತ್ತದೆ. ಏಕೆ?


ಏಕೆಂದರೆ ಕಾಯಿಸಿದಾಗ ನೀರಿನ ಅಣುಗಳನ್ನು ಕಳೆದುಕೊಳ್ಳುತ್ತವೆ.

9.ಬೆಳ್ಳಿಯ ಕ್ಲೋರೈಡ್ ದ್ರಾವಣವನ್ನು ಸೂರ್ಯನ ಬೆಳಕಿನಲ್ಲಿಟ್ಟರೆ, ಅದು ಬೂದುಬಣ್ಣಕ್ಕೆ ತಿರುಗುತ್ತದೆ. ಏಕೆ ?

ಏಕೆಂದರೆ ಬೆಳಕು ಬೆಳ್ಳಿಯ ಕ್ಲೋರೈಡ್‌ನ್ನು ಬೆಳ್ಳಿ ಮತ್ತು ಕ್ಲೋರಿನ್ ಆಗಿ ವಿಭಜಿಸುತ್ತದೆ.

ಪರೀಕ್ಷೆಗೆ ಸಂಭವನೀಯ ಚಿತ್ರ:

10. ನೀರಿನ ವಿದ್ಯುದ್ವಿಭಜನೆಯ ಚಿತ್ರ ಬರೆದು ಭಾಗಗಳನ್ನು ಗುರ್ತಿಸಿ.



ಬಾಲರಾಜು.ಎ, ಎಂ.ಎಸ್ಸಿ.,ಎ.ಇಡಿ,
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಮಾತೃಕೆಗಳು (MATRICES)

ದ್ವಿತೀಯ ಪಿಯುಸಿ

ಗಣಿತ

- ಮಾತೃಕೆಯ ಸಂಕೇತ ಪದ್ಧತಿ ಮತ್ತು ಪ್ರಕ್ರಿಯೆಗಳು, ಗಣಕಯಂತ್ರದಲ್ಲಿ ವಿದ್ಯುನ್ಮಾನದ ಸ್ಪ್ರೆಡ್ ಶೀಟ್ (spread sheet) ಕಾರ್ಯಕ್ರಮಗಳಿಗೆ ಉಪಯೋಗವಾಗುವುದು, ಮತ್ತು ವಾಣಿಜ್ಯದ ಹಾಗೂ ವಿಜ್ಞಾನದ ವಿವಿಧ ಭಾಗಗಳಾದ ಅಂದರೆ ಅಂದಾಜು ಪಟ್ಟಿ (budget) ತಯಾರಿಸಲು, ವ್ಯಾಪಾರದ ಪ್ರಕ್ಷೇಪಣಿಗೆ (projection) ಬೆಲೆಯ ಅಂದಾಜು ಮಾಡಲು, ಪ್ರಯೋಗಗಳ ಫಲಿತಾಂಶವನ್ನು ವಿಶ್ಲೇಷಿಸಲು, ಹೀಗೆ ಹಲವು ಕಡೆಗಳಲ್ಲಿ ಉಪಯೋಗಿಸುತ್ತಾರೆ.
- ಮಾತೃಕೆಗಳನ್ನು ಬಹಳಷ್ಟು ಭೌತಿಕ ಪ್ರಕ್ರಿಯೆಗಳಾದ ಸಮತಲದ ಮುಖಾಂತರ ನಡೆಯುವ ವರ್ಧನೆ (Magnification) ಸುತ್ತುವಿಕೆ (rotation) ಮತ್ತು ಪ್ರತಿಫಲನ (reflexion)ಗಳನ್ನು ಗಣಿತರೂಪದಲ್ಲಿ ಪ್ರತಿನಿಧಿಸಲು ಉಪಯೋಗಿಸುತ್ತಾರೆ. ಅದಲ್ಲದೇ ಗೂಢಲಿಪಿ ಅಧ್ಯಯನ (cryptography)ದಲ್ಲೂ ಮಾತೃಕೆಯನ್ನು ಉಪಯೋಗಿಸುತ್ತೇವೆ. ಈ ಗಣಿತದ ಸಾಧನವನ್ನು ಕೇವಲ ಕೆಲವು ವಿಜ್ಞಾನ ವಿಭಾಗಗಳಲ್ಲಿ ಅಲ್ಲದೇ ತಳಿಶಾಸ್ತ್ರ (ಅನುವಂಶ ಶಾಸ್ತ್ರ), ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಆಧುನಿಕ ಮನಃಶಾಸ್ತ್ರ ಮತ್ತು ಔದ್ಯೋಗಿಕ ನಿರ್ವಹಣೆಗಳಲ್ಲಿಯೂ ಕೂಡಾ ಉಪಯೋಗಿಸಲಾಗುತ್ತದೆ.
- ಸಾಮಾನ್ಯವಾಗಿ ಮಾತೃಕೆಗಳಲ್ಲಿ ಈ ಕೆಳಗಿನವುಗಳು ಇರುತ್ತವೆ.

$$\begin{bmatrix} 15 & 6 \\ 10 & 2 \\ 13 & 5 \end{bmatrix} \begin{matrix} \leftarrow \text{ಮೊದಲನೇ ಅಡ್ಡಸಾಲು} \\ \leftarrow \text{ಎರಡನೇ ಅಡ್ಡಸಾಲು} \\ \leftarrow \text{ಮೂರನೇ ಅಡ್ಡಸಾಲು} \end{matrix}$$

↑ ಮೊದಲನೇ ಕಂಬಸಾಲು ↑ ಎರಡನೇ ಕಂಬಸಾಲು

ಮಾತೃಕೆಗಳ ನಮೂನೆಗಳು
(Types of matrices)

1) ಕಂಬಸಾಲು ಮಾತೃಕೆ (Column matrix)
ಉದಾ: $A = \begin{bmatrix} 0 \\ \sqrt{3} \\ -1 \\ 1/2 \end{bmatrix}$

2) ಅಡ್ಡಸಾಲು ಮಾತೃಕೆ (Row matrix)
ಉದಾ: $\begin{bmatrix} 1 & 2 & 3 \end{bmatrix}$

3) ವರ್ಗ ಮಾತೃಕೆ (Square matrix)
ಉದಾ: $\begin{bmatrix} 1 & 2 & 3 \\ 4 & 5 & 6 \\ 7 & 8 & 9 \end{bmatrix}$

4) ಕರ್ಣ ಮಾತೃಕೆ (Diagonal matrix)
ಉದಾ:- $\begin{bmatrix} a & 0 & 0 \\ 0 & b & 0 \\ 0 & 0 & c \end{bmatrix}$

5) ಅದಿಶ ಮಾತೃಕೆ (Scalar matrix)
ಉದಾ:- $\begin{bmatrix} a & 0 & 0 \\ 0 & a & 0 \\ 0 & 0 & a \end{bmatrix}$

- ಒಂದು ಕರ್ಣ ಮಾತೃಕೆಯಲ್ಲಿ ಕರ್ಣದ ಎಲ್ಲ ಅಂಶಗಳು ಸಮವಾಗಿದ್ದರೆ ಆ ಮಾತೃಕೆಯನ್ನು ಅದಿಶ ಮಾತೃಕೆ ಎನ್ನುವರು.

6) ಅನನ್ಯತಾ ಮಾತೃಕೆ (Identity matrix) ಉದಾ:

$$[1], \begin{bmatrix} 1 & 0 \\ 0 & 1 \end{bmatrix}, \begin{bmatrix} 1 & 0 & 0 \\ 0 & 1 & 0 \\ 0 & 0 & 1 \end{bmatrix}$$

- ಒಂದು ವರ್ಗ ಮಾತೃಕೆಯಲ್ಲಿ ಕರ್ಣದಲ್ಲಿನ ಅಂಶಗಳೆಲ್ಲವು 1 ಇದ್ದು, ಉಳಿದೆಲ್ಲ ಅಂಶಗಳು ಸೊನ್ನೆಯಾಗಿದ್ದಲ್ಲಿ ಆ ಮಾತೃಕೆಯನ್ನು ಅನನ್ಯತಾ ಮಾತೃಕೆ ಎನ್ನುವರು.

7) ಶೂನ್ಯ ಮಾತೃಕೆ (Zero matrix)
ಉದಾ:- $0 = \begin{bmatrix} 0 & 0 & 0 \\ 0 & 0 & 0 \end{bmatrix}$

- ಯಾವುದೇ ಮಾತೃಕೆಯಲ್ಲಿ, ಅದರ ಎಲ್ಲ ಅಂಶಗಳು ಸೊನ್ನೆಯಾಗಿದ್ದರೆ ಅದನ್ನು ಶೂನ್ಯ ಮಾತೃಕೆ (zero or null matrix) ಎನ್ನುವರು. ಮಾತೃಕೆಯನ್ನು ನಾವು '0' ದಿಂದ ಸೂಚಿಸುತ್ತೇವೆ. ಅದರ ದರ್ಜೆಯು ಸಂದರ್ಭಕ್ಕೆ ಅನುಗುಣವಾಗಿರುತ್ತದೆ.

ಸಮಸ್ಯೆ ಮತ್ತು ಪರಿಹಾರ

1) $\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$ ಆಗಿದ್ದರೆ

a, b, c, x, y ಮತ್ತು z. ಇದನ್ನು ಕಂಡುಹಿಡಿಯಿರಿ
ಪರಿಹಾರ: - ನೀಡಿರುವ ಮಾತೃಕೆಗಳು ಸಮಾನವಾಗಿವೆ

$x + 3 = 0 \Rightarrow x = -3$
$z + 4 = 6 \Rightarrow z = 6 - 4 \Rightarrow z = 2$
$a - 1 = -3 \Rightarrow a = -3 + 1 \Rightarrow a = -2$
$2c + 2 = 0 \Rightarrow c = \frac{-2}{2} \Rightarrow c = -1$
$b - 3 = 2b + 4 \Rightarrow 2b - b = -4 - 3 \Rightarrow b = -7$
$2y - 7 = 3y - 2 \Rightarrow 3y - 2y = -7 + 2 \Rightarrow y = -5$

2) $A = \begin{bmatrix} a+b & b^2+2 \\ 0 & -6 \end{bmatrix}$ & $B = \begin{bmatrix} 2a+1 & 3b \\ 0 & b^2-5b \end{bmatrix}$

ಹಾಗೂ A = B ಆಗಿದ್ದರೆ a ಮತ್ತು b ಕಂಡುಹಿಡಿಯಿರಿ
ಪರಿಹಾರ:A = B ದತ್ತ

$a + b = 2a + 1$ ....(i)
$b^2 + 2 = 3b$ ....(ii)
$-6 = b^2 - 5b$ ....(iii)
ಸಮೀಕರಣದಿಂದ (1)ರಿಂದ $b - a = 1$ ....(iv)
ಸಮೀಕರಣದಿಂದ (2)ರಿಂದ $b^2 - 3b + 2 = 0$ ......(v)
$(b-2)(b-1) = 0$
$\Rightarrow b = 2$ and $b = 1$

$b = 1$ ಎಂಬುದು ಸಮೀಕರಣ (iii)ಕ್ಕೆ ಸರಿ ಹೊಂದುವುದಿಲ್ಲ. ಆದ್ದರಿಂದ $b = 2$ ಸರಿ ಇದೆ, ಹಾಗೂ 2ನ್ನು ಸಮೀಕರಣ (iii) Substitue ಮಾಡಿದರೆ $a = 1$ ಬರುತ್ತದೆ ಹೀಗಾಗಿ a ಮತ್ತು b ಯ ಮೌಲ್ಯ 1 ಮತ್ತು 2 ಆಗಿದೆ

3) $\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$

ಆದಾಗ a, b, c, x, y ಮತ್ತು z ಗಳ ಬೆಲೆಯನ್ನು ಕಂಡುಹಿಡಿಯಿರಿ.

(ಮುಂದುವರಿಯುವುದು....)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು



ಸುಭಾಷಿತ

ಸೋಮಾರಿತನದಿಂದ ಕಾಲ ಕಳೆಯುವುದು ಅತ್ಯಂತ ಅಪಮಾನಕರವಾದ ನಡತೆ.

-ಲಿಯೊ ಟಾಲ್‌ಸ್ಟಾಯ್

ಗಣರಾಜ್ಯೋತ್ಸವ ಸ್ತಬ್ಧಚಿತ್ರ ವಿವಾದ ಆಯ್ಕೆಯಲ್ಲಿ ಇರಲಿ ಪಾರದರ್ಶಕತೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿರುವ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸಲು ಪಶ್ಚಿಮ ಬಂಗಾಳ, ಕೇರಳ ಹಾಗೂ ತಮಿಳುನಾಡು ರಾಜ್ಯ ಸರ್ಕಾರಗಳು ಸಲ್ಲಿಸಿದ್ದ ಸ್ತಬ್ಧಚಿತ್ರ ಪ್ರಸ್ತಾವಗಳು ತಿರಸ್ಕೃತಗೊಂಡಿರುವುದು ವಿವಾದಕ್ಕೆ ಎಡೆಮಾಡಿದೆ. ಗಣರಾಜ್ಯೋತ್ಸವದ ಪರೇಡ್‌ಗೆ ತಮ್ಮ ರಾಜ್ಯದ ಸ್ತಬ್ಧಚಿತ್ರಗಳು ಆಯ್ಕೆಗೊಳ್ಳದಿರುವ ಬಗ್ಗೆ ಈ ರಾಜ್ಯಗಳು ತೀವ್ರ ನಿರಾಶೆ ವ್ಯಕ್ತಪಡಿಸಿದ್ದು, ಕೇಂದ್ರ ಸರ್ಕಾರದ ವಿರುದ್ಧ ಅಸಮಾಧಾನ ತೋಡಿಕೊಂಡಿವೆ. ಸ್ತಬ್ಧಚಿತ್ರಗಳ ಆಯ್ಕೆ ಪ್ರಕ್ರಿಯೆಯಲ್ಲಿ ರಾಜಕೀಯ ಹಿತಾಸಕ್ತಿ ಕೆಲಸ ಮಾಡಿದೆ ಎಂದು ವಿರೋಧ ಪಕ್ಷಗಳು ದೂರಿವೆ. ದೇಶ ಕಂಡ ಬಹುದೊಡ್ಡ ದಾರ್ಶನಿಕ ಹಾಗೂ ಸಮಾಜ ಸುಧಾರಕರಲ್ಲೊಬ್ಬರಾದ ನಾರಾಯಣ ಗುರುಗಳ ಸ್ತಬ್ಧಚಿತ್ರದ ಪ್ರಸ್ತಾವ ತಿರಸ್ಕೃತಗೊಂಡಿರುವುದು ಕೇರಳ ಸರ್ಕಾರದ ಬೇಸರಕ್ಕೆ ಕಾರಣವಾಗಿದೆ. ಸ್ತಬ್ಧಚಿತ್ರದಲ್ಲಿ ನಾರಾಯಣ ಗುರು ಮತ್ತು ಶಂಕರಾಚಾರ್ಯ ಇಬ್ಬರಿಗೂ ಅವಕಾಶ ಕಲ್ಪಿಸಬೇಕು ಎಂದು ಆಯ್ಕೆ ಸಮಿತಿ ಸೂಚಿಸಿತ್ತು ಎನ್ನುವ ವರದಿಗಳು ಇವೆ. ಈ ವಿವಾದದ ಕುರಿತು ಪ್ರತಿಕ್ರಿಯೆ ನೀಡಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, 'ನಾರಾಯಣ ಗುರುಗಳ ಸ್ತಬ್ಧಚಿತ್ರ ತಿರಸ್ಕರಿಸಿ, ಶಂಕರಾಚಾರ್ಯರ ಸ್ತಬ್ಧಚಿತ್ರ ಕಳುಹಿಸುವಂತೆ ಕೇಂದ್ರ ಸೂಚಿಸಿದೆ ಎಂಬುದು ಸುಳ್ಳು' ಎಂದಿದ್ದಾರೆ. ಸುಭಾಷ್‌ಚಂದ್ರ ಬೋಸ್ ಅವರ 125ನೇ ಜಯಂತಿ ಆಚರಣೆ ಸಂದರ್ಭದಲ್ಲಿ, ನೇತಾಜಿ ಸ್ಮರಣಾರ್ಥ ಸ್ತಬ್ಧಚಿತ್ರ ರೂಪಿಸಿದ ಪಶ್ಚಿಮ ಬಂಗಾಳ ಸರ್ಕಾರದ ಪ್ರಸ್ತಾವಕ್ಕೂ ಅನುಮೋದನೆ ದೊರೆತಿಲ್ಲ. ಗಣರಾಜ್ಯೋತ್ಸವಕ್ಕೆ ಮೂರು ದಿನಗಳ ಮೊದಲೇ ಸುಭಾಷ್ ಜನ್ಮದಿನವನ್ನು ದೇಶ ಆಚರಿಸುತ್ತದೆ. ಉದ್ದೇಶಿತ ಸ್ತಬ್ಧಚಿತ್ರದಲ್ಲಿ ಸುಭಾಷ್‌ರೊಂದಿಗೆ ಈಶ್ವರಚಂದ್ರ ವಿದ್ಯಾಸಾಗರ್, ರವೀಂದ್ರನಾಥ ಟ್ಯಾಗೋರ್, ಸ್ವಾಮಿ ವಿವೇಕಾನಂದ ಸೇರಿದಂತೆ ಹಲವು ದಾರ್ಶನಿಕರು, ತತ್ವಜ್ಞಾನಿಗಳ ಚಿತ್ರಗಳು ಇರುವುದಾಗಿ ಹೇಳಲಾಗಿತ್ತು. ತಮಿಳುನಾಡು ಸಲ್ಲಿಸಿದ್ದ ಪ್ರಸ್ತಾವದಲ್ಲಿ ಕವಿ ಸುಬ್ರಹ್ಮಣ್ಯ ಭಾರತಿ, ರಾಣಿ ವೇಲು ನಾಚಿಯಾರ್ ಹಾಗೂ ಮರುತು ಸಹೋದರರ ಚಿತ್ರಗಳ ಉಲ್ಲೇಖವಿತ್ತು. 'ಸ್ವಾತಂತ್ರ್ಯ-75'ರ ಸಂದರ್ಭದಲ್ಲಿ ಸಾಂದರ್ಭಿಕವೂ ಅರ್ಥಪೂರ್ಣವೂ ಆಗಿದ್ದ, ಸ್ವಾತಂತ್ರ್ಯ ಚಳವಳಿ ಮತ್ತು ರಾಷ್ಟ್ರೀಯತೆಗೆ ಅಪಾರ ಕೊಡುಗೆ ನೀಡಿದ್ದ ಚೇತನಗಳ ಸ್ಮರಣೆಯ ಈ ಪ್ರಸ್ತಾವಗಳು ತಿರಸ್ಕೃತಗೊಂಡಿರುವುದು ಸಹಜವಾಗಿಯೇ ಆಯಾ ರಾಜ್ಯ ಸರ್ಕಾರದ ನೋವು ಮತ್ತು ಸಿಟ್ಟಿಗೆ ಕಾರಣವಾಗಿದೆ. ನೇತಾಜಿ, ನಾರಾಯಣ ಗುರು, ಸುಬ್ರಹ್ಮಣ್ಯ ಭಾರತಿ ಅವರಂತಹ ಪ್ರಾತಃಸ್ಮರಣೀಯರು ನಿರ್ದಿಷ್ಟ ಭಾಷೆ ಅಥವಾ ರಾಜ್ಯಕ್ಕೆ ಸೀಮಿತರಾದವರಲ್ಲ. ಇಡೀ ದೇಶವೇ ಸ್ಮರಿಸಬೇಕಾದ, ಸಂಭ್ರಮಿಸಬೇಕಾದ ಇವರ ಸ್ಮರಣೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಅವಕಾಶ ದೊರೆಯದಿರುವುದಕ್ಕೆ ಇರುವ ಮೌಲಿಕ ಕಾರಣಗಳೇನು ಎನ್ನುವುದನ್ನು ಕೇಂದ್ರ ಸರ್ಕಾರವೇ ಸ್ಪಷ್ಟಪಡಿಸಬೇಕು.



ಗಣತಂತ್ರ ವ್ಯವಸ್ಥೆಯ ಬಹುದೊಡ್ಡ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದು ಒಕ್ಕೂಟ ಸರ್ಕಾರದ ಹೊಣೆಗಾರಿಕೆಯೂ ಹೌದು

ಸ್ತಬ್ಧಚಿತ್ರಗಳ ಆಯ್ಕೆಯ ಹೊಣೆಗಾರಿಕೆಯನ್ನು ತಜ್ಞರ ಸಮಿತಿಯ ಮೇಲೆ ಹೊರಿಸಿ ಕೇಂದ್ರ ಸರ್ಕಾರ ಕೈತೊಳೆದುಕೊಳ್ಳುವಂತಿಲ್ಲ. ತಾನೇ ರಚಿಸಿದ ಸಮಿತಿಯ ತಪ್ಪುಒಪ್ಪುಗಳ ಉತ್ತರದಾಯಿತ್ವವೂ ಸರ್ಕಾರದ್ದೇ ಆಗಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯ ಕರ್ನಾಟಕದ ಪ್ರಸ್ತಾವ ಪುರಸ್ಕೃತಗೊಂಡಿದೆ. ಆಯ್ಕೆ ಪ್ರಕ್ರಿಯೆ ಕುರಿತಂತೆ ಬಿಜೆಪಿ ಮುಖಂಡರು ನೀಡುತ್ತಿರುವ ಹೇಳಿಕೆಗಳು ವೈರುಧ್ಯಗಳಿಂದ ಕೂಡಿವೆ. ಸ್ತಬ್ಧಚಿತ್ರಗಳ ಭಾಗವಹಿಸುವಿಕೆಯಲ್ಲಿ ಪ್ರತೀ ರಾಜ್ಯಕ್ಕೆ ಮೂರು ವರ್ಷಕ್ಕೊಮ್ಮೆ ಅವಕಾಶವಿರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಹೇಳಿದ್ದರೆ, ಈ ಬಾರಿ ಗಣರಾಜ್ಯೋತ್ಸವ ಪರೇಡ್‌ಗೆ ಕರ್ನಾಟಕದ ಸ್ತಬ್ಧಚಿತ್ರ ಆಯ್ಕೆಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಸತತವಾಗಿ ಹದಿಮೂರನೇ ಬಾರಿ ರಾಜ್ಯದ ಸ್ತಬ್ಧಚಿತ್ರ ಆಯ್ಕೆಯಾಗಿದೆ' ಎಂದು ಹೇಳಿದ್ದಾರೆ. 'ಪರಿಣತರ ಸಮಿತಿಯ ಮುಂದಿದ್ದ 56 ಪ್ರಸ್ತಾವಗಳಲ್ಲಿ 21 ಪ್ರಸ್ತಾವಗಳನ್ನು ಅಂತಿಮಗೊಳಿಸಲಾಗಿದೆ. ಆಯ್ಕೆ ಪ್ರಕ್ರಿಯೆಯನ್ನು ಪರಿಣತರ ಸಮಿತಿ ನಡೆಸುತ್ತದೆಯೇ ಹೊರತು, ಅದರಲ್ಲಿ ಕೇಂದ್ರ ಸರ್ಕಾರದ ಪಾತ್ರವೇನೂ ಇಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ರಾಷ್ಟ್ರೀಯ ದಿನಾಚರಣೆಗೆ ಸಂಬಂಧಿಸಿದಂತೆ ಕ್ಷುಲ್ಲಕ ರಾಜಕೀಯ ಮಾಡಬಾರದೆಂದು ಸಚಿವೆ ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲ ಹೇಳಿಕೆಗಳು ಗೊಂದಲಗಳನ್ನು ಇನ್ನಷ್ಟು ಹೆಚ್ಚಿಸುವಂತಿವೆ ಹಾಗೂ ಸ್ತಬ್ಧಚಿತ್ರಗಳ ಆಯ್ಕೆ ಪ್ರಕ್ರಿಯೆ ಪ್ರಶ್ನಿಸುತ್ತಿರುವವರನ್ನು ತರಾಟೆಗೆ ತೆಗೆದುಕೊಳ್ಳುವಂತಿವೆಯೇ ಹೊರತು, ವಿವಾದವನ್ನು ತಿಳಿಗೊಳಿಸುವಂತಿಲ್ಲ. ಮೂರು ರಾಜ್ಯಗಳ ಸ್ತಬ್ಧಚಿತ್ರ ಪ್ರಸ್ತಾವಗಳ ನಿರಾಕರಣೆಗೆ ಸಂಬಂಧಿಸಿದಂತೆ ತಜ್ಞರ ಸಮಿತಿಯ ನಡವಳಿಕೆಗಳು ಅನುಮಾನ ಹುಟ್ಟಿಸುವಂತಿವೆ. ನಾರಾಯಣಗುರು ಅವರ ಸ್ತಬ್ಧಚಿತ್ರದ ಪ್ರಸ್ತಾವವನ್ನು ಮೊದಲ ಹಂತಗಳಲ್ಲಿ ಒಪ್ಪಿಕೊಳ್ಳಲಾಗಿದ್ದು, ನಂತರ ನಿರಾಕರಿಸಲಾಯಿತು ಎಂಬ ವರದಿಗಳಿವೆ. ಯಾವ ಕಾರಣವನ್ನೂ ನೀಡದೆ ಪ್ರಸ್ತಾವ ತಿರಸ್ಕರಿಸಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಇಂಥ ಪ್ರಶ್ನೆ-ಅನುಮಾನಗಳಿಗೆ ಉತ್ತರಿಸುವ, ಗೊಂದಲಗಳನ್ನು ಪರಿಹರಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರ ಹಾಗೂ ಆಯ್ಕೆ ಸಮಿತಿಯದ್ದಾಗಿದೆ. ಉತ್ತರಿಸಬೇಕಾದವರು ಮೌನವಾಗಿರುವುದು ಹಾಗೂ ನೇರವಾಗಿ ಸಂಬಂಧಪಡದವರು ಪ್ರತಿಕ್ರಿಯಿಸುವುದು ತಕ್ಕುದಲ್ಲ. ಗಣತಂತ್ರ ವ್ಯವಸ್ಥೆಯ ಬಹುದೊಡ್ಡ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುವುದು ಒಕ್ಕೂಟ ಸರ್ಕಾರದ ಹೊಣೆಗಾರಿಕೆಯೂ ಹೌದು.

ದಿನದ ಟ್ವೀಟ್

ಅನುಸರಿಸುವುದೇ?



ಆಮ್ ಆದ್ಮಿ ಪಕ್ಷವು ವಿಶಿಷ್ಟ 'ಟೆಲಿ-ವೋಟ್' ಮೂಲಕ ಭಗವಂತ ಮಾನ್ ಅವರನ್ನು ಪಂಜಾಬ್ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಹೆಸರಿಸಿದೆ! 2017ರಲ್ಲಿ, ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಸ್ಥಳೀಯರೊಬ್ಬರು ಬಿಂಬಿತವಾಗದೇ ಇದ್ದುದು ಎಎಪಿಗೆ ತೊಡಕಾಗಿ ಪರಿಣಮಿಸಿದ ಪ್ರಮುಖ ಅಂಶಗಳಲ್ಲಿ ಒಂದಾಗಿತ್ತು. ಈಗ ಕಾಂಗ್ರೆಸ್ ಕೂಡ ಅಧಿಕೃತವಾಗಿ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಹೆಸರಿಸಲಿದೆಯೇ? ಅಥವಾ ಫಲಿತಾಂಶಕ್ಕಾಗಿ ಕಾಯುತ್ತಾ ಕೂರುವುದೇ? #EyeOnPunjab

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕರ್ಫ್ಯೂ ಕುರಿತು ಆಡಳಿತ ಪಕ್ಷದಲ್ಲಿಯೇ ಗೊಂದಲವಿದೆ. ಬಿಜೆಪಿ ಮುಖಂಡರು ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಕರ್ಫ್ಯೂ ಇದ್ದರೂ ಜನರು ಓಡಾಡುತ್ತಿದ್ದಾರೆ. ಇದರಿಂದ ಕೋವಿಡ್ ನಿಯಂತ್ರಣ ಸಾಧ್ಯವೇ?



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 19-1-1997

• ಶೀಘ್ರದಲ್ಲೇ ಬಸ್ ಪ್ರಯಾಣ ದರ ಏರಿಕೆ

ಬೆಂಗಳೂರು, ಜ. 18– ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಸ್ ಪ್ರಯಾಣ ದರ ಏರಿಸಲು ಸರ್ಕಾರ ನಿರ್ಧರಿಸಿದೆ. ಏರಿಕೆಯಾಗುವ ನಿಖರವಾದ ದರ ಪ್ರಮಾಣವನ್ನು ಹದಿನೈದು ದಿನಗಳಲ್ಲಿ ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ನೀರಾವರಿ ಶುಲ್ಕ ವಿಧಿಸುವ ಇಂಗಿತವನ್ನೂ ಅವರು ವ್ಯಕ್ತಪಡಿಸಿದರು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಪರಿಶೀಲಿಸಲು ರಚಿಸಿದ್ದ ಸಂಪುಟ ಉಪ ಸಮಿತಿಯ ಶಿಫಾರಸಿನ ಮೇಲೆ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

ಸಂಪುಟ ಉಪ ಸಮಿತಿ ನೀಡಿರುವ ವರದಿಯನ್ನು ನಿನ್ನೆ ನಡೆದ ಸಂಪುಟ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಈ ನಿರ್ಧಾರಕ್ಕೆ ಬರಲಾಗಿದೆ. ನಷ್ಟದಲ್ಲಿ ನಡೆಯುತ್ತಿರುವ ಸಾರಿಗೆ ಸಂಸ್ಥೆಯನ್ನು ಉಳಿಸಲು ದರ ಏರಿಸದೆ ಬೇರೆ ಮಾರ್ಗವೇ ಇಲ್ಲ ಎಂದು ಅವರು ನುಡಿದರು.

50 ವರ್ಷಗಳ ಹಿಂದೆ

ಬುಧವಾರ, 19-1-1972

• ಪೂರ್ಣ ಆರ್ಥಿಕ ಸ್ವರಾಜ್ಯ: ಕೇಂದ್ರ, ರಾಜ್ಯಗಳಲ್ಲಿ ಸುಭದ್ರ ಸರ್ಕಾರ

ನವದೆಹಲಿ, ಜ. 18– ಬಲವಾದ ಕೇಂದ್ರಕ್ಕೆ ಹೊಂದಿಕೆಯಾಗಿ ರಾಜ್ಯಗಳಲ್ಲಿ ದೃಢ ಸರ್ಕಾರಗಳನ್ನು ರಚಿಸಿ, ಬಡತನದ ವಿರುದ್ಧ ಹೋರಾಟವನ್ನು ಮುಂದುವರಿಸಿ ಪೂರ್ಣ ಆರ್ಥಿಕ ಸ್ವರಾಜ್ಯವನ್ನು ಯಶಸ್ವಿಯಾಗಿ ಸಾಧಿಸುವುದೆಂದು ಕಾಂಗ್ರೆಸ್ ಪಕ್ಷ ಇಂದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ವಚನ ವಿತ್ತಿದೆ.

ಕೇಂದ್ರ ಹಾಗೂ ರಾಜ್ಯಗಳಲ್ಲಿ ದೃಢ ಸರ್ಕಾರಗಳನ್ನು ಒದಗಿಸಬಹುದಾದ ಏಕೈಕ ಪಕ್ಷ ಕಾಂಗ್ರೆಸ್, ಆದ್ದರಿಂದ ತನ್ನ ಅಭ್ಯರ್ಥಿಗಳಿಗೆ ಮಾರ್ಚ್ ತಿಂಗಳಲ್ಲಿ ನಡೆಯುವ ವಿಧಾನಸಭಾ ಚುನಾವಣೆಗಳಲ್ಲಿ ಮತ ನೀಡಬೇಕೆಂದು ಚುನಾವಣಾ ಪ್ರಣಾಳಿಕೆ ಮತದಾರರಿಗೆ ಕರೆಯಿತ್ತಿದೆ.

ರಾಜ್ಯ ವಿಧಾನಸಭೆಗಳಿಗೆ ನಡೆಯಲಿರುವ ಚುನಾವಣೆಗಳಿಗೆ ಪಕ್ಷವು ಸಿದ್ಧಪಡಿಸಿರುವ ಹದಿನಾರು ಪುಟಗಳ ದಶಾಂಶ ಕಾರ್ಯಕ್ರಮದ ಪ್ರಣಾಳಿಕೆಯನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಜೀತ್ ಯಾದವ್ ಮತ್ತು ಶಂಕರದಯಾಳ್ ಶರ್ಮಾ ಅವರು ಬಿಡುಗಡೆ ಮಾಡಿದರು.

ಸರ್ಕಾರ ಮತ್ತು ಸಾರ್ವಜನಿಕ ವ್ಯಕ್ತಿಗಳು ಜವಾಬ್ದಾರಿ ಹೊತ್ತುಕೊಳ್ಳಬೇಕು

ಇದ್ದಾಗಲೇ ನಿರ್ಧಾರವಾಗಲಿ ಅಂತ್ಯಕ್ರಿಯೆ ವಿಧಾನ!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಸಾಮಾನ್ಯ ಜನ ನಿಧನರಾದಾಗ ಸಹಜವಾಗಿ ಖಾಸಗಿಯಾಗಿ ನಡೆದುಹೋಗುವ ಅಂತ್ಯಕ್ರಿಯೆ, ವಿಶೇಷ ವ್ಯಕ್ತಿಗಳು ಅಗಲಿದಾಗ ಹಲವು ಸಂದಿಗ್ಧಗಳನ್ನು ಮುಂದೊಡ್ಡುತ್ತದೆ. ಸಾಹಿತ್ಯ, ಸಂಗೀತ, ಕಲೆ, ಸಿನಿಮಾ, ರಾಜಕೀಯ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿ ಸಾರ್ವಜನಿಕ ವ್ಯಕ್ತಿತ್ವ ಗಳಿಸಿದವರು ತೀರಿಕೊಂಡಾಗ ಪ್ರಮುಖವಾಗಿ ಅಂತ್ಯಕ್ರಿಯೆಯನ್ನು ಎಲ್ಲಿ ಮತ್ತು ಹೇಗೆ ಮಾಡುವುದು ಎಂಬ ಎರಡು ಪ್ರಶ್ನೆಗಳು ಧುತ್ತೆಂದು ಉದ್ಭವಿಸುತ್ತವೆ. ಸಾಮಾನ್ಯವಾಗಿ ಎಲ್ಲಿ ಎಂಬುದಕ್ಕೆ ಆ ಸಮಯದಲ್ಲಿ ಅಧಿಕಾರದಲ್ಲಿರುವ ಸರ್ಕಾರದ ನಿರ್ಧಾರ ಉತ್ತರವಾಗುತ್ತದೆ; ಹೇಗೆ ಎಂಬುದನ್ನು ಸತ್ತವರ ಕುಟುಂಬಸ್ಥರಿಗೆ ಬಿಡಲಾಗುತ್ತದೆ.

ಅಂತ್ಯಕ್ರಿಯೆಯ ಸ್ಥಳದ ಆಯ್ಕೆಯನ್ನು ಅಧಿಕಾರದಲ್ಲಿ ಇರುವವರ ಮರ್ಜಿ, ಹಿತಾಸಕ್ತಿ, ರಾಜಕೀಯ ಲೆಕ್ಕಾಚಾರ ಪ್ರಭಾವಿಸುವುದೇ ಹೆಚ್ಚು. ವ್ಯಕ್ತಿಯ ಜಾತಿ, ಜನಪ್ರಿಯತೆ ಕೂಡಾ ಕೆಲಸ ಮಾಡುತ್ತವೆ. ಬಹುಕಾಲೀನ ಮತ್ತು ಬಹುವ್ಯಾಪ್ತಿಯ ಮಹತ್ವ ಹೊಂದಿದ ಗಂಭೀರ ವಿಷಯವೊಂದನ್ನು ಹೀಗೆ ಸರ್ಕಾರ ನಡೆಸುವವರ ಸಾಂದರ್ಭಿಕ ನಿರ್ಧಾರ ಅಥವಾ ವಿವೇಚನಾ ಶಕ್ತಿಯ ಅವಲಂಬನೆಗೆ ಸೀಮಿತಗೊಳಿಸುವ ಬದಲು ಅದಕ್ಕೊಂದು ರಾಜ್ಯವ್ಯಾಪಿ ನೀತಿ ರೂಪಿಸುವ ಅಗತ್ಯವಿದೆ. ಇತ್ತೀಚೆಗೆ ನಮ್ಮನ್ನು ಅಗಲಿದ ಚಂದ್ರಶೇಖರ ಪಾಟೀಲರ ಸಂದರ್ಭ ಇಂತಹ ನೀತಿಯ ಅನಿವಾರ್ಯವನ್ನು ಎತ್ತಿತೋರಿಸಿದೆ.

ಚಂಪಾ ಅವರ ಅಂತ್ಯಕ್ರಿಯೆಯನ್ನು ಅವರ ಮನೆಯವರು ಬೆಂಗಳೂರಿನ ಕಲಾಗ್ರಾಮದ ಆವರಣದಲ್ಲಿ ನೆರವೇರಿಸುವ ಒಲವು ಹೊಂದಿದ್ದರು. ಗಣ್ಯ ಸಾಹಿತಿಗಳ ರುದ್ರಭೂಮಿಯಾಗಿ ಈಗಾಗಲೇ ಅನಧಿಕೃತ ಶಿಷ್ಟಾಚಾರದ ಸ್ವರೂಪ ಪಡೆದಿರುವ ಕಲಾಗ್ರಾಮ ಈ ಸಂದರ್ಭದಲ್ಲಿ ಸಹಜ ಆಯ್ಕೆಯಾಗಿ ಗೋಚರಿಸಿದ್ದು ಅಚ್ಚರಿಯೇನಲ್ಲ. ಇಲ್ಲಿ ಈ ಮೊದಲು ಯು.ಆರ್.ಅನಂತಮೂರ್ತಿ ಅವರ ಪಾರ್ಥಿವ ಶರೀರವನ್ನು ಸಕಲ ಸರ್ಕಾರಿ ಗೌರವ ಮತ್ತು ಸಂಪೂರ್ಣ ವೈದಿಕ ಸಂಪ್ರದಾಯದಂತೆ ಅಂತ್ಯಸಂಸ್ಕಾರ ಮಾಡಲಾಗಿತ್ತು. ಅದಾದ ನಂತರ ಜಿ.ಎಸ್.ಶಿವರುದ್ರಪ್ಪ ಅವರ ಅಂತ್ಯಕ್ರಿಯೆಯನ್ನು ಇದೇ ಆವರಣದಲ್ಲಿ ಧಾರ್ಮಿಕ ವಿಧಿವಿಧಾನಗಳಿಲ್ಲದೇ ನೆರವೇರಿಸಲಾಗಿತ್ತು. ಇತ್ತೀಚೆಗೆ ಕವಿ ಡಾ.ಸಿದ್ಧಲಿಂಗಯ್ಯನವರಿಗೂ ಇಲ್ಲಿಯೇ ಸ್ಥಳಾವಕಾಶ ದೊರೆತಿತ್ತು.

ಈ ಹಿನ್ನೆಲೆಯಲ್ಲಿ ತಮ್ಮ ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಹತ್ತೀಮತ್ತೂರು ಗ್ರಾಮದವರಾದ ಚಂಪಾ ಅವರ ಅಂತ್ಯಕ್ರಿಯೆಗೆ ಕಲಾಗ್ರಾಮದಲ್ಲಿ ವ್ಯವಸ್ಥೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಡಚಣೆಯೇನೂ ಇರಲಿಲ್ಲ. ಆದರೆ ಅಂದು ಚಂಪಾ ಅವರ ಮನೆಯಲ್ಲಿ ಸೇರಿದ್ದ ಬರಗೂರು ರಾಮಚಂದ್ರಪ್ಪ, ರಾಜಪ್ಪ ದಳವಾಯಿ, ಆರ್.ಜಿ.ಹಳ್ಳಿ ನಾಗರಾಜ ಮೊದಲಾದ ಬಂಡಾಯದ ಸಂಗಾತಿಗಳು ಚಂಪಾ ಅವರ ಕುಟುಂಬದವರ ಜೊತೆ ಮಾತನಾಡಿ ಮನವೊಲಿಸಿದ್ದರಿಂದ ಕಲಾಗ್ರಾಮದ ಆಯ್ಕೆಯನ್ನು ಕೈಬಿಡಲಾಯಿತು. ಹಾಗಾಗಿ ಪಾಟೀಲರ ಮೃತದೇಹವನ್ನು ಸಾರ್ವಜನಿಕ ರುದ್ರಭೂಮಿಯಲ್ಲಿ ಹೂಳಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಚಂಪಾ ಅವರ ಮನೆಯವರ ಉದಾರ ಮತ್ತು ಮುಕ್ತ ಮನಸ್ಸು ಮೆಚ್ಚುಗೆಗೆ ಅರ್ಹ.

'ಆದಿ ಕವಿ ಪಂಪ, ಅಂತ್ಯ ಕವಿ ಚಂಪಾ' ಎಂದು ಕರೆದುಕೊಂಡಿದ್ದ ಪಾಟೀಲರ 'ಪಾಳೆ' ಬಂದಾಗಲೇ ಕಲಾಗ್ರಾಮದಲ್ಲಿನ ಅಂತ್ಯಕ್ರಿಯೆ ಪರಂಪರೆಗೆ 'ಅಂತ್ಯ' ಹಾಡುವಂತಾಗಿದ್ದು ವಿಶೇಷ. ಇದೇ ರೀತಿ ಡಾ.ರಾಜಕುಮಾರ್ ಅವರ ಅಂತ್ಯಕ್ರಿಯೆಯಿಂದ ಆರಂಭವಾಗಿರುವ ಬೆಂಗಳೂರಿನ ಕಂಠೀರವ ಸ್ಟುಡಿಯೋ ಆವರಣದ ಸಿನಿಮಾ ನಟರ ಅಂತ್ಯಕ್ರಿಯೆ ಬಳಕೆಗೂ ಕೊನೆ ಕಾಣಿಸಬೇಕಾಗಿದೆ. ಇಲ್ಲದಿದ್ದರೆ ಆಯಾ ಕಾಲಘಟ್ಟದ ಅಧಿಕಾರಸ್ಥರ ದೂರದೃಷ್ಟಿಯ ಅಭಾವದಿಂದ ಇಂತಹ ಕ್ರಿಯೆಗಳಿಗೆ ಅಂತ್ಯವೇ ಇಲ್ಲದಂತಾಗುತ್ತದೆ. ಸತ್ತವರಿಗೆ ಸಮಾಧಿ ನಿರ್ಮಿಸಿದರೆ ಆ ಸ್ಥಳ ಪ್ರವಾಸಿ ತಾಣವಾಗಬಹುದಷ್ಟೇ. ಬದಲಾಗಿ ಅಗಲಿದವರ ಅರ್ಥಪೂರ್ಣ ಸ್ಮಾರಕ ರೂಪಿಸಿದರೆ ಅವರ ಬದುಕಿನ ಸಂದೇಶಗಳನ್ನು ಜತನ ಮಾಡಬಹುದು. ಈ ನಿಟ್ಟಿನಲ್ಲಿ ಕುಪ್ಪಳಿಯ ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಸ್ಮಾರಕ ಮತ್ತು ಸಂಸ್ಮರಣೆಯ ಚಟುವಟಿಕೆಗಳು ಮಾದರಿಯಾಗಿ ಒದಗುತ್ತವೆ. ಸತ್ತವರು ಎಲ್ಲಿ ಹೋಗುತ್ತಾರೆ ಎಂಬ ತಮ್ಮ ಪ್ರಶ್ನೆಗೆ ತಾವೇ ಉತ್ತರಿಸಿದ್ದಾರೆ ಚಂಪಾ: 'ಸತ್ತವರು ಎಲ್ಲೂ ಹೋಗುವುದಿಲ್ಲ... ಇದ್ದವರ ನೆನಪಿನ ಗುದ್ದಿನಲ್ಲಿ, ಗೆದ್ದಲಿಯಾಗುತ್ತಾರೆ. ಅವರ ಶ್ವಾಸೋಚ್ಛ್ವಾಸದ ಹಳ್ಳಕೊಳ್ಳಗಳಲ್ಲಿ, ಹಾವಾಗಿ ಹರಿದಾಡುತ್ತಾರೆ. ಅವರ ಆಕಾಶದ ತುಂಬ, ಹುಡಿಯಾಗಿ ಅಡರುತ್ತಾರೆ. ಹಕ್ಕಿಯಾಗಿ ರೆಕ್ಕೆ ಬಿಚ್ಚುತ್ತಾರೆ. ಚುಕ್ಕೆಯಾಗಿ ಚಿಮುಕುತ್ತಾರೆ. ಎಲ್ಲಿಯ ತನಕ? ಇದ್ದವರು ಸಾಯುವ ತನಕ'. ಸ್ಥಾವರದ ತಾತ್ಕಾಲಿಕತೆ ಮತ್ತು ಜಂಗಮದ ಸಾರ್ವಕಾಲಿಕತೆ ಸಂದೇಶವನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಅರುಹಲು ಸಾಧ್ಯವೇ?

ಇನ್ನು, ಅಗಲಿದವರ ಅಂತ್ಯಕ್ರಿಯೆ ಹೇಗೆ ನಡೆಸಬೇಕು ಎಂಬುದನ್ನು ನಿರ್ಧರಿಸುವುದು ಕುಟುಂಬಸ್ಥರ ಜವಾಬ್ದಾರಿಯಾಗಿರುತ್ತದೆ. ಕೆಲವೊಮ್ಮೆ ತೀರಿಕೊಂಡ ವ್ಯಕ್ತಿಯ ಮತ್ತು ಕುಟುಂಬದ ನಂಬಿಕೆಗಳಲ್ಲಿ ವ್ಯತ್ಯಾಸವಿರಲೂ ಸಾಧ್ಯ. ಸಂಪ್ರದಾಯದ ವಿಷಯದಲ್ಲಿ ಕುಟುಂಬದ ಸದಸ್ಯರಲ್ಲೇ ಭಿನ್ನಾಭಿಪ್ರಾಯ ಇರಬಹುದು. ತೀವ್ರ ದುಃಖದಲ್ಲಿ ಮುಳುಗಿದ ಹತ್ತಿರದ ಸಂಬಂಧಿಗಳು ತಕ್ಷಣ ವಿವೇಕಯುತ ನಿಲುವು ತಾಳುತ್ತಾರೆಂದು ನಿರೀಕ್ಷಿಸುವುದು ಕಷ್ಟ. ಇಂತಹ ಸನ್ನಿವೇಶದಲ್ಲಿ ಯಾರದೋ ಮಾತು, ಯಾವುದೋ ನಿರ್ಧಾರದಿಂದ ಅಂತಿಮವಾಗಿ ಆಭಾಸ ಸೃಷ್ಟಿಯಾಗುವುದು ಅಪರೂಪವೇನಲ್ಲ.

ಎಲ್ಲ ಮೂಢ ಸಂಪ್ರದಾಯಗಳನ್ನು ಮೀರಿ ಬರೆದ, ಬದುಕಿದ ಪಿ.ಲಂಕೇಶ್ ಅವರ ಅಂತ್ಯಕ್ರಿಯೆಯಲ್ಲಿ ನಾನೇ ಕಂಡಂತೆ ಕಾವಿಧಾರಿ ಲಿಂಗಾಯತ ಸ್ವಾಮಿಯೊಬ್ಬರು ಇದ್ದಕ್ಕಿದ್ದಂತೆ ಮಂತ್ರ ಹೇಳಲು ಶುರು ಮಾಡಿದರು. ಆಗ ಗೌರಿ ಲಂಕೇಶ್, 'ಇದೆಲ್ಲಾ ಬೇಡ... ಅಪ್ಪನಿಗೆ ಇಷ್ಟವಾಗುತ್ತಿರಲಿಲ್ಲ' ಎಂದು ಕೂಗಿಕೊಂಡ ದನಿ ಇನ್ನೂ ನನ್ನ ಕಿವಿಯಲ್ಲಿದೆ. ಹಾಗೆಯೇ ಯು.ಆರ್. ಅನಂತಮೂರ್ತಿ ಅವರ ಅಪ್ಪಟ ವೈದಿಕ ವಿಧಿವಿಧಾನಗಳ ಅಂತ್ಯಸಂಸ್ಕಾರ ಅವರ ನಂಬಿಕೆಯಾಗಿತ್ತೋ ಅಥವಾ ಕುಟುಂಬದವರ ಆಯ್ಕೆಯಾಗಿತ್ತೋ ಎಂಬ ಸಂಶಯ ಉತ್ತರ ಕಾಣದೆ ಉಳಿದಿದೆ. ವ್ಯಕ್ತಿಯ ನಂಬಿಕೆಯಲ್ಲಿನ ಸರಿತಪ್ಪುಗಳ ಹುಡುಕಾಟಕ್ಕಿಂತ ಆತನ ಚಿಂತನೆಗೆ ವ್ಯತಿರಿಕ್ತವಾಗದಂತೆ ಅಂತ್ಯಕ್ರಿಯೆ ನಡೆಯುವುದು ಬಹಳ ಮುಖ್ಯ. ಇವ್ಯಾವುದರ ಗೊಡವೆಯಿಲ್ಲದೆ ವೈದ್ಯಕೀಯ ಸಂಶೋಧನೆಗೆ ದೇಹದಾನ ಮಾಡಿದ ಮಹನೀಯರ ನಿದರ್ಶನಗಳೂ ಇವೆ.

ಮೈಸೂರಿನ ಶ್ರೀಕಂಠದತ್ತ ಒಡೆಯರ್ ಅವರ ಸಾವಿನ ಸಂದರ್ಭದಲ್ಲಿ ಅವರನ್ನು ಯದು ವಂಶದ 'ಕೊನೆಯ ಕುಡಿ' ಎಂದು ಬಿಂಬಿಸಲಾಯಿತು. ವಾಸ್ತವವಾಗಿ ಶ್ರೀಕಂಠದತ್ತ ಅವರಿಗೆ ಐವರು ಸಹೋದರಿಯರಿದ್ದರು. ಅವರನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಲಿಂಗ ತಾರತಮ್ಯ ಎಸಗಿದ್ದು ಸ್ಪಷ್ಟ. ಹಾಗೆಯೇ ದಿವಂಗತರಿಗೆ ಗಂಡು ಮಕ್ಕಳಿಲ್ಲದಿದ್ದರೆ ಅವರ ಹೆಣ್ಣು ಮಗಳಿಗೆ ಅಥವಾ ಹೆಂಡತಿಗೆ ಅಂತ್ಯಕ್ರಿಯೆಯ ವಿಧಿವಿಧಾನ ನೆರವೇರಿಸುವ ಅವಕಾಶ ಕಲ್ಪಿಸದೇ ಹತ್ತಿರದ ಸಂಬಂಧಿಕರ ಗಂಡು ಮಗನ ಮೊರೆ ಹೋಗುವುದನ್ನು ಕಂಡಿದ್ದೇವೆ. ಸಾರ್ವಜನಿಕ ಜೀವನದಲ್ಲಿ ಮೇಲ್ಪಂಕ್ತಿ ಹಾಕಬೇಕಾದ ಪ್ರತಿಷ್ಠಿತ ಕುಟುಂಬಗಳು ಕೆಲವೊಮ್ಮೆ ಅಂತಿಮ ಕ್ಷಣದ ಗೊಂದಲದಿಂದ ಆದರ್ಶ ಮರೆಯುವ ಅವಕಾಶಕ್ಕೆ ಎರವಾಗಬೇಕಾಗುತ್ತದೆ. ದಿವಂಗತ ಸಿಡಿಎಸ್ ಬಿಪಿನ್ ರಾವತ್ ಅವರ ಅಂತ್ಯಕ್ರಿಯೆಯನ್ನು ಅವರ ಇಬ್ಬರು ಹೆಣ್ಣು ಮಕ್ಕಳು ನೆರವೇರಿಸಿದ ಅನುಕರಣೀಯ ಮಾದರಿಯೂ ನಮ್ಮ ಮುಂದಿದೆ. ಸಾರ್ವಜನಿಕ ರಂಗದ ಜನಪ್ರಿಯ ವ್ಯಕ್ತಿಗಳನ್ನು ಎಲ್ಲಾ ವಿಷಯಗಳಲ್ಲಿ ಅನುಕರಿಸುವ ಅಭಿಮಾನಿಗಳ, ಹಿಂಬಾಲಕರ ಸಂಖ್ಯೆ ಬಹುದೊಡ್ಡದು ಎಂಬುದು ಗಮನಾರ್ಹ ವಾಸ್ತವ.

ಸರ್ಕಾರದ 'ಅಂತ್ಯಕ್ರಿಯೆ ನೀತಿ' ಜೊತೆಗೆ ಗಣ್ಯರು (ಸಾಮಾನ್ಯರು ಕೂಡಾ) ತಮ್ಮ ಅಂತ್ಯಕ್ರಿಯೆ ಎಲ್ಲಿ, ಹೇಗೆ, ಯಾರಿಂದ ನಡೆಯಬೇಕು ಎಂಬುದರ ಬಗ್ಗೆ ಬದುಕಿರುವಾಗಲೇ ಘೋಷಿಸುವುದು ಅತ್ಯುತ್ತಮ ಮಾರ್ಗ.



ಚುರುಮುರಿ



ಪೇರೆಂಟ್ಸ್‌ಗೆ ಪಾಠ

• ಮಣ್ಣೆ ರಾಜು

ವಿದ್ಯಾರ್ಥಿಯ ಆನ್‌ಲೈನ್ ಕ್ಲಾಸ್ ವ್ಯವಸ್ಥೆ ಪರಿಶೀಲಿಸಲು ಸ್ಕೂಲ್ ಟೀಚರ್ ಮನೆಗೆ ಬಂದರು.

'ಸೆಪರೇಟಾಗಿ ಕಂಪ್ಯೂಟರ್, ಚೇರು, ಟೇಬಲ್ ವ್ಯವಸ್ಥೆ ಮಾಡಿದ್ದೀವಿ' ಟೀಚರ್‌ಗೆ ತೋರಿಸಿದ ಶಂಕ್ರಿ.

'ಮಗನಿಗೆ ಹಲ್ಲು ಉಜ್ಜಿಸಿ, ಸ್ನಾನ ಮಾಡಿಸಿ, ಡ್ರೆಸ್ ಹಾಕಿ, ತಲೆ ಬಾಚಿ, ತಿಂಡಿ ತಿನ್ನಿಸಿ ಆನ್‌ಲೈನ್ ಕ್ಲಾಸಿಗೆ ಸಿದ್ಧಮಾಡ್ತೀನಿ' ಸುಮಿ ಹೇಳಿದಳು.

'ಕ್ಲಾಸ್ ನಡೆಯುವಾಗ ಗಂಡಹೆಂಡ್ತಿ ಜಗಳವಾಡಕೂಡದು. ಮೊನ್ನೆ ನಿಮ್ಮ ಜಗಳ ಕ್ಲಾಸ್ ಕೇಳುತ್ತಿದ್ದ ಮಕ್ಕಳ ಮನೆಗಳಲ್ಲಿ ಪ್ರಸಾರ ಆಯ್ತು' ಟೀಚರ್ ಬೇಸರಗೊಂಡರು.

'ಸಾರಿ, ಇನ್ಮೇಲೆ ಕ್ಲಾಸ್ ಟೈಂನಲ್ಲಿ ಜಗಳ ಆಡೊಲ್ಲ' ಎಂದಳು ಸುಮಿ.

'ನಿನ್ನೆಯೂ ಕೂಗಾಟ ಕೇಳಿಸಿತು...'

'ನಮ್ಮ ಜಗಳ ಅಲ್ಲ, ಸಾಲಗಾರರು ಬಂದು ಗಲಾಟೆ ಮಾಡಿದ್ರು...' ಶಂಕ್ರಿ ಮುಜುಗರಪಟ್ಟ.

'ಪಾತ್ರೆ ಸೌಂಡ್, ಟಿ.ವಿ, ಮೊಬೈಲ್ ಮ್ಯೂಟ್ ಮಾಡ್ಬೇಕು...'

'ಆಗಲಿ ಟೀಚರ್'.

'ಕ್ಲಾಸ್ ಅಟೆಂಡ್ ಮಾಡಿದ್ರೆ ಸಾಲದು, ನಿಮ್ಮ ಮಗನಿಗೆ ಸ್ಪೋರ್ಟ್ಸ್‌ನಲ್ಲೂ ಆಸಕ್ತಿ ಬೆಳೆಸಿ'.

'ಆಸಕ್ತಿ ಇದೆ. ಮೊಬೈಲ್‌ನಲ್ಲಿ ಗೇಮ್ ಆಡ್ತಾನೆ, ಟಿ.ವಿಯಲ್ಲಿ ಕ್ರಿಕೆಟ್ ಮ್ಯಾಚ್ ನೋಡ್ತಾನೆ' ಎಂದಳು ಸುಮಿ.

'ಇನ್‌ಡೋರ್ ಅಲ್ಲ, ಔಟ್‌ಡೋರ್ ಗೇಮ್ ಆಡಬೇಕು'.

'ಆಡ್ತಾನೆ. ಅಕ್ಕಪಕ್ಕದ ಮನೆ ನಾಯಿಗಳಿಗೆ ಕಲ್ಲು ಎಸೆಯುತ್ತಾನೆ, ನಾಯಿ ಬೊಗಳಿದರೆ ಓಡಿ ಬರ್ತಾನೆ, ಹೀಗೆ ದಿನಕ್ಕೆ ಏಳೆಂಟು ಬಾರಿ ಮಾಡ್ತಾನೆ' ಅಂದ ಶಂಕ್ರಿ.

'ನಾಯಿಗೆ ಕಲ್ಲು ಹೊಡೆಯುವುದು ಗೇಮ್ ಅಲ್ಲ, ಕ್ರೈಂ...'

'ಕೊರೊನಾ ಕಾಟದಲ್ಲಿ ಬೀದಿಯ ಮಕ್ಕಳು ಒಟ್ಟಿಗೆ ಸೇರಲು ನಾವು ಬಿಟ್ಟಿಲ್ಲ ಟೀಚರ್' ಸುಮಿ ಕಾಫಿ ತಂದುಕೊಟ್ಟಳು.

'ರನ್ನಿಂಗ್, ಜಂಪಿಂಗ್, ಸ್ಕಿಪ್ಪಿಂಗ್ ರೀತಿಯ ಇಂಡಿವಿಜುಯಲ್ ಗೇಮ್ ಆಡಬಹುದಲ್ಲಾ...' ಎಂದ ಟೀಚರ್, 'ನಾಳೆ ಸ್ಕೂಲಿಗೆ ಬಂದು ಬಾಕಿಯಿರುವ ಫೀಸ್ ಪೇ ಮಾಡಿ...' ಎಂದು ಹೇಳಿ ಹೊರಟರು.

ಸಂಗತ

ಕಿಶೋರಿಯರ ಕಾಯಲಿ 'ಶುಚಿ'

ಕಿಶೋರಿಯರಿಗೆ ಉಚಿತ ಸ್ಯಾನಿಟರಿ ಪ್ಯಾಡ್ ಒದಗಿಸುವ ಅತ್ಯುಪಯುಕ್ತವಾದ ಯೋಜನೆ ಸ್ಥಗಿತಗೊಂಡಿರುವುದು ವಿಷಾದನೀಯ

• ದೀಪಾ ಹಿರೇಗುತ್ತಿ

ಹದಿಹರೆಯದ ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸುವ, ಏಳು ವರ್ಷಗಳ ಹಿಂದೆ ಪ್ರಾರಂಭವಾಗಿದ್ದ ಯೋಜನೆಯೊಂದು ಸದ್ದೇ ಇಲ್ಲದೆ ಕೊನೆಯುಸಿರೆಳೆದು ವರ್ಷ ಮೂರಾಗುತ್ತ ಬಂತು. ಕಿಶೋರಿಯರ ಅದರಲ್ಲೂ ಗ್ರಾಮೀಣ ಭಾಗದ ಹೆಣ್ಣು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಅತ್ಯುತ್ತಮವಾಗಿದ್ದ ಈ ಯೋಜನೆಯು 2018ರ ಕೊನೆಯಿಂದಲೇ ಏದುಸಿರು ಬಿಡುತ್ತಿತ್ತು. 2019ರಲ್ಲಿ ಬಂದ ಕೊರೊನಾ ಅದನ್ನು ಅಧಿಕೃತವಾಗಿ ಕೊನೆಯಾಗಿಸಿತು.

ಇದು 'ಶುಚಿ' ಎಂಬ ಹೆಸರಿನ ಸರ್ಕಾರಿ ಕಾರ್ಯಕ್ರಮ. ಹತ್ತರಿಂದ ಹತ್ತೊಂಬತ್ತು ವಯಸ್ಸಿನ ಕಿಶೋರಿಯರಿಗೆ ಉಚಿತ ಸ್ಯಾನಿಟರಿ ಪ್ಯಾಡ್ ಒದಗಿಸುವ ಅತ್ಯುಪಯುಕ್ತವಾದ ಯೋಜನೆ. ಎಲ್ಲ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಹಾಸ್ಟೆಲ್‌ಗಳಲ್ಲಿನ ಹೆಣ್ಣು ಮಕ್ಕಳಿಗೆ ಪ್ರತೀ ತಿಂಗಳು ತಲಾ ಹತ್ತು ಸ್ಯಾನಿಟರಿ ಪ್ಯಾಡ್ ಒಳಗೊಂಡ ಹನ್ನೆರಡು ಪ್ಯಾಕ್‌ಗಳನ್ನು ಇಡೀ ವರ್ಷಕ್ಕಾಗಿ ನೀಡಲಾಗುತ್ತಿತ್ತು. ವಿತರಿಸಿ ಉಳಿದ ಪ್ಯಾಡ್‌ಗಳನ್ನು ಶಾಲಾ ಕಾಲೇಜುಗಳಲ್ಲಿ ಸಂಗ್ರಹಿಸಿಟ್ಟು ವಿದ್ಯಾರ್ಥಿನಿಯರಿಗೆ ಅವಶ್ಯಕತೆ ಬಿದ್ದಾಗ ನೀಡಲಾಗುತ್ತಿತ್ತು. ಅಷ್ಟೇ ಅಲ್ಲ, ಶಾಲೆ ಬಿಟ್ಟ ಹೆಣ್ಣು ಮಕ್ಕಳಿಗೂ ಅಂಗನವಾಡಿಗಳ ಮೂಲಕ ಪ್ಯಾಡ್ ವಿತರಿಸಲಾಗುತ್ತಿತ್ತು. ಇಂತಹ ಉಪಯುಕ್ತ ಯೋಜನೆಯನ್ನು ಪದವಿ ಮತ್ತು ಸ್ನಾತಕೋತ್ತರ ಪದವಿ ಓದುವ ಹೆಣ್ಣು ಮಕ್ಕಳಿಗೂ ವಿಸ್ತರಿಸಬೇಕೆಂಬ ಕೂಗು ಕೇಳಿಬಂದಿತ್ತು. ಅದನ್ನು ಬಿಟ್ಟು ಯೋಜನೆಯನ್ನೇ ಕೈ ಬಿಟ್ಟಿರುವುದು ನಿಜಕ್ಕೂ ವಿಷಾದನೀಯ.

ಋತುಸ್ರಾವದ ಸಮಯದಲ್ಲಿ ಅರಿವಿದ್ದೋ ಇಲ್ಲದೆಯೋ ಕಿಶೋರಿಯರು ನೈರ್ಮಲ್ಯದ ಬಗ್ಗೆ ಕಾಳಜಿ ತೆಗೆದುಕೊಳ್ಳುವುದರಲ್ಲಿ ಹಿಂದೆಯೇ ಇದ್ದಾರೆ. ದುಬಾರಿಯಾಗಿರುವ ಸ್ಯಾನಿಟರಿ ಪ್ಯಾಡ್‌ಗಳು ಎಲ್ಲರ ಕೈಗೂ ಎಟಕುವುದಿಲ್ಲ. ಹೀಗಾಗಿ ಬಟ್ಟೆಯನ್ನು ಉಪಯೋಗಿಸಿ ಅದನ್ನು ಮರುಬಳಕೆ ಮಾಡುವುದು ಸರ್ವೇ ಸಾಮಾನ್ಯ. ಮುಟ್ಟು ಎನ್ನುವ ಪದವನ್ನೇ ಉಪಯೋಗಿಸುವಲ್ಲಿ ಹಿಂಜರಿಕೆ ಇರುವ ನಮ್ಮ ಸಮಾಜದಲ್ಲಿ ಮುಟ್ಟಿನ ಬಟ್ಟೆಗಳನ್ನು ಎಷ್ಟು ಅನಾರೋಗ್ಯಕರ ರೀತಿಯಲ್ಲಿ ಒಣಗಿಸುತ್ತಾರೆಂಬುದು ಯಾರಿಗೂ ತಿಳಿಯದ ವಿಚಾರವೇನಲ್ಲ.

ಬಟ್ಟೆಯ ಸ್ವಚ್ಛತೆಯಲ್ಲಿ ಎಡವಿದರೆ ಸೋಂಕು ತಗಲುವುದು ಖಂಡಿತ. ಜನನಾಂಗದ ಸೋಂಕಿನಿಂದ, ಅದರಿಂದ ಗರ್ಭಕೋಶದ ಗಂಭೀರ ಕಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ. ಕೊಪ್ಪ ತಾಲ್ಲೂಕು ವೈದ್ಯಾಧಿಕಾರಿಯಾಗಿರುವ ಡಾ. ಮಹೇಂದ್ರ ಕಿರೀಟಿ ಈ ಬಗ್ಗೆ ಮಾಹಿತಿ ನೀಡುತ್ತಾರೆ: ಶುದ್ಧ ಹತ್ತಿಯ ಬಟ್ಟೆಯನ್ನು ಸ್ವಚ್ಛವಾಗಿ ಉಪಯೋಗಿಸಿದರೆ ತೊಂದರೆಯಿಲ್ಲ. ಆದರೆ ವರ್ಷದ ಆರು ತಿಂಗಳು ಮಳೆಗಾಲವೇ ಇರುವ ಮಲೆನಾಡಿನಲ್ಲಿ ಇದು ಕಷ್ಟಸಾಧ್ಯ. ಅದೂ ಅಲ್ಲದೆ ಇತ್ತೀಚೆಗೆ ಶುದ್ಧ ಹತ್ತಿಯ ಬಟ್ಟೆಗಳನ್ನು ಬಳಸುವುದು ಕಡಿಮೆಯಾಗಿ ಪಾಲಿಯಸ್ಟರ್ ಮತ್ತಿತರ ಸಿಂಥೆಟಿಕ್ ಮಿಶ್ರಿತ ಹತ್ತಿ ಬಟ್ಟೆಗಳ ಉಪಯೋಗ ಜಾಸ್ತಿಯಾಗಿದೆ. ಈ ಬಟ್ಟೆಗಳನ್ನು ಮುಟ್ಟಿನ ಸಂದರ್ಭದಲ್ಲಿ ಉಪಯೋಗಿಸುವುದರಿಂದ ದದ್ದುಗಳು (ರ‍್ಯಾಶಸ್) ಉಂಟಾಗುತ್ತವೆ, ತುರಿಕೆ, ಚರ್ಮ ಕೆಂಪಾಗುವಂತಹ ಸಮಸ್ಯೆಗಳೂ ಉಂಟಾಗಬಹುದು. ಆದರೆ ಆ ಭಾಗಗಳಲ್ಲಿನ ತೊಂದರೆಗೆ ವೈದ್ಯರಲ್ಲಿಗೆ ಹೋಗಲು ಸಂಕೋಚಪಡುವ ಹುಡುಗಿಯರು ಅಂಗಡಿಯಲ್ಲಿ ಲಭ್ಯವಿರುವ ಕ್ರೀಮ್‌ಗಳನ್ನು ಹಚ್ಚುತ್ತಾರೆ.

ವೈದ್ಯರ ಹತ್ತಿರ ಹೋಗಿ ಪರೀಕ್ಷೆ ಮಾಡಿಸಿಕೊಂಡರೆ ಸೋಂಕು ಯಾವುದರಿಂದ ಆಗಿದೆ ಎಂದು ಪತ್ತೆ ಹಚ್ಚಿ ಅದಕ್ಕೆ ಬೇಕಾದ ರೀತಿಯ ಕ್ರೀಮ್ ಅನ್ನು ಸೂಚಿಸುತ್ತಾರೆ. ಆದರೆ ಮಾರುಕಟ್ಟೆಯಲ್ಲಿ ಸಿಗುವ ಕ್ರೀಮುಗಳಲ್ಲಿ ಸ್ಟಿರಾಯ್ಡ್ ಅಂಶ ಇದ್ದೇ ಇರುತ್ತದೆ. ಹಾಗಾಗಿ ದದ್ದುಗಳೇನೋ ಗುಣವಾಗುತ್ತವೆ. ಆದರೆ ಈ ಪರಿಹಾರ ತಾತ್ಕಾಲಿಕ. ಪದೇ ಪದೇ ಸ್ಟಿರಾಯ್ಡ್ ಇರುವ ಆಯಿಂಟ್‌ಮೆಂಟ್ ಹಚ್ಚುವುದರಿಂದ ಸೋಂಕು ಹೆಚ್ಚಾಗುತ್ತದೆ. ಕೊನೆಗೆ ವೈದ್ಯರಲ್ಲಿ ಹೋದರೆ ಪ್ರಯೋಜನವಾಗುವುದಿಲ್ಲ.



ವೈದ್ಯರು ಹೇಳಿದ ಈ ಅಂಶಗಳು ಬಹಳ ಮಂದಿಗೆ ಗೊತ್ತಿಲ್ಲದೇ ಇರುವುದರಿಂದ ಗಂಭೀರ ಸಮಸ್ಯೆಗಳಿಗೆ ಸಿಲುಕುತ್ತಾರೆ. ಹಾಗಾಗಿ ಶುಚಿ ಪ್ಯಾಡ್‌ಗಳು ಕಿಶೋರಿಯರ ಆರೋಗ್ಯ ಕಾಪಾಡುವಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಈ ಪ್ಯಾಡ್‌ಗಳಿಂದ ಶುಚಿತ್ವ ಕಾಪಾಡಿಕೊಳ್ಳುವುದರ ಮೂಲಕ ಕಿಶೋರಿಯರು ತಮ್ಮ ಆರೋಗ್ಯವನ್ನೂ ಚೆನ್ನಾಗಿ ಇಟ್ಟುಕೊಳ್ಳುತ್ತಿದ್ದರು. ಈ ಯೋಜನೆಯಿಂದ ಕಿಶೋರಿಯರ ಸೋಂಕಿನ ಪ್ರಮಾಣದಲ್ಲೂ ಗಮನಾರ್ಹ ಇಳಿಕೆಯಾಗಿರುವುದು ಸರ್ಕಾರಿ ದಾಖಲೆಗಳಿಂದಲೇ ತಿಳಿದುಬರುತ್ತದೆ. ಅಷ್ಟೇ ಅಲ್ಲ, ಶೈಕ್ಷಣಿಕವಾಗಿಯೂ ಹೆಣ್ಣು ಮಕ್ಕಳಿಗೆ ಇದು ಅನುಕೂಲಕರ. ಬಟ್ಟೆ ಉಪಯೋಗಿಸುವ ಮುಜುಗರದಿಂದ ತಪ್ಪಿಸಿಕೊಳ್ಳಲು ಎಷ್ಟೋ ಜನ ಶಾಲೆಗೇ ಗೈರುಹಾಜರಾಗುತ್ತಾರೆ. ಪ್ಯಾಡ್ ಧರಿಸುವುದರಿಂದ ಅವರು ಮುಜುಗರವಿಲ್ಲದೇ ದಿನನಿತ್ಯದ ಚಟುವಟಿಕೆಗಳನ್ನು ಮಾಡಲು ಅನುಕೂಲವಾಗುತ್ತದೆ.

ಈ ಯೋಜನೆಗೆ ಬೇಕಾದ ಹಣವಾದರೂ ಎಷ್ಟು? ಪ್ರತೀ ತಾಲ್ಲೂಕಿಗೂ ಆರಂಕಿಯ ಮೊತ್ತ ಅಷ್ಟೇ. ನಮ್ಮ ಸರ್ಕಾರದ ಬೃಹತ್ ಆಯವ್ಯಯದಲ್ಲಿ ಇದೊಂದು ಲೆಕ್ಕಕ್ಕೇ ಸಿಗದಿರುವ ಹಣ. ಹಾಗಾಗಿ ಈ ಅತ್ಯುತ್ತಮ ಯೋಜನೆಗೆ ಶೀಘ್ರವಾಗಿ ಹಣ ಬಿಡುಗಡೆ ಮಾಡಬೇಕು. ಈ ಕುರಿತು ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಯೋಜನೆಯನ್ನು ಪುನರಾರಂಭಿಸಬೇಕು.

ವಾಚಕರ ವಾಣಿ

ಶೈಕ್ಷಣಿಕ ವಾತಾವರಣ ದುರ್ಬಲಗೊಳಿಸದಿರಿ

ಬೋಧನೆಯಲ್ಲಿ ಅತಿಥಿ ಉಪನ್ಯಾಸಕರ ಬೋಧನೆ ಹಾಗೂ ಕಾಯಂ ಉಪನ್ಯಾಸಕರ ಬೋಧನೆ ಎಂದು ಬೇರೆ ಬೇರೆಯಾಗಿ ಇರುತ್ತದೆಯೇ? ಅರ್ಹತೆ ಎಂದರೆ ಏನು? ಕಡಿಮೆ ವೇತನ ಕೊಟ್ಟು ಉಪನ್ಯಾಸಕರ ಕೊರತೆಯನ್ನು ನೀಗಿಸುವುದೇ? ಇಂತಹ ಸ್ಥಿತಿಯಲ್ಲಿ ಉಪನ್ಯಾಸಕರು ಮನಃಪೂರ್ವಕವಾಗಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆಯೇ ಎಂದು ಪೋಷಕರಿಗೆ ಆತಂಕವಾಗುವುದಿಲ್ಲವೇ?

ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಲು ಸಾಧ್ಯವಿಲ್ಲ ಎಂದಾದರೆ, ಮುಂದೆ ಬರಬಹುದಾದ ಸಮಸ್ಯೆಗಳ ಪೂರ್ವಾಲೋಚನೆ ಇಲ್ಲದೆ ನೇಮಕ ಮಾಡಿಕೊಳ್ಳುವುದಾದರೂ ಏಕೆ? ಉತ್ತಮ ಬೋಧನೆಗೆ ಪೂರಕವಾಗಿ ಸರ್ಕಾರದ ಬೆಂಬಲವಿಲ್ಲದೇ ಇದ್ದರೆ ಉತ್ತಮ ಶೈಕ್ಷಣಿಕ ವಾತಾವರಣ ಸಾಧ್ಯವಿಲ್ಲ. ವೇತನವನ್ನೇ ಮುಂದಿಟ್ಟುಕೊಂಡು ಶೈಕ್ಷಣಿಕ ವಾತಾವರಣವನ್ನು ದುರ್ಬಲಗೊಳಿಸುವುದು ಬೇಡ. ಉಪನ್ಯಾಸಕರ ಕೊರತೆ ಇರುವುದನ್ನು ಗಮನದಲ್ಲಿಟ್ಟುಕೊಂಡು ಈಗ ಸೇವೆಯಲ್ಲಿರುವ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಿ ಅವರಿಗೆ ಸೂಕ್ತ ಮೌಲ್ಯಮಾಪನ, ತರಬೇತಿಯಂಥ ವಿಚಾರಗಳ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಸೂಕ್ತ.

ಡಾ. ಮಹಾಲಕ್ಷ್ಮಿ ವಿ., ಬೆಂಗಳೂರು

ಉಳಿಯಲಿ ಜೀವಾಮೃತ ನದಿಗಳು

ನದಿಗಳು ಜೀವಸಂಕುಲದ ತಾಣಗಳು. ಮೂರ್ನಾಲ್ಕು ದಶಕಗಳ ಹಿಂದೆ ನದಿಗಳು ವರ್ಷದುದ್ದಕ್ಕೂ ತುಂಬಿ ಹರಿಯುತ್ತಿದ್ದವು. ಜೊತೆಗೆ ತೀರ ಮಾಲಿನ್ಯಯುತವಾಗಿಯೇನೂ ಇರಲಿಲ್ಲ. ಆದರೆ, ಕಳೆದ ಎರಡು ದಶಕಗಳಲ್ಲಿ ನದಿಗಳ ನೀರು ತೀವ್ರ ಮಲಿನವಾಗಿದೆ. ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಮೈದುಂಬಿ ಹರಿಯುತ್ತಿದ್ದ ಫಲ್ಗುಣಿ ನದಿಯೂ ಕಾರ್ಖಾನೆಗಳ ವಿಷಕಾರಿ ತ್ಯಾಜ್ಯದಿಂದ ಮಲಿನವಾಗಿರುವುದನ್ನು ನೋಡಿದರೆ ಭವಿಷ್ಯದ ಬಗ್ಗೆ ಆತಂಕ ಮೂಡುತ್ತದೆ. ರಾಜ್ಯದ ಹಲವು ಜೀವನದಿಗಳು ವಿಷಕಾರಿ ರಾಸಾಯನಿಕ ವಸ್ತುಗಳು ಮತ್ತು ತ್ಯಾಜ್ಯಗಳಿಂದ ತಮ್ಮ ಹರಿಯುವಿಕೆಯನ್ನು ನಿಲ್ಲಿಸಿ, ಹೆಪ್ಪುಗಟ್ಟಿ ನಿಲ್ಲುವ ಹಂತಕ್ಕೆ ಬರುತ್ತಿವೆ.

ಹರಿಹರ ಮತ್ತು ರಾಣೆಬೆನ್ನೂರಿನ ಮಧ್ಯೆ ಹರಿಯುವ ತುಂಗಭದ್ರಾ ನದಿಯೂ ತುಂಬಾ ಕಲುಷಿತಗೊಂಡಿದೆ. ಇಕ್ಕೆಲಗಳ ಗ್ರಾಮಸ್ಥರು ಶ್ವಾಸಕೋಶ ಸೇರಿದಂತೆ ಇನ್ನಿತರ ತೊಂದರೆಗಳಿಂದ ಬಳಲುತ್ತಿದ್ದಾರೆ. ಇಂತಹ ದೊಡ್ಡ ದೊಡ್ಡ ನದಿಗಳ ಪರಿಸ್ಥಿತಿ ಹೀಗಾದರೆ ಸಣ್ಣ ನದಿಗಳು ಮತ್ತು ಹಳ್ಳಕೊಳ್ಳಗಳ ಪರಿಸ್ಥಿತಿ ಊಹಿಸಬಹುದಾಗಿದೆ. ಈ ದಿಸೆಯಲ್ಲಿ ಆಳುವ ವರ್ಗದ ಜೊತೆಗೆ ಜನರು ಸಹ ಜೀವಾಮೃತ ನದಿಗಳ ಉಳಿವಿಗಾಗಿ ಎಚ್ಚರಿಕೆ ವಹಿಸಬೇಕಾಗಿದೆ.

ಮಲ್ಲಪ್ಪ ಫ. ಕರೇಣ್ಣನವರ, ರಾಣೆಬೆನ್ನೂರು

ಟೆಲಿಗ್ರಾಮ್: ಸೋರಿ ಹೋದೀತು ಮಾಹಿತಿ

ಟೆಲಿಗ್ರಾಮ್ ಒಂದು ಮುಕ್ತ ವೇದಿಕೆಯ ಸಾಮಾಜಿಕ ಜಾಲತಾಣವಾಗಿದ್ದು, ಕೆಲವೊಂದು ಗ್ರೂಪ್‌ಗಳನ್ನು ಅದರ ಅಡ್ಮಿನ್ ಲಿಂಕ್ ಕಳುಹಿಸಿದರೆ ಮಾತ್ರ ಸೇರಿಕೊಳ್ಳಬಹುದು. ಇನ್ನು ಕೆಲವೊಂದು ಗ್ರೂಪ್‌ಗಳನ್ನು ಟೆಲಿಗ್ರಾಮ್ ಸರ್ಚ್ ಬಾರ್‌ನಲ್ಲಿ ಗ್ರೂಪ್‌ನ ಹೆಸರು ಟೈಪ್ ಮಾಡಿ ಸೇರಿಕೊಳ್ಳಬಹುದು. ಕರ್ನಾಟಕದ ಸ್ಪರ್ಧಾತ್ಮಕ ಪರೀಕ್ಷೆಗೆ ಉಪಯೋಗವಾಗುವ ಗ್ರೂಪ್‌ಗಳಲ್ಲಿ ಇದೀಗ ಅನಾಮಿಕ ಎಂದೇ ಕರೆಯಬಹುದಾದ 'ವಿದೇಶಿ ಪ್ರೊಫೈಲ್'ಗಳು ಸೇರಿಕೊಂಡಿವೆ. ಇಂಥವರು ಸುಲಭವಾಗಿ ಸರ್ಚ್ ಬಾರ್‌ನಲ್ಲಿ ಅಥವಾ ಗೂಗಲ್‌ನಲ್ಲಿ ಪ್ರಸಿದ್ಧ ಮತ್ತು ಒಪನ್ (ಯಾರು ಬೇಕಾದರೂ ಸೇರಿಕೊಳ್ಳಲು ಅನುಕೂಲ) ಇರುವ ಟೆಲಿಗ್ರಾಮ್ ಗ್ರೂಪ್ ಸೇರಿಕೊಂಡು, ಅಲ್ಲಿ ಸಿಗುವ ಅಂದರೆ ಗ್ರೂಪ್ ಇನ್ ಅಭ್ಯರ್ಥಿಗಳು ಹಾಕುವ ಮಾಹಿತಿಯ ದುರ್ಬಳಕೆ ಮಾಡಿಕೊಳ್ಳುವ ಸಂಭವ ಇರುತ್ತದೆ. ಇದಕ್ಕೆ ಕಡಿವಾಣ ಹಾಕಲು ವಿದೇಶಿ ಖಾತೆಗಳನ್ನು ತೆಗೆದುಹಾಕುವ ಕೆಲಸ ಅಡ್ಮಿನ್‌ಗಳಿಂದ ಆಗಬೇಕು.

ಬಸನಗೌಡ ಪಾಟೀಲ, ಧಾರವಾಡ

ಮೇಕೆದಾಟು: ರಾಜ್ಯದ ಹಿತಾಸಕ್ತಿ ಮುಖ್ಯವಾಗಲಿ

ಮೇಕೆದಾಟುವಿಗೆ ಅಣೆಕಟ್ಟು ಕಟ್ಟಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷ ಪಾದಯಾತ್ರೆ ಆರಂಭಿಸಿತು. ಹಿಂದೆ ಕಾಂಗ್ರೆಸ್ ಪಕ್ಷದಿಂದ ಎಸ್.ಎಂ.ಕೃಷ್ಣ ಅವರು ನಡೆಸಿದ ಪಾಂಚಜನ್ಯ ಯಾತ್ರೆ ಹಾಗೂ ಸಿದ್ದರಾಮಯ್ಯ ಅವರು ನಡೆಸಿದ ಬಳ್ಳಾರಿ ಪಾದಯಾತ್ರೆಯ ರೀತಿಯಲ್ಲಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಈ ಪಾದಯಾತ್ರೆ ನಡೆಸುತ್ತಿದ್ದಾರೆಂದು ಹೇಳಿದವರೂ ಇದ್ದಾರೆ. ರಾಜಕೀಯ ಪಕ್ಷಗಳು ನಡೆಸುವ ಹೋರಾಟಗಳಲ್ಲಿ ರಾಜಕೀಯ ಉದ್ದೇಶಗಳು ಇರುವುದು ಸಹಜವೇ. ಆದರೆ, ಮೇಕೆದಾಟು ಅಣೆಕಟ್ಟು ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ನೀರಿನ ದಾಹ ಇಂಗಿಸಲು ಮತ್ತು ವಿದ್ಯುತ್ ಉತ್ಪಾದಿಸಲು ಅಗತ್ಯವಾಗಿ ಆಗಬೇಕಾದ ಯೋಜನೆ. ಶತಮಾನಗಳ ಕಾವೇರಿ ವಿವಾದಕ್ಕೂ ಇದರಲ್ಲಿ ಪರಿಹಾರ ಅಡಗಿದೆ ಎಂದು ಹೇಳಲಾಗುತ್ತದೆ. ಹೀಗಾಗಿ ಈ ಯೋಜನೆ ಜಾರಿ ದಿಸೆಯಲ್ಲಿ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಯತ್ನಿಸುವುದು ಒಳಿತು. ತಮಿಳುನಾಡು ಈ ಯೋಜನೆಯನ್ನು ವಿರೋಧಿಸುತ್ತಿರುವುದರಿಂದ ನಮ್ಮ ರಾಜಕೀಯ ಪಕ್ಷಗಳು ಯೋಜನೆಯ ವಿಚಾರದಲ್ಲಿ ಭಿನ್ನ ನಿಲುವುಗಳನ್ನು ಹೊಂದಿದರೆ ಅಥವಾ ಇದನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳಲು ಯತ್ನಿಸಿದರೆ ಕೇಂದ್ರ ಮತ್ತು ತಮಿಳುನಾಡಿನ ಮನವೊಲಿಸಿ ಅಣೆಕಟ್ಟು ಕಟ್ಟುವುದು ಸಾಧ್ಯವಿಲ್ಲ.

ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ತಾವು ಅಧಿಕಾರದಲ್ಲಿದ್ದಾಗ ಮಾತ್ರ ಈ ಯೋಜನೆಗಾಗಿ ಯತ್ನಿಸಿದ್ದೇವೆ, ಬೇರೆ ರಾಜಕೀಯ ಪಕ್ಷ ಅಧಿಕಾರದಲ್ಲಿದ್ದಾಗ ಏನೂ ಮಾಡಿಲ್ಲ ಎಂದು ಪರಸ್ಪರ ಆರೋಪಿಸಿಕೊಳ್ಳುತ್ತಿವೆ. ಈ ಯೋಜನೆಯು ರಾಜಕೀಯಕ್ಕಿಂತ ಹೆಚ್ಚಾಗಿ ರಾಜ್ಯದ ಹಿತಾಸಕ್ತಿಯ ಪ್ರಶ್ನೆಯಾಗಿ ಕಾಣಿಸಬೇಕು. ವಾಸ್ತವವಾಗಿ ಈ ಯೋಜನೆಯ ಜಾರಿಗೆ ಈವರೆಗೂ ನಿರ್ಣಾಯಕ ಎಂಬಂತಹ ಪ್ರಯತ್ನವೇ ನಡೆದಿಲ್ಲ. ತಮಿಳುನಾಡಿನ ಪ್ರಾದೇಶಿಕ ಪಕ್ಷಗಳ ಎದುರು ನಮ್ಮ ರಾಜ್ಯದ ರಾಷ್ಟ್ರೀಯ ಪಕ್ಷಗಳು ಸ್ಥಳೀಯ ಹಿತಾಸಕ್ತಿ ರಕ್ಷಣೆಯ ವಿಷಯದಲ್ಲಿ ಸದಾ ಹಿಂದೆ ಬೀಳುತ್ತಾ ಬಂದಿವೆ. ಅಂತಹ ತಪ್ಪು ಮೇಕೆದಾಟು ವಿಷಯದಲ್ಲಿ ಆಗಬಾರದು. ಕೇಂದ್ರದ ಮೇಲೆ ಒಟ್ಟಾಗಿ ಒತ್ತಡ ತರಬೇಕು.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಟ್ಯಾಬ್ಲೊಗಳು ಸ್ತಬ್ಧ



2020ರ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಸ್ತಬ್ಧ ಚಿತ್ರಗಳು ಪಿಟಿಐ ಚಿತ್ರ

● ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ದೆಹಲಿಯ ರಾಜಪಥದಲ್ಲಿ ಪ್ರತೀ ವರ್ಷದ ಜನವರಿ 26ರಂದು ನಡೆಯುವ ಗಣರಾಜ್ಯೋತ್ಸವಕ್ಕೆ ಮೆರುಗು ತುಂಬುವ ಸ್ತಬ್ಧಚಿತ್ರಗಳು ಈ ಬಾರಿ ವಿವಾದದ ಕೇಂದ್ರಬಿಂದು ಆಗಿವೆ. ಕೇರಳ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರಗಳು ಪ್ರದರ್ಶಿಸಲು ಉದ್ದೇಶಿಸಿದ್ದ ಸ್ತಬ್ಧ ಚಿತ್ರಗಳನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಇದು ರಾಜ್ಯಗಳ ಆಕ್ರೋಶಕ್ಕೆ ಕಾರಣವಾಗಿದೆ. ಸ್ತಬ್ಧಚಿತ್ರಗಳ ಆಯ್ಕೆ ಹಾಗೂ ತಿರಸ್ಕಾರ ವಿಚಾರದಲ್ಲಿ ರಾಜಕೀಯ ನಾಯಕರ ಹಸ್ತಕ್ಷೇಪ ಇರುವುದಿಲ್ಲ ಎಂದು ಕೇಂದ್ರ ಸ್ಪಷ್ಟನೆ ನೀಡಿದೆ.

ಸಂಗೀತ, ಕಲೆ, ಚಿತ್ರಕಲೆ, ಶಿಲ್ಪಕಲೆ, ನೃತ್ಯ ಮೊದಲಾದ ಕ್ಷೇತ್ರಗಳಲ್ಲಿ ಹೆಸರು ಮಾಡಿದ ಗಣ್ಯರನ್ನು ಒಳಗೊಂಡ ಸಮಿತಿಯು ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡುತ್ತದೆ. ಕೇಂದ್ರದ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಕೆಲಸ ನಿರ್ವಹಿಸುವ ಈ ಸಮಿತಿಯು ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡುವ ಅಥವಾ ತಿರಸ್ಕರಿಸುವ ಅಧಿಕಾರ ಹೊಂದಿರುತ್ತದೆ. ಮೂಲಗಳ ಪ್ರಕಾರ, 2022ರ ಗಣರಾಜ್ಯೋತ್ಸವಕ್ಕೆ 56 ಸ್ತಬ್ಧಚಿತ್ರಗಳ ಪ್ರಸ್ತಾವ ಬಂದಿತ್ತು. ಈ ಪೈಕಿ 21 ಸ್ತಬ್ಧಚಿತ್ರಗಳನ್ನು ಸಮಿತಿ ಆಯ್ಕೆ ಮಾಡಿದೆ. ಉಳಿದ ಸ್ತಬ್ಧಚಿತ್ರಗಳು ತಿರಸ್ಕೃತಗೊಂಡಿವೆ.

ಯಾವುದೇ ಕಾರಣ ಅಥವಾ ಸ್ಪಷ್ಟನೆ ನೀಡದೇ ಸ್ತಬ್ಧಚಿತ್ರ ಕೈಬಿಟ್ಟಿದ್ದಕ್ಕೆ ಆಘಾತವಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದು, ಕೇಂದ್ರದ ಕ್ರಮಕ್ಕೆ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರನ್ನು ವಸ್ತುವಾಗುಳ್ಳ ಸ್ತಬ್ಧಚಿತ್ರ ತಿರಸ್ಕೃತಗೊಂಡಿರುವುದು ರಾಜ್ಯದ ಜನರಲ್ಲಿ ತೀವ್ರ ನೋವು ಉಂಟುಮಾಡಿದ್ದು, ನಿರ್ಧಾರವನ್ನು ಮರು ಪರಿಶೀಲಿಸುವಂತೆ ಅವರು ಕೋರಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸಹ ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದ್ದಾರೆ. ಟ್ವೀಟ್ ಮಾಡಿರುವ ಅವರು, ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರನ್ನು ವಸ್ತುವಾಗಿ ಇರಿಸಿಕೊಂಡು ಸಿದ್ಧಪಡಿಸಲಾದ ಸ್ತಬ್ಧಚಿತ್ರ ತಿರಸ್ಕರಿಸಿರುವುದು ಸರಿಯಲ್ಲ ಎಂದು ದೂರಿದ್ದಾರೆ. ಕೇಂದ್ರದ ಈ ನಿರ್ಧಾರದಿಂದ ತಮಿಳುನಾಡಿದ ಜನರ ಭಾವನೆಗೆ ಧಕ್ಕೆಯಾಗಿದೆ ಎಂದು ಹೇಳಿದ್ದಾರೆ. ಕೇರಳ ರಾಜ್ಯದ ಸ್ತಬ್ಧಚಿತ್ರವನ್ನೂ ಈ ಬಾರಿ ಕೈಬಿಡಲಾಗಿದೆ. ಸಮಾಜ ಸುಧಾರಕ ನಾರಾಯಣ ಗುರು ಅವರನ್ನು ಬಿಂಬಿಸುವ ಉದ್ದೇಶದಿಂದ ರಾಜ್ಯ ಸಿದ್ಧಪಡಿಸಿದ್ದ ಸ್ತಬ್ಧಚಿತ್ರವು ಸಹ ಸಮಿತಿಯ ಅನುಮೋದನೆ ಪಡೆಯುವಲ್ಲಿ ವಿಫಲವಾಗಿದೆ. ಇದು ಕೇರಳ ಹಾಗೂ ಕರ್ನಾಟಕದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ನಾರಾಯಣ ಗುರು ಬದಲಾಗಿ ಆದಿ ಶಂಕರಾಚಾರ್ಯರ ಸ್ತಬ್ಧಚಿತ್ರವನ್ನು ರೂಪಿಸುವಂತೆ ಸಮಿತಿ ಸೂಚಿಸಿತ್ತು ಎನ್ನಲಾಗಿದೆ.

ಕೇಂದ್ರದ ಕ್ರಮವನ್ನು ಖಂಡಿಸಿ ಟ್ವೀಟ್ ಮಾಡಿರುವ ಕೇರಳ ಶಿಕ್ಷಣ ಸಚಿವ ವಿ. ಶಿವನ್‌ಕುಟ್ಟಿ, ಇದು ನಾರಾಯಣ ಗುರು ಅವರಿಗೆ ಮಾಡಿದ ಅಪಮಾನ ಎಂದು ಉಲ್ಲೇಖಿಸಿದ್ದಾರೆ. ದಾರ್ಶನಿಕ ಗುರುಗಳ ವಿರುದ್ಧವಾಗಿ ಕೇಂದ್ರ ಸರ್ಕಾರ ಏಕೆ ನಡೆದುಕೊಂಡಿದೆ ಎಂಬುದು ಗೊತ್ತಿಲ್ಲ. ಕೇರಳದ ಬಿಜೆಪಿ ಘಟಕವು ಕೇಂದ್ರದ ನಿರ್ಧಾರವನನ್ನು ಒಪ್ಪುತ್ತದೆಯೇ ಎಂದು ಅವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. ಕರ್ನಾಟಕದ ರಾಜಕೀಯ ಮುಖಂಡರಾದ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಸಿದ್ಧರಾಮಯ್ಯ ಅವರು ಸಹ ಕೇಂದ್ರದ ಕ್ರಮವನ್ನು ಖಂಡಿಸಿದ್ದಾರೆ.

ಕೇಂದ್ರ ಸರ್ಕಾರದ ನಿಲುವು: ನಿರ್ಧಾರ ಮರುಪರಿಶೀಲಿಸುವಂತೆ ಕೋರಿರುವ ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳ ಮನವಿಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿರಸ್ಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕೋವಿಡ್ ಕಾರಣದಿಂದ ಈ ಬಾರಿ ಸ್ತಬ್ಧಚಿತ್ರಗಳ ಸಂಖ್ಯೆಯನ್ನು ಮಿತಿಗೊಳಿಸಲಾಗಿದ್ದು, ಈ ಹಂತದಲ್ಲಿ ನಿರ್ಧಾರ ಮರುಪರಿಶೀಲನೆಯನ್ನು ಸಚಿವಾಲಯ ಒಪ್ಪಿಲ್ಲ.

ಈ ವಿಚಾರದಲ್ಲಿ ಕೆಟ್ಟ ರಾಜಕೀಯ ಬೆರೆಸುವುದನ್ನು ನಿಲ್ಲಿಸಿ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಟ್ವೀಟ್ ಮಾಡಿದ್ದಾರೆ. 'ನೇತಾಜಿ ವಿಷಯ ಇಟ್ಟುಕೊಂಡಿದ್ದ ಕೇಂದ್ರ ಲೋಕೋಪಯೋಗಿ ಇಲಾಖೆಯ (ಸಿಪಿಡಬ್ಲ್ಯೂಡಿ) ಸ್ತಬ್ಧಚಿತ್ರ ಆಯ್ಕೆಯಾಗಿದೆ ಎಂದು ಪಶ್ಚಿಮ ಬಂಗಾಳದ ಆರೋಪಕ್ಕೆ ಅವರು ಸ್ಪಷ್ಟನೆ ನೀಡಿದ್ದಾರೆ. 'ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ರಾಜ್ಯಗಳ ನಡುವೆ ತಾರತಮ್ಯ ಮಾಡಿಲ್ಲ. 2018 ಮತ್ತು 2021ರಲ್ಲಿ ಕೇರಳ, 2016, 2017, 2019, 2020, 2021ರಲ್ಲಿ ತಮಿಳುನಾಡು ಹಾಗೂ 2016, 2017, 2019, 2021ರಲ್ಲಿ ಪಶ್ಚಿಮ ಬಂಗಾಳದ ಸ್ತಬ್ಧಚಿತ್ರಗಳು ಆಯ್ಕೆಯಾಗಿವೆ' ಎಂದು ವಿವರಣೆ ನೀಡಿದ್ದಾರೆ.

ಆಯ್ಕೆ ಪ್ರಕ್ರಿಯೆ ಹೇಗೆ?

ಪ್ರತಿ ವರ್ಷ ಗಣರಾಜ್ಯೋತ್ಸವದ ದಿನ ನಡೆಯಲಿರುವ ಸ್ತಬ್ಧಚಿತ್ರಗಳ ಮೆರವಣಿಗೆಗೆ, ಸ್ತಬ್ಧಚಿತ್ರಗಳ ಆಯ್ಕೆ ಪ್ರಕ್ರಿಯೆ ಹಿಂದಿನ ವರ್ಷದಿಂದಲೇ ಆರಂಭವಾಗುತ್ತದೆ. ಇದೇ 26ರಂದು ನಡೆಯಬೇಕಿರುವ ಮೆರವಣಿಗೆಗೆ ಸ್ತಬ್ಧಚಿತ್ರಗಳ ಆಯ್ಕೆ ಪ್ರಕ್ರಿಯೆಗೆ 2021ರ ಸೆಪ್ಟೆಂಬರ್ 21ರಂದೇ ಚಾಲನೆ ನೀಡಲಾಗಿದೆ.

ಮೆರವಣಿಗೆಯಲ್ಲಿ ಭಾಗಿಯಾಗಲು ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರದ ಹಲವು ಸಚಿವಾಲಯಗಳು ಲಿಖಿತ ಪ್ರಸ್ತಾವ ಸಲ್ಲಿಸುತ್ತವೆ. ಆದರೆ, ಇವುಗಳಲ್ಲಿ ಕೆಲವನ್ನಷ್ಟೇ ಆಯ್ಕೆ ಮಾಡಲಾಗುತ್ತದೆ. ಸ್ತಬ್ಧ-ಚಿತ್ರಗಳ ಆಯ್ಕೆಗೆ ರಕ್ಷಣಾ ಸಚಿವಾಲಯವು ತಜ್ಞರ ಆಯ್ಕೆ ಸಮಿತಿಯನ್ನು ರಚನೆ ಮಾಡುತ್ತದೆ. ಈ ಸಮಿತಿಯಲ್ಲಿ ಚಿತ್ರಕಾರರು, ಸಂಗೀತಗಾರರು, ಶಿಲ್ಪ ಕಲಾವಿದರು, ನೃತ್ಯ ಸಂಯೋಜಕರು ಮತ್ತು ಸಾಂಸ್ಕೃತಿಕ ತಜ್ಞರು ಇರುತ್ತಾರೆ. ಸರ್ಕಾರದ ಪರವಾಗಿ ಅಧಿಕಾರಿಗಳು ಈ ಸಮಿತಿಯಲ್ಲಿ ಇರುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ರಕ್ಷಣಾ ಸಚಿವಾಲಯದ ಅಧಿಸೂಚನೆಯಲ್ಲಿ ವಿವರಿಸಿಲ್ಲ. ಈ ಬಗ್ಗೆ ಎಲ್ಲಿಯೂ ಮಾಹಿತಿ ಇಲ್ಲ. ಈ ಬಾರಿ ಆಯ್ಕೆ ಸಮಿತಿಯಲ್ಲಿ ಯಾರಿದ್ದಾರೆ ಎಂಬುದನ್ನೂ ಸಚಿವಾಲಯವು ಬಹಿರಂಗಪಡಿಸಿಲ್ಲ.

ಈ ಸಮಿತಿಗೆ ಬರುವ ಎಲ್ಲಾ ಪ್ರಸ್ತಾವಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಲವನ್ನಷ್ಟೇ ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಪ್ರಕ್ರಿಯೆಯು ಏಳು–ಎಂಟು ಹಂತದಲ್ಲಿ ನಡೆಯುತ್ತದೆ. ಆದರೆ ಇಷ್ಟೇ ಹಂತಗಳು ಇರಬೇಕು ಎಂಬ ನಿಯಮಗಳಿಲ್ಲ. ಒಂದೊಂದು ಹಂತದ ಸಭೆಯಲ್ಲಿ ಆಯಾ ಹಂತಕ್ಕೆ ಆಯ್ಕೆಯಾದ ಮಾದರಿಗಳ ಬಗ್ಗೆ ಚರ್ಚಿಸಿ, ಅಗತ್ಯವಿದ್ದರೆ ಬದಲಾವಣೆಗಳನ್ನು ಸೂಚಿಸಲಾಗುತ್ತದೆ. ಆ ಬದಲಾವಣೆಗಳು ಆ ವರ್ಷದ 'ಥೀಮ್'ಗೆ ಪೂರಕವಾಗಿರಬೇಕು. ಥೀಮ್‌ಗೆ ಹೊಂದಿಕೆಯಾಗದ ಮಾದರಿಗಳನ್ನು ಕೈಬಿಡಲಾಗುತ್ತದೆ. ಹೀಗೆ ಕೈಬಿಟ್ಟ ಮಾದರಿಯನ್ನು ರೂಪಿಸಿದ ರಾಜ್ಯಗಳನ್ನು ಮುಂದಿನ ಸಭೆಗೆ ಕರೆಯುವುದಿಲ್ಲ.

ಲಿಖಿತ ಪ್ರಸ್ತಾವದ ನಂತರ ಅದೇ ಪ್ರಸ್ತಾವವನ್ನು ಡಿಜಿಟಲ್ ರೂಪದಲ್ಲಿ ಸಲ್ಲಿಸಬೇಕಾಗುತ್ತದೆ. ಸಮಿತಿಯು ಸೂಚಿಸಿದ್ದ ಬದಲಾವಣೆಗಳನ್ನು ಮಾಡಿಕೊಳ್ಳದೇ ಇದ್ದರೆ, ಅಂತಹ ಪ್ರಸ್ತಾವ ಅಥವಾ ಮಾದರಿಗಳನ್ನು ತಿರಸ್ಕರಿಸಲಾಗುತ್ತದೆ. ನಂತರದ ಹಂತದಲ್ಲಿ ಪ್ರಸ್ತಾವವನ್ನು ಸ್ತಬ್ಧಚಿತ್ರದ ಯಥಾವತ್ ಕಿರು ಪ್ರತಿಕೃತಿಯ ರೀತಿಯಲ್ಲಿ ಸಲ್ಲಿಸಬೇಕಾಗುತ್ತದೆ. ಈ ಪ್ರತಿಕೃತಿ ಪ್ರಸ್ತಾವದಲ್ಲಿರುವಂತೆ ಇಲ್ಲದೇ ಇದ್ದರೆ ತಿರಸ್ಕರಿಸಲಾಗುತ್ತದೆ. ಕೊನೆಯದಾಗಿ ಪೂರ್ಣ ಸ್ತಬ್ಧಚಿತ್ರವನ್ನು ಸಲ್ಲಿಸಬೇಕಾಗುತ್ತದೆ. ಅದನ್ನು ಆಯ್ಕೆ ಮಾಡುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯ ಆಯ್ಕೆ ಸಮಿತಿಗೆ ಇದೆ. ಈ ಹಂತದಲ್ಲಿ ಆಯ್ಕೆಯಾದ ಸ್ತಬ್ಧಚಿತ್ರವು ಮೆರವಣಿಗೆಯಲ್ಲಿ ಭಾಗಿಯಾಗುತ್ತದೆ ಎಂದು ಹೇಳಲು ಬರುವುದಿಲ್ಲ. ಕೊನೆಯ ಕ್ಷಣದಲ್ಲಿಯೂ ಸ್ತಬ್ಧಚಿತ್ರವು ಮೆರವಣಿಗೆ-ಯಲ್ಲಿ ಭಾಗಿಯಾಗುವುದನ್ನು ತಡೆಯಲು ಅವಕಾಶವಿದೆ.

ಪ್ರಸ್ತಾವವನ್ನು ಅಥವಾ ಸ್ತಬ್ಧಚಿತ್ರವನ್ನು ತಿರಸ್ಕರಿಸಿದ್ದಕ್ಕೆ ಆಯ್ಕೆ ಸಮಿತಿಯು ಯಾವುದೇ ವಿವರಣೆ ನೀಡಬೇಕಿಲ್ಲ.

ತಾಂತ್ರಿಕ ನಿಬಂಧನೆಗಳು

- ಸ್ತಬ್ಧಚಿತ್ರಗಳನ್ನು ಹೊರುವ ವಾಹನ ಟ್ರ್ಯಾಕ್ಟರ್ ಮತ್ತು ಒಂದು ಟ್ರೇಲರ್ ಮಾತ್ರವಾಗಿರಬೇಕು. ಅದೇ ಅಳತೆಯ ಬೇರೆ ವಾಹನಗಳನ್ನು ಬಳಸಿದರೂ, ಒಂದು ಸ್ತಬ್ಧಚಿತ್ರದಲ್ಲಿ ಬಳಕೆಯಾಗುವ ವಾಹನಗಳ ಸಂಖ್ಯೆ ಎರಡನ್ನು ಮೀರಬಾರದು
- ಸ್ತಬ್ಧಚಿತ್ರಗಳಲ್ಲಿ ಪ್ರದರ್ಶನ ನೀಡುವ ಕಲಾವಿದರ ಸಂಖ್ಯೆ 10 ಅನ್ನು ಮೀರಬಾರದು
- ಟ್ರೇಲರ್ ಮತ್ತು ಟ್ರ್ಯಾಕ್ಟರ್‌ನ ಉದ್ದ 24.8 ಅಡಿ ಮೀರಬಾರದು. ಅಗಲ 8 ಅಡಿ ಮೀರಬಾರದು. ಎತ್ತರ 4.2 ಅಡಿ ಮೀರಬಾರದು. ಈ ವಾಹನವು 10 ಟನ್ ಭಾರ ಹೊರುವ ಸಾಮರ್ಥ್ಯ ಹೊಂದಿರಬೇಕು

45 ಅಡಿ ಸ್ತಬ್ಧಚಿತ್ರದ ಗರಿಷ್ಠ ಉದ್ದ
14 ಅಡಿ ಸ್ತಬ್ಧಚಿತ್ರದ ಗರಿಷ್ಠ ಅಗಲ
16 ಅಡಿ ಸ್ತಬ್ಧಚಿತ್ರದ ಗರಿಷ್ಠ ಎತ್ತರ

ಆಧಾರ: ಗಣರಾಜ್ಯೋತ್ಸವದ ಮೆರವಣಿಗೆಗೆ ಸ್ತಬ್ಧಚಿತ್ರಗಳ ಪ್ರಸ್ತಾವಕ್ಕೆ ಮಾರ್ಗಸೂಚಿಗಳು–2020 ಮತ್ತು 2021

ಪಶ್ಚಿಮ ಬಂಗಾಳ ಸ್ವಾತಂತ್ರ್ಯ ಹೋರಾಟಗಾರ, ಪಶ್ಚಿಮ ಬಂಗಾಳದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮಶತಮಾನೋತ್ಸವ ಹಾಗೂ ಅವರು ಸ್ಥಾಪಿಸಿದ್ದ ಐಎನ್‌ಎ ಕೊಡುಗೆಗಳನ್ನು ಸ್ಮರಿಸುವುದಕ್ಕಾಗಿ ಸ್ತಬ್ಧಚಿತ್ರ ಸಿದ್ಧಪಡಿಸಲಾಗಿತ್ತು. ನೇತಾಜಿಯವರನ್ನು ಮುಖ್ಯವಾಗಿ ಇರಿಸಿಕೊಂಡು ರಾಜ್ಯದ ಇತರ ಗಣ್ಯರಾದ ಈಶ್ವರಚಂದ್ರ ವಿದ್ಯಾಸಾಗರ್, ರವೀಂದ್ರನಾಥ ಟ್ಯಾಗೋರ್, ಬಿರ್ಸಾ ಮುಂಡಾ ಮೊದಲಾದ ದೇಶಭಕ್ತರನ್ನು ಸ್ತಬ್ಧಚಿತ್ರದಲ್ಲಿ ಬಿಂಬಿಸಲಾಗಿತ್ತು ಎಂದು ಪಶ್ಚಿಮ ಬಂಗಾಳ ವಾದ ಮಂಡಿಸಿದೆ.

ತಮಿಳುನಾಡು ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಣವನ್ನು ಕಟ್ಟಿಕೊಡುವ ಸ್ತಬ್ಧಚಿತ್ರವನ್ನು ರಾಜ್ಯ ಸಿದ್ಧಪಡಿಸಿತ್ತು ಎನ್ನಲಾಗಿದೆ.

ಕೇರಳ ಜಟಾಯು ಪಾರ್ಕ್ ಮತ್ತು ನಾರಾಯಣ ಗುರುಗಳ ಪ್ರತಿಮೆಯನ್ನು ಕೇರಳದ ಸ್ತಬ್ಧಚಿತ್ರ ಹೊಂದಿತ್ತು. ಮಹಿಳಾ ಸಬಲೀಕರಣದ ಸಂದೇಶವನ್ನು ತಿಳಿಸುವ ಕುಟುಂಬಶ್ರೀ ಮಾದರಿಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿತ್ತು. ಮುಂಚೂಣಿಯಲ್ಲಿ ನಾರಾಯಣ ಗುರುವಿನ ಪ್ರತಿಮೆಯನ್ನು ಇರಿಸಲು ಉದ್ದೇಶಿಸಲಾಗಿತ್ತು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಗವಾಗಿ, 'ವಿವಿಧ ಕ್ಷೇತ್ರಗಳ ಸಾಧನೆಗಳು' ಎಂಬ ಥೀಮ್ ಅಡಿಯಲ್ಲಿ ರಚಿಸಲಾಗಿತ್ತು. ಮೊದಲ ಐದು ಸುತ್ತಿನ ಸಭೆಗಳಲ್ಲಿ ಈ ಸ್ತಬ್ಧಚಿತ್ರಕ್ಕೆ ಸಚಿವಾಲಯದಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರಕಿತ್ತು. ಡಿ.18ರಂದು ನಡೆದ ಕೊನೆಯ ಸುತ್ತಿನಲ್ಲಿ ಈ ಸ್ತಬ್ಧಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಲು ಸೂಚಿಸಲಾಗಿತ್ತು. ಆದರೆ, ಆಯ್ಕೆಯಾದ 12 ರಾಜ್ಯಗಳ ಸ್ತಬ್ಧಚಿತ್ರಗಳ ಪಟ್ಟಿಯಲ್ಲಿ ರಾಜ್ಯವನ್ನು ಕೈಬಿಡಲಾಗಿದೆ ಎಂದು ಕೇರಳ ಸರ್ಕಾರ ಆರೋಪಿಸಿದೆ.

ಥೀಮ್ ನಿಯಮ ಬದಲು

ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಭಾಗಿಯಾಗುವ ಸ್ತಬ್ಧಚಿತ್ರಗಳು ಯಾವ ವಿಷಯಗಳನ್ನು ಹೊಂದಿರಬೇಕು ಎಂದು ವಿವರಿಸುವ ಒಂದು ವಿಸ್ತೃತ ಥೀಮ್ ಅನ್ನು ರಕ್ಷಣಾ ಸಚಿವಾಲಯವು ಈ ಹಿಂದೆ ಸೂಚಿಸುತ್ತಿತ್ತು. ಈ ಮೊದಲು ಈ ಥೀಮ್‌ಗೆ ಯಾವುದೇ ಚೌಕಟ್ಟು ಇರಲಿಲ್ಲ. ರಾಜ್ಯದ ಇತಿಹಾಸ, ಸಂಸ್ಕೃತಿ, ಸಾಧನೆ, ಪರಿಸರವನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರಗಳನ್ನು ರಚಿಸಬೇಕು ಎಂದಷ್ಟೇ ಸಚಿವಾಲಯವು ಹೇಳುತ್ತಿತ್ತು. ಆದರೆ ಈ ಬಾರಿ ಥೀಮ್‌ನ ನಿಯಮಗಳನ್ನು ಬದಲಿಸಲಾಗಿದೆ. ಈ ಬಾರಿ ಸಚಿವಾಲಯವೇ ಥೀಮ್ ಅನ್ನು ನಿಗದಿ ಮಾಡಿದೆ.

ಈ ವರ್ಷದ ಗಣರಾಜ್ಯೋತ್ಸವದ ಸ್ತಬ್ಧಚಿತ್ರ ಮೆರವಣಿಗೆಗೆ ಸ್ವಾತಂತ್ರ್ಯದ ಅಮೃತಮಹೋತ್ಸವವನ್ನು 'ಥೀಮ್' ಆಗಿ ಆಯ್ಕೆ ಮಾಡಲಾಗಿದೆ. 'ಭಾರತ@75, ಸ್ವಾತಂತ್ರ್ಯ ಹೋರಾಟ–ಸ್ವಾತಂತ್ರ್ಯದ ಪರಿಕಲ್ಪನೆ @75, ಸಾಧನೆಗಳು @75, ಕ್ರಮಗಳು @75, ಪರಿಹಾರ @75' ಎಂದಷ್ಟೇ ಸ್ತಬ್ಧ-ಚಿತ್ರದ ಥೀಮ್ ಅನ್ನು ಒಂದು ಸಾಲಿನಲ್ಲಿ ವಿವರಿಸಲಾಗಿದೆ.

ಈ ಹಿಂದಿನ ವರ್ಷಗಳ ಅಧಿಸೂಚನೆಯಲ್ಲಿ ಥೀಮ್ ಅನ್ನು ಸಂಕ್ಷಿಪ್ತವಾಗಿ ವಿವರಿಸಲಾಗುತ್ತಿತ್ತು. ಈ ವರ್ಷದ ಅಧಿಸೂಚನೆಯಲ್ಲಿ ಕೇವಲ ಒಂದೊಂದು ಪದಗಳಲ್ಲಿ ಥೀಮ್ ಅನ್ನು ಹೆಸರಿಸಲಾಗಿದೆ.

'ಸ್ತಬ್ಧಚಿತ್ರಗಳಲ್ಲಿ ಏಕತಾನತೆ ಇರಬಾರದು ಎಂದು ವಿವಿಧ ವಿಷಯಗಳ ಆಯ್ಕೆಗೆ ಅವಕಾಶ ನೀಡಲಾಗಿದೆ' ಎಂದು ಸಚಿವಾಲಯವು ಅಧಿಸೂಚನೆಯಲ್ಲಿ ಹೇಳಿದೆ. ಆದರೆ ಈ ಹಿಂದೆ ಇರದಿದ್ದ ನಿಬಂಧನೆಗಳನ್ನು ಹೇರಿದೆ. ಜತೆಗೆ ಥೀಮ್‌ನ ವ್ಯಾಪ್ತಿಯನ್ನೂ ಕುಗ್ಗಿಸಿದೆ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 22

ಶಿವಸ್ಮರಣೆಯೇ ದಿವ್ಯವೇದ ಮಂತ್ರ

ನಿರ್ಗುಣಾತ್ಮಕವಾದ ಪರಬ್ರಹ್ಮವಸ್ತುವಿನಲ್ಲಿದ್ದ ಸತ್ವ-ರಜಸ್ಸು-ತಮಸ್ಸುಗಳಲ್ಲಿ ಬದಲಾವಣೆಯಾಗಿ ಜಗತ್ತು ನಿರ್ಮಾಣವಾಯಿತು ಎಂಬ ಸೃಷ್ಟಿ ರಹಸ್ಯವನ್ನು ತಿಳಿದ ಷಟ್ಕುಲೀನ ಮುನಿಗಳು ಧನ್ಯತಾಭಾವದಿಂದ ಬ್ರಹ್ಮನನ್ನು ಸ್ತುತಿಸುತ್ತಾರೆ. ನಂತರ ಮತ್ತೆ ಬ್ರಹ್ಮನನ್ನು 'ಆ ಈಶ್ವರನ ಮನನದ ಸ್ವರೂಪವೇನು? ಶ್ರವಣದ ರೂಪವೇನು? ಅವನನ್ನು ಹೇಗೆ ಕೀರ್ತಿಸಬೇಕು? ಇವನ್ನು ವಿಧಿವತ್ತಾಗಿ ನಮಗೆ ಹೇಳು?' ಎಂದು ಕೋರುತ್ತಾರೆ. ಆಗ ಬ್ರಹ್ಮನು ಈಶ್ವರನನ್ನು ಒಲಿಸಿ ಕೊಳ್ಳುವ ಮನನ-ಶ್ರವಣ-ಕೀರ್ತನ ಎಂಬ ಮೂರು ಸಾಧನಗಳ ಅರ್ಥವನ್ನು ಬಿಡಿಸಿ ಹೇಳುತ್ತಾನೆ.

ಈಶ್ವರನ ಪೂಜೆ ಮಾಡುವುದು, ಮಂತ್ರಜಪ ಮಾಡುವುದು. ಈಶ್ವರನ ಗುಣ, ಸ್ವರೂಪ, ಲೀಲೆಗಳನ್ನು ಸ್ಮರಿಸುವುದು. ಶಿವನ ಪವಿತ್ರ ನಾಮಗಳನ್ನು ಯುಕ್ತಿಪೂರ್ವಕವಾಗಿ, ಮನಸ್ಸಿನಿಂದ ಪರಿಶೋಧಿಸಿ ನಿಶ್ಚಯಿಸುವುದೇ ಮನನ. ಈ ಮನನ ಸಾಧನವು ಈಶ್ವರ ಸಾಕ್ಷಾತ್ಕಾರದಲ್ಲಿ ಬೇಕಾಗುವ ಎಲ್ಲ ಸಾಧನಗಳಿಗಿಂತಲೂ ಬಹು ಮುಖ್ಯವಾದ ಸಾಧನ. ಶಿವನಾಮ ಮತ್ತು ಮಹಿಮೆಯನ್ನು ಕೇಳುವುದೇ ಶ್ರವಣಸಾಧನ. ಶ್ರುತಿಯಲ್ಲಿ ಅಥವಾ ಬೇರೆ ಭಾಷೆಯಲ್ಲಿ ಹೇಳಿರುವ ಪರಮೇಶ್ವರನ ಪ್ರತಾಪ, ಗುಣ, ರೂಪ, ಲೀಲೆ, ನಾಮಗಳನ್ನು ಸ್ಫುಟವಾದ ದನಿಯಿಂದ, ಮಧುರವಾಗಿ ಗಾನಮಾಡಿ ಸ್ತುತಿಸುವುದೇ ಕೀರ್ತನ. ಇದು ಮಧ್ಯಮವಾದ ಸಾಧನ. ಇಂಥ ಅಮೂಲ್ಯವೂ ಮತ್ತು ಪವಿತ್ರವೂ ಆದ ಶಿವಭಕ್ತಿಸಾಧನಗಳನ್ನು ನಿಷ್ಠೆಯಿಂದ ಶಿವಮಾರ್ಗವನ್ನ ಅನುಸರಿಸಿ ಪಡೆಯಬೇಕು. ಶಿವಭಕ್ತಿ ಎಷ್ಟರಮಟ್ಟಿಗೆ ಇರಬೇಕೆಂದರೆ, ಕಾಮುಕನು ಸದಾ ಸ್ತ್ರೀವಾಂಛಿತನಾಗಿ ಏನೇ ಕೇಳಿದರೂ ನೋಡಿದರೂ ಸ್ತ್ರೀ ಎಂದೇ ಭಾವಿಸಿ ಆಕರ್ಷಣೆಗೊಳಗಾಗುವಂತೆ, ಶಿವಭಕ್ತರು ಸಹ ತಮ್ಮ ಕಿವಿಯಿಂದ ಯಾವ ಶಬ್ದವನ್ನು ಕೇಳಿದರೂ ಅದೆಲ್ಲವೂ ಶಿವಪರವೆಂದೇ ದೃಢವಾಗಿ ಭಾವಿಸಿ ಸಮ್ಮೋಹಗೊಳ್ಳಬೇಕು. ಇಂಥ ಏಕಾಗ್ರಮನಸ್ಸಿನ ಭಾವನೆಯೇ ಶಿವ ಶ್ರವಣಸಾಧನ. ಶಿವಭಕ್ತರು ಸಹ ಯಾವ ಶಬ್ದವನ್ನು ಕೇಳಿದರೂ ಅದನ್ನು ಶಿವಪದವೆಂದೇ ಭಾವಿಸಿ ಶಿವನ ಸ್ಮರಣೆಯಲ್ಲಿ ತಲ್ಲೀನರಾಗಬೇಕು. ಸಕಲ ಶಬ್ದಗಳಿಗೂ ಈಶ್ವರನೇ ಅರ್ಥವೆಂದು ಶ್ರುತಿಗಳು ಸಾರಿವೆ. ಅದರಂತೆ ಶಿವನಾಮ ಮತ್ತು ಕೀರ್ತನೆಯನ್ನು ಕೇಳುವ ಶ್ರವಣಮಾರ್ಗದಿಂದ ಶಿವಸಾನ್ನಿಧ್ಯವನ್ನು ಪಡೆಯಬಹುದು.

ಕಾಮುಕನ ಭಾವನೆಯಲ್ಲಿರುವುದು ದುರ್ಮೋಹ, ಅಭಾಸವಾದುದು ಮತ್ತು ಅಸತ್ಯವಾದುದು. ಆದರೆ ಶಿವನ ಶಬ್ದಗಳಲ್ಲಿರುವ ಈಶ್ವರ ಭಾವನೆಯು ಸತ್ಯವಾದುದು. ಇದು ಕಾಮುಕಭಾವನೆಗೂ ಈಶ್ವರ ಭಾವನೆಗೂ ಇರುವ ವ್ಯತ್ಯಾಸ. ಕಾಮುಕನು ಶಬ್ದಗಳನ್ನು ಸ್ತ್ರೀಪರವಾಗಿ ಭಾವಿಸುತ್ತಾನೆ. ಶಿವಭಕ್ತರು ಶಿವಪರವಾಗಿ ಭಾವಿಸಬೇಕು ಅಷ್ಟೇ. ಅಂದರೆ ಮನುಷ್ಯಕಾಮನೆಗೆ, ಅವನ ಪಂಚೇಂದ್ರಿಯಗಳು ಹೇಗೆ ಬಹಳ ಬೇಗ ಸಮ್ಮೋಹಗೊಂಡು, ಆಕರ್ಷಣೆಗೆ ಒಳಗಾಗುತ್ತೋ ಹಾಗೇ ಶಿವನ ಹೆಸರು ಕೇಳಿದಾಗ ಮನುಷ್ಯನ ಇಂದ್ರಿಯಗಳು ಅಷ್ಟೇ ಆಸೆಯಿಂದ ಸಮ್ಮೋಹಿತಗೊಂಡು ಶಿವಭಕ್ತಿಯಿಂದ ಪರವಶವಾಗಬೇಕು.

ಶಿವನಾಮಶ್ರವಣವು ಮೊದಲು ಸತ್ಪುರುಷರ ಸಹವಾಸದಿಂದ ಮತ್ತು ಉಪದೇಶದಿಂದ ಆಗಬೇಕು. ಆಗಷ್ಟೇ, ಆ ಪರಮೇಶ್ವರನ ಕೀರ್ತನೆಯಲ್ಲಿ ಮನಸ್ಸು ಆಸಕ್ತವಾಗುವುದು. ಇದರಿಂದ ಮುಖ್ಯಸಾಧನವಾದ ಮನನವು ಸಿದ್ಧಿಸುವುದು. ಬಳಿಕ ಶಂಕರನ ಅನುಗ್ರಹದಿಂದ ಸಕಲವೂ ಸಿದ್ಧಿಸುವುದು. ಈ ರೀತಿ ಶ್ರವಣ-ಮನನಾದಿ ಸಾಧನಗಳಿಂದ ಈಶ್ವರೋಪಾಸನೆಯನ್ನು ಮಾಡಿದರೆ ಸಕಲ ರೋಗಗಳೂ ಸಂಸಾರ ಕ್ಲೇಶಗಳೂ ಪರಿಹಾರವಾಗಿ, ಸಕಲ ಸನ್ಮಂಗಳ ಉಂಟಾಗುತ್ತವೆ. ಕೊನೆಗೆ ಶಾಶ್ವತವೂ ಆನಂದಮಯವೂ ಆದ ಶಿವಸಾಯುಜ್ಯವನ್ನು ಹೊಂದಬಹುದು. ಅಂದರೆ, ಶಿವಲೋಕ ಸೇರಿ ಶಿವನೊಡನೆ ಐಕ್ಯವಾಗಬಹುದು. ಶಿವನಾಮಸ್ಮರಣೆಯು ಅತ್ಯಂತ ಶಕ್ತಿಯುತವಾಗಿದ್ದು ದಿವ್ಯವೇದ ಮಂತ್ರವಾಗಿದೆ ಅಂತ ಬ್ರಹ್ಮದೇವ ಮುನಿಗಳಿಗೆ ಹೇಳುತ್ತಾನೆ.

ಹೀಗೆ ಶ್ವೇತವರಾಹ ಕಲ್ಪಕಾಲದಲ್ಲಿ ಪ್ರಯಾಗದ ಷಟ್ಕುಲೀನಮುನಿಗಳಲ್ಲಿ ಉಂಟಾದ ಯಾರು ಶ್ರೇಷ್ಠ? ಎಂಬ ವಾದ-ವಿವಾದ ತಾರಕಕ್ಕೇರಿ, ಅವರು ಬ್ರಹ್ಮನ ಬಳಿ ಪರಿಹಾರ ತಿಳಿದ ವೃತ್ತಾಂತವನ್ನು ಸೂತಮುನಿಯು ಪ್ರಯಾಗದ ಮಹಾಸತ್ರಯಾಗದ ಮುನಿಗಳಿಗೆ ಹೇಳುತ್ತಾನೆ. ನಂತರ ತಮ್ಮ ಗುರು ವೇದವ್ಯಾಸರಿಗೆ ಈ ಸಾಧನ ಮಹಾತ್ಮೆ ವಿಚಾರ ಬ್ರಹ್ಮಕುಮಾರನಾದ ಸನತ್ಕುಮಾರನಿಂದ ಹೇಗೆ ತಿಳಿಯಿತು ಎನ್ನುವ ಮತ್ತೊಂದು ದೃಷ್ಟಾಂತಕಥೆಯನ್ನ ಹೇಳತೊಡಗುತ್ತಾನೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಉತ್ತರ ಪ್ರದೇಶ ವಿಧಾನಸಭಾ ಚುನಾವಣಾ ಪ್ರಚಾರ ನಡೆಯುತ್ತಿದ್ದು, ಗೋರಖಪುರದಲ್ಲಿ ಅತಿಉದ್ದದ ಎಲ್‌ಪಿಜಿ ಪೈಪ್‌ಲೈನ್ ಕಾಮಗಾರಿ 2023ಕ್ಕೆ ಪೂರ್ಣಗೊಳ್ಳಲಿದೆ ಎಂಬ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೋರಖಪುರದಿಂದ ಸ್ಪರ್ಧಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಈ ಯೋಜನೆಗೆ 2019ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದರು. ಗುಜರಾತ್‌ನ ಕಾಂಡ್ಲಾದಿಂದ ಮಧ್ಯಪ್ರದೇಶ ಮೂಲಕ ಗೋರಖಪುರಕ್ಕೆ ಪೈಪ್‌ಲೈನ್ ಅಳವಡಿಲಾಗುತ್ತಿದೆ. ವೈರಲ್ ಆಗಿರುವ ಗ್ರಾಫಿಕ್ ಚಿತ್ರದಲ್ಲಿ ಇದನ್ನು ಜಗತ್ತಿನ ಅತಿದೊಡ್ಡ ಪೈಪ್‌ಲೈನ್ ಎಂದು ಬಣ್ಣಿಸಲಾಗಿದೆ. 2,757 ಕಿಲೋಮೀಟರ್ ಉದ್ದದ ಈ ಮಾರ್ಗವನ್ನು ₹10 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಉಲ್ಲೇಖಿಸಲಾಗಿದೆ. 34 ಕೋಟಿ ಮನೆಗಳಿಗೆ ಎಲ್‌ಪಿಜಿ ಪೂರೈಕೆಯಾಗಲಿದ್ದು, ಇದನ್ನು ಕ್ರಾಂತಿಕಾರಿ ಯೋಜನೆ ಎಂದು ಕರೆಯಲಾಗಿದೆ.

ವೈರಲ್ ಆಗಿರುವ ಈ ಚಿತ್ರ ಜರ್ಮನಿಗೆ ಸಂಬಂಧಿಸಿದ್ದು ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ಯೋಜನೆಗೆ 2019ರಲ್ಲಿ ಶಂಕುಸ್ಥಾಪನೆ ನೆರವೇರಿಸುವುದಕ್ಕೂ ಮುನ್ನ ಈ ಚಿತ್ರ ಅಂತರ್ಜಾಲದಲ್ಲಿ ಲಭ್ಯವಿತ್ತು. 2010ರಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಪ್ರಕಟಿಸಿದ್ದ ನಾರ್ಡ್ ಸ್ಟ್ರೀಮ್ ಪೈಪ್‌ಲೈನ್ ಕಾಮಗಾರಿ ಆರಂಭದ ಸುದ್ದಿಯ ಜೊತೆ ಈ ಚಿತ್ರ ಬಳಕೆಯಾಗಿತ್ತು. ಹೀಗಾಗಿ ಗೋರಖಪುರ–ಕಾಂಡ್ಲಾ ಪೈಪ್‌ಲೈನ್ ಕಾಮಗಾರಿಗೂ ಈ ಚಿತ್ರಕ್ಕೂ ಸಂಬಂಧವಿಲ್ಲ ಎಂಬುದು ಸ್ಪಷ್ಟಗೊಂಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಅನುಭವದ ದೀಪ

ಅನುಭವದ ಪಾಲೊಳು ವಿಚಾರಮಂಥನವಾಗೆ |
ಜನಿಯಿಕುಂ ಜ್ಞಾನನವನೀತವದೆ ಸುಖದಂ ||
ಗಿಣಿಯೋದು ಪುಸ್ತಕ ಜ್ಞಾನ, ನಿನ್ನನುಭವವೆ |
ನಿನಗೆ ಧರುಮದ ದೀಪ – ಮಂಕುತಿಮ್ಮ || 544 ||

ಪದ-ಅರ್ಥ: ಪಾಲೊಳು = ಹಾಲಿನಲ್ಲಿ, ಜನಿಯಿಕುಂ = ಹುಟ್ಟುವುದು, ಜ್ಞಾನನವನೀತವದೆ = ಜ್ಞಾನ + ನವನೀತ(ಬೆಣ್ಣೆ) + ಅದೆ, ಸುಖದಂ = ಸುಖವನ್ನು ನೀಡುವುದು, ಗಿಣಿಯೋದು = ಗಿಣಿಪಾಠ, ಧರುಮದ = ಧರ್ಮದ.

ವಾಚ್ಯಾರ್ಥ: ಅನುಭವವೆಂಬ ಹಾಲಿನಲ್ಲಿ ವಿಚಾರಗಳ ಮಂಥನವಾದಾಗ ಜ್ಞಾನವೆಂಬ ಬೆಣ್ಣೆ ಹೊರಬರುತ್ತದೆ. ಅದು ಸುಖಕರವಾದದ್ದು. ಬರೀ ಪುಸ್ತಕದಿಂದ ಪಡೆದ ಜ್ಞಾನ ಗಿಳಿಪಾಠ. ನಿನ್ನ ಅನುಭವವೆ ನಿನಗೆ ಧರ್ಮದ ದೀಪ.

ವಿವರಣೆ: ಅವರೊಬ್ಬ ನಾಟಿ ವೈದ್ಯರು. ಊರೂರು ಅಲೆದು ಔಷಧಿ ಕೊಡುವವರು. ಮಗನನ್ನು ಇಂಗ್ಲೆಂಡಿಗೆ ಕಳುಹಿಸಿ ವೈದ್ಯನನ್ನಾಗಿಸಿದರು. ಒಂದು ತುರ್ತುಕರೆ. ತಂದೆ ಓಡಿದರು. ಇಂಗ್ಲೆಂಡ್ ವೈದ್ಯನೂ ಹಿಂಬಾಲಿಸಿದ. ಮಗುವಿಗೆ ವಿಪರೀತ ಜ್ವರ. ವೈದ್ಯರು ನಾಡಿ ಹಿಡಿದು ನೋಡಿ ಅಬ್ಬರಿಸಿದರು "ನಿಮಗೆ ಪಥ್ಯ ಮಾಡಲು ಹೇಳಿದ್ದೆ. ಮಗುವಿಗೆ ಬಾಳೆಹಣ್ಣು ತಿನ್ನಿಸಿದ್ದೀರಿ". ಪಾಲಕರು ಇಲ್ಲವೆಂದರು. ವೈದ್ಯರು, "ಸುಳ್ಳು ಹೇಳಬೇಡಿ. ನನಗೆ ನಾಡಿಯಲ್ಲಿ ಬಾಳೆಹಣ್ಣು ತಿಂದದ್ದು ಗೊತ್ತಾಗುತ್ತದೆ" ಎಂದರು. ಮಗುವಿನ ತಾಯಿ, "ಹೌದು ವೈದ್ಯರೆ, ಮಗು ಕೇಳಿತು ಎಂದು ಎರಡು ಬಾಳೆಹಣ್ಣು ಕೊಟ್ಟೆ" ಎಂದೊಪ್ಪಿದಳು. ವೈದ್ಯರು ಔಷಧಿ ಕೊಟ್ಟು ಮರಳಿದರು. ವೈದ್ಯ ಮಗ ಕೇಳಿದ, "ಅಪ್ಪಾ, ನಿನಗೆ ನಾಡಿಯಲ್ಲಿ ಬಾಳೆಹಣ್ಣು ಹೇಗೆ ಗೊತ್ತಾಯಿತು? ನನಗೆ ಇಂಗ್ಲೆಂಡಿನಲ್ಲೂ ಇದನ್ನು ಕಲಿಸಲಿಲ್ಲ". ಅಪ್ಪ ನಕ್ಕರು "ಮಗನೇ ಅದು ಅನುಭವ. ನಾನು ನಾಡಿ ನೋಡುವಾಗ ಹಾಸಿಗೆ ಎತ್ತಿ ನೋಡಿದೆ. ಹಳ್ಳಿಯ ಜನ, ಸ್ವಚ್ಛತೆಯ ಕಡೆಗೆ ಗಮನ ಕಡಿಮೆ. ಮಗುವಿಗೆ ಕೊಟ್ಟ ಬಾಳೆಹಣ್ಣಿನ ಸಿಪ್ಪೆಗಳು ಹಾಸಿಗೆಯ ಕೆಳಗಿದ್ದವು" ಎಂದರು.

ಮರುದಿನ ಮತ್ತೊಂದು ತುರ್ತು ಕರೆ. ತಂದೆ ಇಲ್ಲ. ಮಗನೇ ಓಡಿದ. ಅಲ್ಲಿಯೂ ಮಗುವಿಗೆ ಜ್ವರವೇರಿದೆ. ಈತ ನಾಡಿ ಹಿಡಿದು, ಹಾಸಿಗೆಯ ಅಕ್ಕಪಕ್ಕ, ಕೆಳಗೆ ನೋಡಿದ ನಂತರ ಅಬ್ಬರಿಸಿದ, "ನೀವು ಮಗುವಿಗೆ ಪಥ್ಯಮಾಡಿಸಿಲ್ಲ. ಚರ್ಮದ ತುಣುಕು ತಿನ್ನಿಸಿದ್ದೀರಿ". ಪಾಲಕರು ಗಾಬರಿಯಾದರು. ಈತನ ತಲೆ ಸರಿ ಇಲ್ಲವೆಂದು ಅವನ ತಂದೆಗೆ ದೂರಿದರು. ತಂದೆ ವಿಷಯ ತಿಳಿದು ಮಗನಿಗೆ ಹೇಳಿದರು. "ನೀನು ಮೂರ್ಖ. ನಾನು ಬಾಳೆಹಣ್ಣು ಹೇಳಿದೆ ಎಂದು ನೀನು ಚರ್ಮ ಎಂದೆಯಾ? ಅದು ಚಮ್ಮಾರನ ಮನೆ. ಚರ್ಮದ ಚೂರುಗಳು ಅಲ್ಲಲ್ಲಿ ಬಿದ್ದಿರುತ್ತವೆ. ಅವನ್ನು ತಿನ್ನಲಾಗುತ್ತದೆಯೇ? ಬರೀ ಪುಸ್ತಕದ ಓದು ಸಾಕು. ಇನ್ನು ಮುಂದೆ ಲೋಕಾನುಭವ ಪಡೆ". ಮಗ ಒಪ್ಪಿದ.

ಯಾವುದೋ ಒಂದು ವಿಷಯವನ್ನೋ, ಘಟನೆಯನ್ನೋ ನೋಡುತ್ತೇವೆ. ಅದರ ಗ್ರಹಿಕೆ ನಮ್ಮಲ್ಲಿ ಏನೋ ಒಂದು ಪರಿಣಾಮವನ್ನುಂಟು ಮಾಡುತ್ತದೆ. ಅದೇ ಅನುಭವ. ಅನುಭವವೆಂಬುದು ಹಾಲಿದ್ದಂತೆ. ಅದನ್ನು ವಿಚಾರವೆಂಬ ಕಡೆಗೋಲಿನಿಂದ ಕಡೆದಾಗ, ಜ್ಞಾನವೆಂಬ ಬೆಣ್ಣೆ ಬರುತ್ತದೆ. ಆ ಜ್ಞಾನವೇ ನಮಗೆ ಬದುಕಿನಲ್ಲಿ ಸುಖವನ್ನು ನೀಡುತ್ತದೆ. ಪುಸ್ತಕದ ಓದು ಗಿಣಿಪಾಠ ಎನ್ನುತ್ತದೆ ಕಗ್ಗ. ಹೀಗೆಂದರೆ ಪುಸ್ತಕದ ಓದು ಬೇಡವೆಂದಲ್ಲ. ಪುಸ್ತಕದಲ್ಲಿ ಓದಿದ್ದು ನಡವಳಿಕೆ-ಯಲ್ಲಿ ವ್ಯಕ್ತವಾದರೆ ಅದು ಪ್ರಯೋಜನಕಾರಿ. ಅದು ಜ್ಞಾನವಾಗಿ ಅನುಭವವಾಗುತ್ತದೆ. ಶ್ರೀ ರಾಮಕೃಷ್ಣ ಪರಮಹಂಸರು ಶಾಸ್ತ್ರಗ್ರಂಥಗಳನ್ನು ಓದಲಿಲ್ಲ, ದೊಡ್ಡ ವಾಗ್ಮಿಗಳಲ್ಲ, ಉಪನ್ಯಾಸ ನೀಡಲು ದೇಶ ಸುತ್ತಲಿಲ್ಲ. ಬಹುಪಾಲು ಆಯುಷ್ಯವನ್ನು ದಕ್ಷಿಣೇಶ್ವ-ರದ ದೇವಾಲಯದಲ್ಲೇ ಕಳೆದರು. ಅವರು ಉಪನಿ-ಷತ್ತುಗಳನ್ನು ಓದದೇ ಹೋದರೂ, ಅನುಭವದಿಂದ ಅವರು ಮಾತನಾಡಿದ್ದೆಲ್ಲ ಉಪನಿಷತ್ತಾಯಿತು. ನಮ್ಮ ಜೀವನದಲ್ಲಿ ಧರ್ಮದ ದಾರಿ ತೋರುವುದು ಈ ಅನುಭವದ ದೀಪವೇ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 19, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 05 ನೇ ದಿನ
ತಿಥಿ: (ಪೌಷ ಕೃಷ್ಣ) ಪ್ರತಿಪದ್ ಗಂ. 6-54 ನಕ್ಷತ್ರ: ಆಶ್ಲೇಷ ಅಹೋರಾತ್ರ ಯೋಗ: ಪ್ರೀತಿ ಗಂ. 16-05, ಕರಣ: ಕೌಲವ ಗಂ. 06-54 ನಂತರ ತೈತಿಲ ಗಂ. 19-33. ರಾಹುಕಾಲ : ಮಧ್ಯಾಹ್ನ 12:00–01:30 ಸೂರ್ಯೋದಯ : 07-01 ಸೂರ್ಯಾಸ್ತ : 06-21 ಮುಸ್ಲಿಂ ದಿನಾಂಕ : 15 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 07, 15

ಮೇಷ: ಯಾವುದೇ ವಿಚಾರಗಳಿಗೂ ಚಿಂತಿತರಾಗುವ ಪ್ರಮೇಯ ಇಲ್ಲದ್ದರಿಂದ ಮನಸ್ಸು ನಿರಾಳ ಗೊಳ್ಳುವುದು. ವಾಹನ ರಿಪೇರಿಗಾಗಿ ಖರ್ಚು ಮಾಡಬೇಕಾಗುವುದು.

ವೃಷಭ: ಹೊಟೆಲ್ ಉದ್ಯಮದವರಿಗೆ ಹೆಚ್ಚಿನ ವರಮಾನ ಲಭಿಸಲಿದೆ. ತೋಟದ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳಿಂದ ಅಧಿಕ ಲಾಭ ಸಿಗವುದು. ಮಹತ್ವದ ನಿರ್ಧಾ-ರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

ಮಿಥುನ: ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ಅಧಿಕ ಮಾರಾಟ ಮತ್ತು ವ್ಯವಹಾರದಲ್ಲಿ ಲಾಭ ಇರಲಿದೆ. ನೆಂಟಸ್ತಿಕೆಯಲ್ಲಿ ವಿವಾಹಕ್ಕೆ ಸಂಬಂಧಗಳು ಕೂಡಿ ಬರಲಿದೆ.

ಕರ್ಕಾಟಕ: ರಾಜಕೀಯ ವ್ಯಕ್ತಿಗಳಿಗೆ ಈ ದಿನವಿಡೀ ಗೊಂದಲದ ವಾತಾವರಣ ಇರುವುದು. ಸಾಮಾಜಿಕವಾಗಿ ವರ್ತನೆಯಲ್ಲಿ ಸ್ಥಿರತೆ ಹಾಗೂ ಸಮತೋಲನ ಕಾಯ್ದುಕೊಳ್ಳಿ.

ಸಿಂಹ: ಕೈಯಲ್ಲಿ ಇರುವ ಕೆಲಸಗಳನ್ನು ಪೂರ್ಣಗೊಳಿಸುವಿರಿ. ನಿಮ್ಮ ಉದ್ಯೋಗ ಬದಲಾಗುವ ಸಂಭವವಿದೆ. ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ನಿಮ್ಮ ಹೊಸ ಯೋಜನೆಗಳು ಜಾರಿಯಾಗಲಿದೆ.

ಕನ್ಯಾ: ಕಚೇರಿಯಲ್ಲಿ ನಿಮ್ಮ ತಪ್ಪುಗಳನ್ನು ಸರಿಪಡಿಸಲು ಸಹೋದ್ಯೋಗಿಗಳ ಸಹಕಾರ ಪಡೆಯುವುದು ಅಗತ್ಯ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ.

ತುಲಾ: ನಿವೇಶನ ಕೊಳ್ಳುವ ನಿಮ್ಮ ಕನಸು ನನಸಾಗಲಿದೆ. ಕೆಲಸ ಕಾರ್ಯಗಳು ನಿಧಾನವಾಗಿಯಾದರೂ ಸಂಪೂರ್ಣವಾಗಿ ನೆರವೇರುವುದು. ಅಲಂಕಾರಿಕ ವಸ್ತುಗಳ ಮಾರಾಟದಿಂದ ಹೆಚ್ಚಿನ ಆದಾಯ ನಿಮ್ಮದಾಗಲಿದೆ

ವೃಶ್ಚಿಕ: ಕಾರ್ಯಭಾರದ ಒತ್ತಡ ಕಡಿಮೆಯಾಗುವುದು. ನಿಮ್ಮ ಮೇಲಧಿಕಾ-ರಿಗಳಿಗೆ ನಿಮ್ಮ ಮೇಲಿನ ವಿಶ್ವಾಸ ವೃದ್ಧಿಯಾಗಲಿದೆ. ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳ್ಳಿಸಿಕೊಂಡ ಸಂತೃಪ್ತಿ ಇಂದು ನಿಮ್ಮಲ್ಲಿ ತುಂಬಿರುತ್ತದೆ.

ಧನು: ಷೇರು ಮಾರುಕಟ್ಟೆ ಹಾಗೂ ಕಮಿಶನ್ ವ್ಯಾಪಾರ ಮುಂತಾದವರಿಗೆ ಲಾಭಾಂಶ ವೃದ್ಧಿಯಾಗಿ ಹೆಚ್ಚಿನ ಬೆಳವಣಿಗೆ ಕಾಣಬಹುದು. ರಾಜಕೀಯವನ್ನು ಪ್ರವೇಶಿಸುವ ಇಚ್ಛೆಯನ್ನು ನಿಮ್ಮ ಸ್ನೇಹಿತರಲ್ಲಿ ವ್ಯಕ್ತಪಡಿಸಿ ಸಲಹೆ ಪಡೆದುಕೊಳ್ಳಿ.

ಮಕರ: ಮನೆ ಕಟ್ಟುವ ನಿಮ್ಮ ಆಸೆಗೆ ಸಹೋದರರಿಂದ ಹೆಚ್ಚಿನ ಪ್ರೋತ್ಸಾಹ ಸಿಗುವುದು. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಶುಭದಿನ. ಮನೆಗೆ ಬಂಧು ಮಿತ್ರರ ಆಗಮನ ನವ ಉಲ್ಲಾಸವನ್ನು ತರಲಿದೆ.

ಕುಂಭ: ನಿಮ್ಮ ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ. ಹೊಸ ವಾಹನ ಖರೀದಿಸುವ ನಿಮ್ಮ ಬಯಕೆ ಈಡೇರಲಿದೆ.

ಮೀನ: ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಉಂಟಾಗುವುದು. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು. ನವದಂಪತಿಗಳಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು.

ಪದಬಂಧ 4843

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಸರ ತಂದಿದ್ದಕ್ಕೇ ಈ ಹುರುಪು! (3)
5.ನೆರವು ಹೀಗೆ ಬಂದಿದೆ (3)
6. ವರ್ತಕ ಹೇಳಿದ ಸುದ್ದಿ (4)
8.ಮೃತ್ಯುದೇವತೆ ಹೇರಿದ ಅತಿಯಾದ ಒಜ್ಜೆ! (4)
12.ಬಹಿರಂಗದ ವಿರುದ್ಧ ಪದ (4)
14.ರಾಗವನ್ನು ಹಾಡುತ್ತಾ ತೋರಿದ ಪ್ರೀತಿ! (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಸಭೆಯನ್ನು ವರ್ಜಿಸುವುದು (4)

ಮೇಲಿಂದ ಕೆಳಕ್ಕೆ
1.ಸಭ್ಯತನವಿಲ್ಲದಿರುವುದು (5)
2.ಆದಾಯ ಮತ್ತು ಖರ್ಚು (4)
3.ವರ ಕೊನೆಗಿದ್ದು ನೋಡಿದ ಕೊಳ (4)
4.ಜಿಹ್ವೆ ಇಲ್ಲಿದೆ (3)
7. ಅತ್ತೆಯ ಗಂಡ (2)
9.ಭಾರ ಹೊತ್ತಿರುವ ನಮ್ಮ ದೇಶ! (3)
10.ಹೀಗೆ ವಿಶದಪಡಿಸುವಿಕೆ! (5)
11.ತಿರುಗಿ ಆಡಿದ ಮಾತು (2)
12.ಸುಗಂಧ ಲೇಪನವನ್ನು ಹೀಗೂ ಹೇಳುವರು (4)
13.ಈಕೆ ಬಸಿರಾದ ಹೆಂಗಸು (4)
14.ರಾಜ ಇಲ್ಲಿದ್ದಾನೆ (3)

1	■	2	■	■	3			4
5			■	■		■	■	
	■		■	■	6		7	
	■	8		9		■		■
	■	■	■		■	■	■	10
■	11	■	12			13	■	
14				■	■		■	
	■	■		■	■	15		
16				■	■		■	

4842ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಅಂತಕ 7.ವಿಲೋಮ
9.ಪಾಯಸ
11.ಸಹಗಮನ 12.ಮರಣ
14.ಕಸಬು 16.ತಕಲಿ

ಮೇಲಿಂದ ಕೆಳಕ್ಕೆ:
1. ಜಡಅಂ 2.ಕೃತಕ
3.ಭಿಲೋ 5.ತಲೆಗಡಿಕ
6.ಮಯ 7.ವಿರಾಮ
8.ಮಸಣ 9.ಪಾನಕ
10.ಸಬೂಬು 13.ರಥ
15.ಸಟೆ 16.ತರಾಟೆ
17.ಲಿಲಾವು

ಸುಡೊಕು 5229

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
		4	1		9		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5228 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

24 ಗಂಟೆ, 41,457 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ದಿಢೀರ್ ಹೆಚ್ಚಳವಾಗಿದೆ. 24 ಗಂಟೆಗಳ ಅವಧಿಯಲ್ಲಿ 41,457 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 2.50 ಲಕ್ಷದ ಗಡಿ ದಾಟಿದೆ.

ಸೋಮವಾರ 27,156 ಪ್ರಕರಣಗಳು ದೃಢಪಟ್ಟಿದ್ದವು. ಸೋಂಕು ದೃಢ ಪ್ರಮಾಣ ಶೇ 12.45 ರಷ್ಟಿತ್ತು. ಮಂಗಳವಾರ ಪ್ರಕರಣಗಳ ಸಂಖ್ಯೆ 40 ಸಾವಿರದ ಗಡಿ ದಾಟಿದರೆ, ದೃಢ ಪ್ರಮಾಣ ಶೇ 22.30ಕ್ಕೆ ತಲುಪಿದೆ. ಎಂಟು ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣ ಹಾಗೂ ದೃಢ ಪ್ರಮಾಣ ಇವಾಗಿವೆ. ಈ ತಿಂಗಳು 18 ದಿನದಲ್ಲಿ 2.81 ಲಕ್ಷ ಮಂದಿಗೆ ಸೋಂಕು ತಗುಲಿದೆ. ವರದಿಯಾದ ಪ್ರಕರಣಗಳ ಸಂಖ್ಯೆ 32.88 ಲಕ್ಷಕ್ಕೆ ಏರಿಕೆಯಾಗಿದೆ.

ಒಂದು ದಿನದಲ್ಲಿ 1.85 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿಗೆ, 18 ಜಿಲ್ಲೆಗಳಲ್ಲಿ ಮೂರಂಕಿಗೆ ತಲುಪಿದೆ. ಬೆಂಗಳೂರಿನಲ್ಲಿ 25,595 ಪ್ರಕರಣಗಳು ದೃಢಪಟ್ಟರೆ, ಉಳಿದ ಜಿಲ್ಲೆಗಳಿಂದ 15,862 ಪ್ರಕರಣಗಳು ಪತ್ತೆಯಾಗಿವೆ. ಮೈಸೂರಿನಲ್ಲಿ 1,848, ಹಾಸನದಲ್ಲಿ 1,739, ತುಮಕೂರಿನಲ್ಲಿ 1,731, ಬೆಂಗಳೂರು ಗ್ರಾಮಾಂತರದಲ್ಲಿ 1,116 ಹಾಗೂ ದಕ್ಷಿಣ ಕನ್ನಡದಲ್ಲಿ 1,058 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 1.78 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 8,353 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಸಂಖ್ಯೆ 30 ಲಕ್ಷ (29.99 ಲಕ್ಷ) ಸಮೀಪಿಸಿದೆ.

ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಿ: ಸಿ.ಎಸ್‌ಗೆ ಕಾಂಗ್ರೆಸ್ ಒತ್ತಾಯ

ಬಿಜೆಪಿ ನಾಯಕರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಮ ಉಲ್ಲಂಘಿಸಿರುವ ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಹಾಗೂ ಅವರ ಮೇಲೆ ಕ್ರಮ ಜರುಗಿಸದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ನೇತೃತ್ವದ ನಿಯೋಗ, ಪಕ್ಷದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬರೆದಿರುವ 4 ಪುಟಗಳ ಆಗ್ರಹಪತ್ರ ಸಲ್ಲಿಸಿದೆ. ಜತೆಗೆ ಬಿಜೆಪಿ ಪ್ರತಿನಿಧಿಸುವ ಸಚಿವರು, ನಾಯಕರು ಪಾಲ್ಗೊಂಡಿದ್ದ ಕಾರ್ಯಕ್ರಮಗಳ ವರದಿಯ ತುಣುಕುಗಳನ್ನು ಲಗತ್ತಿಸಿದೆ. ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ಬಿ.ಎಲ್ ಶಂಕರ್, ಮುಖಂಡರಾದ ವಿ.ಎಸ್. ಉಗ್ರಪ್ಪ, ವಿಜಯ್ ಮುಳಗುಂದ ನಿಯೋಗದಲ್ಲಿದ್ದರು.

ಮನವಿಯಲ್ಲೇನಿದೆ: ರಾಜ್ಯದ ಜನರ ಒತ್ತಾಸೆಯಂತೆ ಕೆಪಿಸಿಸಿ ಮೇಕೆದಾಟು ಪಾದಯಾತ್ರೆ ಆರಂಭಿಸಿತು. ಆಗ ಕೋವಿಡ್ ನಿಯಮ ಪಾಲಿಸಿದ್ದರೂ ಪಕ್ಷದ ನಾಯಕರ ವಿರುದ್ಧ ಹಲವಾರು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಹೀಗೆ ಮಾಡುವ ಮುಖೇನ, ಕೋವಿಡ್ ಹರಡಲು ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಕಾರಣ ಎಂದು ಬಿಂಬಿಸಲು ಬಿಜೆಪಿ ಯತ್ನಿಸುತ್ತಿದೆ. ಹಾಗಿದ್ದರೂ ನೆಲದ ಕಾನೂನಿಗೆ ಪಕ್ಷ ತಲೆ ಬಾಗುತ್ತದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಆದರೆ, ಬಿಜೆಪಿ ಪ್ರತಿನಿಧಿಸುವ ಮುಖ್ಯಮಂತ್ರಿ ಸೇರಿದಂತೆ ರಾಜ್ಯ ಹಾಗೂ ಕೇಂದ್ರ ಮಟ್ಟದ ನಾಯಕರು ಕೋವಿಡ್ ನಿಯಮ ಉಲ್ಲಂಘಿಸಿ ವೈಯಕ್ತಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಯಾವುದೇ ಅನುಮತಿ ಪಡೆಯದೇ ಮಾಡಿದ್ದಾರೆ. ಸರ್ಕಾರಕ್ಕೆ ಜನರ ಆರೋಗ್ಯ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ ಅವರೆಲ್ಲರ ವಿರುದ್ಧವೂ ಕೂಡಲೇ ಕ್ರಮ ಜರುಗಿಸಬೇಕು. ಬಿಜೆಪಿ ಮುಖಂಡರ ವಿರುದ್ಧ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ತೋರಿರುವ ಜಿಲ್ಲಾಡಳಿತ ಹಾಗೂ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದೂ ಆಗ್ರಹಿಸಲಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ವಿಧಾನಪರಿಷತ್ತಿನ ಸದಸ್ಯರ ಪ್ರಮಾಣ ವಚನ ಸಮಾರಂಭ, ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಮ್ಮ ಸ್ವಕ್ಷೇತ್ರ ತೀರ್ಥಹಳ್ಳಿಯಲ್ಲಿ ನಡೆದ ಎಳ್ಳು ಅಮಾವಾಸ್ಯೆ ಜಾತ್ರೆ ಕಾರ್ಯಕ್ರಮ, ಬಿಜೆಪಿ ನಾಯಕ ಜನಾರ್ದನರೆಡ್ಡಿ ಅವರು ಬಳ್ಳಾರಿಯಲ್ಲಿ ಜನ್ಮದಿನ ಆಚರಿಸಿಕೊಂಡಿದ್ದ ಕಾರ್ಯಕ್ರಮ, ಬಿಜೆಪಿ ಶಾಸಕ ಹರೀಶ್ ಪೂಂಜಾ ಅವರು ಪ್ರಧಾನಿ ಮೋದಿ ಅವರ ಆರೋಗ್ಯ-ಆಯಸ್ಸು ವೃದ್ಧಿಗಾಗಿ ಧರ್ಮಸ್ಥಳದ ಅಮೃತವರ್ಷಿಣಿ ಸಭಾಂಗಣದಲ್ಲಿ 150 ಅರ್ಚಕರನ್ನು ಕರೆಸಿ ಮೃತ್ಯುಂಜಯ ಹೋಮ ಮಾಡಿಸಿದ್ದದನ್ನು ಉಲ್ಲೇಖಿಸಲಾಗಿದೆ.

ಬಿಜೆಪಿ ಶಾಸಕರಾದ ರೇಣುಕಾಚಾರ್ಯ, ಅನಿಲ್ ಬೆನಕೆ, ಎಸ್.ವಿ. ರಾಮಚಂದ್ರ, ಎಸ್.ಆರ್. ವಿಶ್ವನಾಥ್, ಸುಭಾಷ್ ಗುತ್ತೇದಾರ್ ಅವರು ವಿವಿಧ ಕಾರ್ಯಕ್ರಮ ನಡೆಸಿ, ಕೋವಿಡ್ ನಿಯಮ ಉಲ್ಲಂಘಿಸಿದ್ದಾರೆ ಎಂದೂ ವಿವರಿಸಿದೆ.



ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಸಲೀಂ ಅಹಮದ್ ಆಗ್ರಹ ಪತ್ರ ನೀಡಿದರು. ವಿಜಯ್ ಮುಳಗುಂದ, ವಿ.ಎಸ್ ಉಗ್ರಪ್ಪ, ಬಿ.ಎಲ್ ಶಂಕರ್ ಇದ್ದರು
ಪ್ರಜಾವಾಣಿ ಚಿತ್ರ

ಸುಮ್ಮನೆ ಕೂರುವುದಿಲ್ಲ: ಡಿಕೆಶಿ

‘ಕೋವಿಡ್ ನಿಯಮ ಉಲ್ಲಂಘಿಸಿರುವ ಬಿಜೆಪಿ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಮುಖ್ಯಮಂತ್ರಿ ಮನೆಗೂ ಹೋಗುತ್ತೇವೆ. ನಾವು ಏನು ಮಾಡುತ್ತೇವೆ ಎಂದು ಈಗ ಹೇಳುವುದಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕಾಫಿ–ಟೀ ಕುಡಿದು ನೆಂಟಸ್ತಿಕೆ ಮಾಡಲು ಅವರ ಮನೆಗೆ ಹೋಗುವುದಿಲ್ಲ.ಸಿದ್ದರಾಮಯ್ಯ ಅವರು ಮೈಸೂರಿಗೆ ಹೋಗಿದ್ದಾರೆ. ಅವರು ಬಂದ ನಂತರ ಏನು ಮಾಡುತ್ತೇವೆ ಎಂಬುದನ್ನು ಕಾದು ನೋಡಿ. ನಾವು ಸುಮ್ಮನೆ ಕೂರುವುದಿಲ್ಲ’ ಎಂದರು.

‘ಮೇಕೆದಾಟು ಯೋಜನೆಯಿಂದ ರೈತರಿಗೆ ನೀರು ನೀಡುತ್ತೇವೆ ಎಂಬ ಹೇಳಿಕೆಯಿಂದ ನ್ಯಾಯಾಲಯದಲ್ಲಿ ಹಿನ್ನಡೆಯಾಗಲಿದೆ’ ಎಂದು ಸಚಿವ ಆರ್. ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆಶಿ, ‘ನಾನು ಅವರಷ್ಟು ಅತಿ ಬುದ್ಧಿವಂತ ಅಲ್ಲ. ನನಗೂ ರಾಜಕೀಯ, ಕಾನೂನು ಗೊತ್ತಿದೆ. ಕೋವಿಡ್‌ನಿಂದ ವಿಶ್ರಾಂತಿ ಪಡೆಯುತ್ತಿದ್ದ ಅವರು ಇನ್ನಷ್ಟು ದಿನ ವಿಶ್ರಾಂತಿ ಪಡೆಯಲಿ’ ಎಂದರು.

ವಾರಾಂತ್ಯ ಕರ್ಫ್ಯೂ ಕೈಬಿಡಲು ಸಿ.ಎಂ ಮೇಲೆ ಒತ್ತಡ

ಬೆಂಗಳೂರು: ರಾಜ್ಯದಲ್ಲಿ ವಾರಾಂತ್ಯ ಕರ್ಫ್ಯೂ ವಿಧಿಸಿರುವುದರಿಂದ ವ್ಯಾಪಾರ ಮತ್ತು ವಹಿವಾಟಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಈ ನಿರ್ಬಂಧವನ್ನು ಹಿಂತೆಗೆದುಕೊಳ್ಳಬೇಕು ಬಿಜೆಪಿಯ ಕೆಲವು ಶಾಸಕರು ಮತ್ತು ಸಚಿವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ.

ಕೋವಿಡ್ ಮೂರನೇ ಅಲೆ ಮಾರಕವಾಗಿಲ್ಲ. ಹೀಗಾಗಿ ನಿಯಮ ಸಡಿಲಗೊಳಿಸಬೇಕು. ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮತೆಗೆದುಕೊಳ್ಳಬೇಕು ಎಂದು ಕೋರಿದ್ದಾರೆ. ಪೂರಕವಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರೂ ವಾರಾಂತ್ಯ ಕರ್ಫ್ಯೂ ಅಗತ್ಯವಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

ಈ ಎಲ್ಲ ಒತ್ತಡಗಳ ಕಾರಣ ಮುಂದಿನ ಶುಕ್ರವಾರ ನಡೆಯಲಿರುವ ಕೋವಿಡ್ ತಾಂತ್ರಿಕ ಸಮಿತಿ ಸಭೆಯಲ್ಲಿ ವಾರಾಂತ್ಯ ಕರ್ಫ್ಯೂ ಹಿಂದಕ್ಕೆ ಪಡೆಯುವುದರ ಬಗ್ಗೆ ಚರ್ಚೆ ನಡೆಯಲಿದೆ. ಕೋವಿಡ್ ತಾಂತ್ರಿಕ ಸಮಿತಿ ಸದಸ್ಯರ ಜತೆಗೂ ಚರ್ಚಿಸಿ ತೀರ್ಮಾನ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಹೋಟೆಲ್, ರೆಸ್ಟೋರೆಂಟ್, ಕಲ್ಯಾಣಮಂಟಪಗಳು, ಜಿಮ್, ಬಾರ್ ಮತ್ತಿತ್ತರ ವ್ಯಾಪಾರಿ ಸಂಘಟನೆಗಳೂ ಜನಪ್ರತಿನಿಧಿಗಳ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಿವೆ. ಅಲ್ಲದೆ, ಬುಧವಾರ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಲು ನಿರ್ಧರಿಸಿದ್ದಾರೆ.

ಈ ಮಧ್ಯೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಹುಬ್ಬಳ್ಳಿಯಲ್ಲಿ ಮಾತನಾಡಿ, ವಾರಾಂತ್ಯ ಕರ್ಫ್ಯೂ ಅಗತ್ಯವಿಲ್ಲ, ಮುಖ್ಯಮಂತ್ರಿಯವರು ಪುನರ್ ಪರಿಶೀಲನೆ ನಡೆಸಬೇಕು ಎಂದು ಹೇಳಿದ್ದಾರೆ.

ಸಿ.ಟಿ.ರವಿ ಅವರು ಗೋವಾದಲ್ಲಿ ಮಾತನಾಡಿ, ಮೂರನೇ ಅಲೆಯ ತೀವ್ರತೆ ಕಡಿಮೆ ಇದೆ. ವಾರಾಂತ್ಯ ಕರ್ಫ್ಯೂ ಅಗತ್ಯವಿರಲಿಲ್ಲ. ಸೋಂಕಿನಿಂದ ಆಸ್ಪತ್ರೆ ಸೇರುತ್ತಿರುವವರ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಲಾಕ್‌ಡೌನ್ ಅಥವಾ ವಾರಾಂತ್ಯ ಕರ್ಫ್ಯೂಗಿಂತ ಕೆಲವು ಬಿಗಿ ಕ್ರಮಗಳನ್ನು ತೆಗೆದುಕೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ನಾರಾಯಣಗುರು ಸ್ತಬ್ಧಚಿತ್ರ ತಿರಸ್ಕಾರ: ಪ್ರಶ್ನಿಸುವುದು ತಪ್ಪೇ?

ಬೆಂಗಳೂರು: ‘ಗಣರಾಜ್ಯೋತ್ಸವ ಪಥಸಂಚಲನಕ್ಕೆ ಶ್ರೀನಾರಾಯಣಗುರುಗಳ ಸ್ತಬ್ಧಚಿತ್ರವನ್ನು ಕೇಂದ್ರ ಸರ್ಕಾರ ಏಕೆ ತಿರಸ್ಕರಿಸಿದೆ ಎಂದು ಪ್ರಶ್ನಿಸುವುದು ತಪ್ಪೇ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

‘ಪ್ರಶ್ನಿಸುವುದೇ ವಿವಾದ ಎಂದು ಬಿಜೆಪಿ ಬಿಂಬಿಸುತ್ತಿದೆ. ಸೂಕ್ಷ್ಮ ವಿಚಾರಗಳಿಗೆ ವಿವಾದದ ಸ್ಪರ್ಶ ನೀಡುವುದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹಾಗೂ ಬಿಜೆಪಿ ರಾಜ್ಯಘಟಕಕ್ಕೆ ಕರತಲಾಮಲಕ’ ಎಂದು ಟೀಕಿಸಿದ್ದಾರೆ.

‘ವಿವಾದವಲ್ಲದ ವಿಚಾರ ಅಂದರೇನು? ನಾರಾಯಣ ಗುರುಗಳಿಗೆ ಆದ ಅನ್ಯಾಯವನ್ನು ಪ್ರಶ್ನೆ ಮಾಡಬಾರದಿತ್ತೆ? ಕೇರಳ ಸರ್ಕಾರ ಸ್ತಬ್ಧಚಿತ್ರದ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಿಲ್ಲ ಎಂದಾದರೆ ಆ ಮಾರ್ಗದರ್ಶಿ ಸೂತ್ರಗಳನ್ನು ಸಾರ್ವಜನಿಕವಾಗಿ ದೇಶದ ಮುಂದಿಡಿ. ಅರೆಬರೆ ವಿವರ ಬೇಡ ಎಂದಿರುವ ಅವರು, ನಾರಾಯಣ ಗುರುಗಳ ಸ್ತಬ್ಧಚಿತ್ರದಲ್ಲಿ ಇದ್ದ ನ್ಯೂನತೆಗಳು ಏನು? ಎಂದು ತಿಳಿಯುವ ಹಕ್ಕು ದೇಶಕ್ಕಿದೆ’ ಎಂದು ಪ್ರತಿಪಾದಿಸಿದ್ದಾರೆ.



‘ಸ್ತಬ್ಧಚಿತ್ರಗಳ ಆಯ್ಕೆಯಲ್ಲಿ ಕೇಂದ್ರ ಸರ್ಕಾರದ ಪಾತ್ರ ಇಲ್ಲ ಎನ್ನುವ ಬಿಜೆಪಿ ನಾಯಕರು, ಪ್ರಧಾನಿಗೆ ಶ್ರೀ ನಾರಾಯಣ ಗುರುಗಳ ಬಗ್ಗೆ ತುಂಬಾ ಗೌರವ ಇದೆ ಹೇಳುತ್ತಾರೆ. ಏನಿದು ಎರಡು ನಾಲಗೆಯ ತುತ್ತೂರಿ? ಎಂದು ವ್ಯಂಗ್ಯವಾಡಿದ್ದಾರೆ.

‘ನಾರಾಯಣ ಗುರು ಸ್ತಬ್ಧಚಿತ್ರ ತಿರಸ್ಕರಿಸಿಲ್ಲ’

ಹುಬ್ಬಳ್ಳಿ: ‘ಗಣರಾಜ್ಯೋತ್ಸವ ಪಥಸಂಚಲನಕ್ಕೆ ಕೇರಳ ರಾಜ್ಯವು ಕಳುಹಿಸಿದ್ದ ನಾರಾಯಣ ಗುರು ಸ್ತಬ್ಧಚಿತ್ರವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ ಹಾಗೂ ಶಂಕರಾಚಾರ್ಯರ ಸ್ತಬ್ಧಚಿತ್ರವನ್ನು ಕಳಿಸುವಂತೆ ಸೂಚಿಸಿದೆ ಎಂಬುದು ಸುಳ್ಳು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸ್ತಬ್ಧಚಿತ್ರಗಳ ಆಯ್ಕೆಗೆ ಯಾವುದೇ ಲಿಖಿತ ನಿಯಮಗಳಿಲ್ಲಕಜ. ಮೂರು ವರ್ಷಕ್ಕೊಮ್ಮೆ ಪ್ರತಿ ರಾಜ್ಯದ ಸ್ತಬ್ಧಚಿತ್ರಗಳು ಆಯ್ಕೆಯಾಗುವುದು ಅಲಿಖಿತ ನಿಯಮ. 2018 ಮತ್ತು 2021ರಲ್ಲಿ ಕೇರಳದ ಸ್ತಬ್ಧಚಿತ್ರಗಳು ಆಯ್ಕೆಯಾಗಿದ್ದವು. ಈ ಸಲ ಬೇರೆ ರಾಜ್ಯಗಳಿಗೆ ಅವಕಾಶ ನೀಡಲಾಗಿದೆ. ಕಾಂಗ್ರೆಸ್ ಆರಂಭಿಸಿದ ಈ ನಿಯಮವನ್ನು ಇಂದಿಗೂ ಪಾಲಿಸಿಕೊಂಡು ಬರಲಾಗುತ್ತಿದೆ’ ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಗೆ ಆಕ್ರೋಶ, ಪ್ರತಿಭಟನೆ

ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ದಿಢೀರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಮಂಗಳವಾರದಿಂದ ನಿಗದಿಯಾಗಿದ್ದ ಕೌನ್ಸೆಲಿಂಗ್ ದಿಢೀರನೇ ರದ್ದಾದ ಕಾರಣ, ಶಿಕ್ಷಕರ ಸದನದಲ್ಲೇ ಧರಣಿ ನಡೆಸಿದ ಶಿಕ್ಷಕರು ಅಧಿಕಾರಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ನಾಲ್ಕು ಬಾರಿ ಮುಂದೂಡಲಾಗಿದ್ದ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್‌ಗೆ ಮಂಗಳವಾರದಿಂದ ಆರಂಭವಾಗಬೇಕಿತ್ತು. ಅದಕ್ಕಾಗಿ, ವೇಳಾಪಟ್ಟಿಯನ್ನು ನಿಗದಿ ಮಾಡಲಾಗಿತ್ತು. ಜನವರಿ 18ರಿಂದ 25ರವರೆಗೆ ಕೌನ್ಸೆಲಿಂಗ್ ಮೂಲಕ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಿತ್ತು. ಆದರೆ, ನಾಲ್ಕನೇ ಬಾರಿಯೂ ಕೌನ್ಸೆಲಿಂಗ್ ನಡೆಯದ ಕಾರಣ ಸಿಟ್ಟಿಗೆದ್ದ ಶಿಕ್ಷಕರು ಧರಣಿ ನಡೆಸಿದರು.

ಮೊದಲ ದಿನ ಅಂಗವಿಕಲರು, ಆರೋಗ್ಯ ಸಮಸ್ಯೆ ಇರುವವರು ಮೊದಲಾದವರಿಗೆ ಕೌನ್ಸೆಲಿಂಗ್ ನಿಗದಿಯಾಗಿತ್ತು. ಅವರೆಲ್ಲ ಈ ಬಾರಿಯಾದರೂ ವರ್ಗಾವಣೆಯಾಗಬಹುದು ಎಂಬ ಆಸೆಯಿಂದ ಬೆಳಿಗ್ಗೆಯೇ ಶಿಕ್ಷಕರ ಸದನಕ್ಕೆ (ಕೌನ್ಸೆಲಿಂಗ್‌ಗೆ ನಿಗದಿಪಡಿಸಿದ್ದ ಸ್ಥಳ) ಬಂದಿದ್ದರು. ಆದರೆ, 9 ಗಂಟೆ ವೇಳೆಗೆ ಕೌನ್ಸೆಲಿಂಗ್ ನಡೆಯುವುದಿಲ್ಲ ಎಂಬ ಸುದ್ದಿ ಕೇಳಿ ಆಘಾತಕ್ಕೆ ಒಳಗಾದರು.

’ಚಿಕ್ಕ ಮಕ್ಕಳನ್ನು ಮನೆಯಲ್ಲಿಯೇ ಬಿಟ್ಟು ಸೋಮವಾರವೇ ಬೆಂಗಳೂರಿಗೆ ಬಂದಿದ್ದೇವೆ. ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಬೆಳಿಗ್ಗೆಯೇ ಶಿಕ್ಷಕರ ಸದನಕ್ಕೆ ಬಂದಿದ್ದೇವೆ. ಇಲ್ಲಿಗೆ ಬಂದ ನಂತರ ತಾಂತ್ರಿಕ ಕಾರಣದಿಂದ (ಸಾಫ್ಟ್‌ವೇರ್ ಸಮಸ್ಯೆ) ಕೌನ್ಸೆಲಿಂಗ್ ರದ್ದಾಗಿದೆ ಎಂದು ಹೇಳಿದರು. ಮೊದಲೇ ಹೇಳಿದ್ದರೆ ನಾವು ಬರುತ್ತಿರಲಿಲ್ಲ' ಎಂದು ರಾಯಚೂರಿನ ನೊಂದ ಶಿಕ್ಷಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'ವೇಳಾಪಟ್ಟಿ ಪ್ರಕಾರ ನನ್ನ ಕೌನ್ಸೆಲಿಂಗ್ ಸರದಿ ಬುಧವಾರ ಇತ್ತು. ಕೊನೆಗಳಿಗೆಯಲ್ಲಿ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಕಲಬುರಗಿಯಿಂದ ಮಂಗಳವಾರವೇ ಬಂದಿದ್ದೇನೆ. ಆದರೆ, ಈಗ ರದ್ದಾಗಿದೆ ಎಂದು ಹೇಳಿದ್ದಾರೆ. ಇದು ಅನ್ಯಾಯ' ಎಂದು ಮತ್ತೊಬ್ಬ ಶಿಕ್ಷಕರು ತನ್ನ ಅಳಲು ತೋಡಿಕೊಂಡರು.

'ನಿದ್ದೆ, ಊಟ ಬಿಟ್ಟು ಇಲ್ಲಿಗೆ ಬಂದಿದ್ದೇವೆ. ಕೊನೆಗಳಿಗೆಯಲ್ಲಿ ರದ್ದುಪಡಿಸಿದರೆ ಹೇಗೆ? ಸಾಫ್ಟ್‌ವೇರ್ ಸರಿ ಇದೆಯೋ, ಇಲ್ಲವೋ ಎಂಬುದನ್ನು ಮೊದಲೇ ಖಚಿತಪಡಿಸಿಕೊಂಡು ನಂತರ ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಟಿಸಬೇಕಾಗಿತ್ತು. ಅದು ಬಿಟ್ಟು ಶಿಕ್ಷಕರಿಗೆ ಈ ರೀತಿ ತೊಂದರೆ ಕೊಡುವುದು ಸರಿಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಈ ಮುಂಚೆ ವಿಭಾಗ ಮಟ್ಟದ ಕೇಂದ್ರಗಳಲ್ಲೇ ಕೌನ್ಸೆಲಿಂಗ್ ನಡೆಯುತ್ತಿತ್ತು. ಆದರೆ, ಈ ಬಾರಿ ಬೆಂಗಳೂರಿನಲ್ಲಿ ಕೌನ್ಸೆಲಿಂಗ್ ನಡೆಸುತ್ತಿದ್ದಾರೆ. ಬೀದರ್, ಕಲಬುರಗಿ, ರಾಯಚೂರು, ಬೆಳಗಾವಿ ಸೇರಿದಂತೆ ದೂರದ ಜಿಲ್ಲೆಗಳಿಂದ ನೂರಾರು ಸಂಖ್ಯೆಯಲ್ಲಿ ಶಿಕ್ಷಕರು ರಾಜಧಾನಿಗೆ ಬಂದಿದ್ದಾರೆ. ಅವರಿಗೆಲ್ಲ ತೊಂದರೆಯಾಗಿದೆ’ ಎಂದು ಕಲಬುರಗಿಯ ಶಿಕ್ಷಕರೊಬ್ಬರು ತಿಳಿಸಿದರು.

ಕೌನ್ಸೆಲಿಂಗ್ ರದ್ದಾಗಿರುವ ಬಗ್ಗೆ ಮಂಗಳವಾರ ಮಧ್ಯಾಹ್ನದವರೆಗೂ ಅಧಿಕೃತ ಆದೇಶ ಹೊರಡಿಸಿರಲಿಲ್ಲ. ಮಧ್ಯಾಹ್ನದ ವೇಳೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ತಾಂತ್ರಿಕ ಕಾರಣದಿಂದ ರದ್ದುಪಡಿಸಿರುವ ಮಾಹಿತಿ ಹಾಕಿದ್ದಾರೆ. ಮತ್ತೆ ಯಾವಾಗ ಕೌನ್ಸೆಲಿಂಗ್ ಶುರುವಾಗುತ್ತದೆ ಎಂಬ ಮಾಹಿತಿಯೂ ಇಲ್ಲ. ಎಲ್ಲವೂ ಗೊಂದಲದ ಗೂಡಾಗಿದೆ. ಇದಕ್ಕೆಲ್ಲ ಯಾವಾಗ ಇತಿಶ್ರೀ ಹಾಡುತ್ತಾರೊ ಎಂದು ಪ್ರತಿಭಟನನಿರತ ಶಿಕ್ಷಕರು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಆರ್.ವಿಶಾಲ್ ಅವರಿಗೆ ಮೂರು ಬಾರಿ ಕರೆ ಮಾಡಿದರೂ ಸ್ವೀಕರಿಸಲಿಲ್ಲ.



ಕೌನ್ಸೆಲಿಂಗ್ ರದ್ದುಪಡಿಸಿರುವುದನ್ನು ವಿರೋಧಿಸಿ ಶಿಕ್ಷಕರು ಮಂಗಳವಾರ ಬೆಂಗಳೂರಿನ ಶಿಕ್ಷಕರ ಸದನದ ಮುಂದೆ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

ಕೋವಿಡ್ ನಿಯಂತ್ರಣಕ್ಕೆ ಶಾಲೆ–ಕಾಲೇಜು ಮುಚ್ಚಿ: ಕುಮಾರಸ್ವಾಮಿ

ಬೆಂಗಳೂರು: ಕೋವಿಡ್ ಸ್ಥಿತಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 15–20 ದಿನ ಶಾಲಾ-ಕಾಲೇಜು, ವಿದ್ಯಾರ್ಥಿ ನಿಲಯಗಳನ್ನು ಮುಚ್ಚುವುದು ಸೂಕ್ತ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಇಂತಹ ಕ್ರಮ ಕೈಗೊಳ್ಳದಿದ್ದರೆ ವಿದ್ಯಾರ್ಥಿಗಳು ಸಮಸ್ಯೆಗೆ ಸಿಲುಕುವ ಅಪಾಯ ಇದೆ ಎಂದು ಹೇಳಿದರು.

ಕರ್ಫ್ಯೂ ಬಗ್ಗೆ ಬಿಜೆಪಿ ಗೊಂದಲ: ರಾತ್ರಿ ಮತ್ತು ವಾರಾಂತ್ಯ ಕರ್ಫ್ಯೂ ಜಾರಿ ಮಾಡಿರುವ ಬಗ್ಗೆ ಸರ್ಕಾರ ಮತ್ತು ಬಿಜೆಪಿ ಮಧ್ಯೆ ಉಂಟಾಗಿರುವ ಗೊಂದಲದಿಂದಾಗಿ ಜನರಿಗೆ ತೊಂದರೆಯಾಗುತ್ತಿದೆ ಎಂದು ಕುಮಾರಸ್ವಾಮಿ ಹೇಳಿದರು.

ಕರ್ಫ್ಯೂ ಜಾರಿಯಿಂದ ಕೆಲ ಜಿಲ್ಲೆಗಳಲ್ಲಿ ರೈತರಿಗೆ ಬೆಳೆ ಮಾರಾಟಕ್ಕೆ ತೊಂದರೆ ಆಗಿದೆ. ಸರ್ಕಾರ ಅವರಿಗೆ ಸಹಾಯ ಮಾಡಬೇಕು. ಉತ್ತಮ ಪ್ಯಾಕೇಜ್ ನೀಡಬೇಕು ಎಂದು ಒತ್ತಾಯಿಸಿದರು. ಪಾದಯಾತ್ರೆ ಹೆಸರಿನಲ್ಲಿ ನಡೆದ ಜಾತ್ರೆಯಿಂದ ರಾಮನಗರ ಸೇರಿದಂತೆ ಎಲ್ಲೆಡೆ ಕೊರೊನಾ ಸೋಂಕು ಹೆಚ್ಚಾಯಿತು ಎಂದು ಆರೋಪಿಸಿದರು.

ದ್ವಿತೀಯ ಪಿಯುಸಿ ಪರೀಕ್ಷೆ: ತಾತ್ಕಾಲಿಕ ವೇಳಾಪಟ್ಟಿ

ಒಂದನೇ ಪುಟದಿಂದ

ಹೋದ ವರ್ಷದಂತೆ ಈ ಬಾರಿಯೂ ಪ್ರಥಮ, ದ್ವಿತೀಯ ಪಿಯುಸಿ ಭಾಷಾ ವಿಷಯಗಳಲ್ಲಿ ಶೇ 30ರಷ್ಟು ಪಠ್ಯಕ್ರಮ ಕಡಿತಗೊಳಿಸಲಾಗಿದೆ. ಹೀಗಾಗಿ, ಭಾಷಾ ವಿಷಯಗಳಲ್ಲಿ ಶೇ 70ರಷ್ಟು ಪಠ್ಯಕ್ರಮಕ್ಕೆ, ಐಚ್ಛಿಕ ವಿಷಯಗಳಲ್ಲಿ ಶೇ 100ರಷ್ಟು ಪಠ್ಯಕ್ರಮಕ್ಕೆ ಪರೀಕ್ಷೆ ನಡೆಸಲಾಗುತ್ತದೆ.

‘ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಐಚ್ಛಿಕ ವಿಷಯಗಳ ಪ್ರಶ್ನೆಪತ್ರಿಕೆ ತಯಾರಿಕೆ ವೇಳೆ ಬಹು ಆಯ್ಕೆಯ ಪ್ರಶ್ನೆಗಳಿಗೆ ಆದ್ಯತೆ ನೀಡಲಾಗುತ್ತದೆ. ಫೆಬ್ರುವರಿ 17ರಿಂದ ಮಾರ್ಚ್ 25ರವರೆಗೆ ಪ್ರಾಯೋಗಿಕ ಹಾಗೂ ಮಾರ್ಚ್ 14ರಿಂದ 25ರವರೆಗೆ ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆಗಳು ನಡೆಯಲಿವೆ. ಉಪನಿರ್ದೇಶಕರ ನೇತೃತ್ವದಲ್ಲಿ ಪೂರ್ವ ಸಿದ್ಧತಾ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.

ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ

ದಿನಾಂಕ	ವಿಷಯ	ಸಮಯ
ಏಪ್ರಿಲ್ 16	ಗಣಿತ ಶಾಸ್ತ್ರ, ಶಿಕ್ಷಣ ಶಾಸ್ತ್ರ, ಮೂಲ ಗಣಿತ	ಬೆಳಿಗ್ಗೆ 10.15ರಿಂದ ಮಧ್ಯಾಹ್ನ 1.30
ಏ.18	ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ	–
ಏ.19	ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೋ ಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್	–
ಏ.20	ಇತಿಹಾಸ, ಭೌತಶಾಸ್ತ್ರ	–
ಏ.21	ತಮಿಳು, ತೆಲುಗು, ಮಲಯಾಳ, ಮರಾಠಿ, ಉರ್ದು, ಸಂಸ್ಕೃತ, ಅರೇಬಿಕ್, ಫ್ರೆಂಚ್	–
ಏ.22	ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ	–
ಏ.23	ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಮನಃಶಾಸ್ತ್ರ, ರಸಾಯನಶಾಸ್ತ್ರ	–
ಏ.25	ಅರ್ಥಶಾಸ್ತ್ರ	–
ಏ.26	ಹಿಂದಿ	–
ಏ.28	ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ	–
ಏ.29	ಕನ್ನಡ	–
ಏ.30	ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ	–
ಮೇ 2	ಭೂಗೋಳಶಾಸ್ತ್ರ, ಜೀವಶಾಸ್ತ್ರ	–
ಮೇ 4	ಇಂಗ್ಲಿಷ್	–

ದಿನಕ್ಕೆ 1.2 ಲಕ್ಷ ಪ್ರಕರಣ?

ಒಂದನೇ ಪುಟದಿಂದ

ಸಕ್ರಿಯ ಪ್ರಕರಣ 2,50,381 ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ 25,596 ಪ್ರಕರಣಗಳು ದೃಢಪಟ್ಟಿದ್ದರೆ, ಉಳಿದ ಜಿಲ್ಲೆಗಳಲ್ಲಿ ಒಟ್ಟಾರೆ 15,861 ಕ್ಕೆ ಏರಿದೆ. ಗ್ರಾಮೀಣ ಪ್ರದೇಶಗಳಲ್ಲೂ ಏರುತ್ತಿದೆ ಎಂದರು.

ಮೂರನೇ ಅಲೆಯಲ್ಲಿ ಕೊರೊನಾ ಸೋಂಕು ವೇಗವಾಗಿ ಹರಡಿದ ಹಾಗೇ, ಅಷ್ಟೇ ವೇಗದಲ್ಲಿ ಇಳಿಕೆ ಆಗುವುದನ್ನೂ ಇತರ ರಾಜ್ಯಗಳಲ್ಲಿ ನೋಡಿದ್ದೇವೆ. ನಮ್ಮ ರಾಜ್ಯದಲ್ಲೂ ಅದೇ ರೀತಿ ಆಗುತ್ತದೆ. ಫೆಬ್ರುವರಿ ಎರಡು ಅಥವಾ ಮೂರನೇ ವಾರದಲ್ಲಿ ಪ್ರಕರಣಗಳು ಇಳಿಕೆಯಾಗುತ್ತಾ ಹೋಗುತ್ತವೆ ಎಂದು ಸುಧಾಕರ್ ಹೇಳಿದರು.

ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ ಸಾವಿನ ಸಂಖ್ಯೆ ಕಡಿಮೆ ಇರುವುದು ಸಮಾಧಾನಕರ ಸಂಗತಿ. ಲಸಿಕೆ ತೆಗೆದುಕೊಳ್ಳದವರ ಮೇಲೆ ಕೊರೊನಾ ಪ್ರಭಾವ ಹೆಚ್ಚಾಗಿದೆ ಎಂದರು.


60 ವರ್ಷ ಮೇಲ್ಪಟ್ಟವರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಮೂರನೇ ಡೋಸ್ ಲಸಿಕೆ ನೀಡುವ ಬಗ್ಗೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ. ಈವರೆಗೆ ಶೇ 39 ರಷ್ಟು ಜನರಿಗೆ ಮಾತ್ರ ಮೂರನೇ ಡೋಸ್ ನೀಡಲಾಗಿದೆ. ಇದು ತೃಪ್ತಿದಾಯಕವಾಗಿಲ್ಲ. ಮುಂದಿನ ವಾರ ಅಭಿಯಾನ ತ್ವರಿತಗೊಳಿಸಲಾಗುವುದು ಎಂದರು.

ರಾಜ್ಯದಲ್ಲಿ 264 ಆಮ್ಲಜನಕ ತಯಾರಿಕಾ ಘಟಕಗಳ ಪೈಕಿ 222 ಘಟಕಗಳನ್ನು ಸೇವೆಗಾಗಿ ಚಾಲನೆ ನೀಡಲಾಗಿದೆ. ವಾರಾಂತ್ಯ ಕರ್ಫ್ಯೂ ಹಿಂತೆಗೆದುಕೊಳ್ಳುವ ಬಗ್ಗೆ ಯಾವುದೇ ಚರ್ಚೆ ನಡೆಯಲಿಲ್ಲ ಎಂದು ತಿಳಿಸಿದರು.

ವೈದ್ಯರ ನಡೆ ಹಳ್ಳಿ ಕಡೆ:ಸಿ.ಎಂ ಸೂಚನೆ

ಒಂದನೇ ಪುಟದಿಂದ

- ಪ್ರಯೋಗಾಲಯದ ವರದಿ ಬಂದ ತಕ್ಷಣ ಟೆಲಿ ಟ್ರಯಾಜಿಂಗ್ ಮಾಡಬೇಕು.
- ಕೆಲಸಕ್ಕಾಗಿ ಹೊರ ರಾಜ್ಯಗಳಿಂದ ಕಾರ್ಮಿಕರನ್ನು ಕರೆತರುವ ರಾಜ್ಯದ ಕೈಗಾರಿಕೆಗಳಿಗೆ ಕಾರ್ಮಿಕರ ಲಸಿಕೆ ನೀಡುವ ಮತ್ತು ಚಿಕಿತ್ಸೆ ನೀಡಲು ವಿಶೇಷ ಎಸ್‌ಒಪಿ ರೂಪಿಸಬೇಕು.
- ಎಲ್ಲ ಜಿಲ್ಲೆಗಳಲ್ಲಿ ದೃಢ ಪ್ರಮಾಣದ ದರ ಹೆಚ್ಚು ಇರುವುದರಿಂದ ಮಧುಮೇಹ, ರಕ್ತದೊತ್ತಡ, ಹೃದ್ರೋಗದಂತಹ ಕಾಯಿಲೆ ಇರುವವರನ್ನು ಗುರುತಿಸಬೇಕು. ಮನೆಗಳಲ್ಲಿ ಪ್ರತ್ಯೇಕ ಇರುವವರಿಗೆ, 60 ವರ್ಷ ಮೇಲ್ಪಟ್ಟವರಿಗೆ ಪರೀಕ್ಷೆ ಮಾಡಿ ಚಿಕಿತ್ಸೆ ನೀಡಬೇಕು. ಔಷಧಿ ಒದಗಿಸಬೇಕು.
- ಲಸಿಕೆ ಪಡೆದು 90 ದಿನಗಳು ಪೂರೈಸಿರುವವರ ಪಟ್ಟಿ ತಯಾರಿಸಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಲಸಿಕೆ ಕಾರ್ಯಕ್ರಮಮದ ಮೇಲ್ವಿಚಾರಣೆ ಜವಾಬ್ದಾರಿ ನೀಡಬೇಕು.
- ಮೊದಲನೇ ಮತ್ತು ಎರಡನೇ ಡೋಸ್ ಲಸಿಕೆ ಪ್ರಮಾಣದಲ್ಲಿ ರಾಜ್ಯ ಸರಾಸರಿಗಿಂತ ಕಡಿಮೆ ಇರುವ ಜಿಲ್ಲೆಗಳು ತಿಂಗಳ ಕೊನೆಯೊಳಗೆ ರಾಜ್ಯದ ಸರಾಸರಿ ತಲುಪಬೇಕು.



ಜವಾಬ್ದಾರಿ ಅರಿಯಿರಿ ಎಂದು ಹೇಳಿದ್ದೆ: ಕತ್ತಿ ಸ್ಪಷ್ಟನೆ


‘ಮಾಸ್ಕ್ ಧರಿಸುವುದು ಜನರಿಗೆ ಬಿಟ್ಟಿದ್ದು’

ಅಥಣಿ (ಬೆಳಗಾವಿ ಜಿಲ್ಲೆ): ‘ಮಾಸ್ಕ್ ಹಾಕುವ ವಿಚಾರದಲ್ಲಿ ಎಲ್ಲರೂ ಜವಾಬ್ದಾರಿ ಅರಿತು ಪಾಲಿಸಬೇಕು ಎಂದು ನಾನು ಹೇಳಿದ್ದೆ. ಮಾಸ್ಕ್ ಹಾಕಬೇಡಿ ಎಂದು ಯಾರಿಗೂ ಹೇಳಿಲ್ಲ. ನನ್ನ ಹೇಳಿಕೆಗೆ ಅಪಾರ್ಥ ಕಲ್ಪಿಸುವುದು ಬೇಡ’ ಎಂದು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಉಮೇಶ ಕತ್ತಿ ಟ್ವೀಟ್ ಮಾಡಿದ್ದಾರೆ.

’ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿ ವರದಿ ಮಾಡಲಾಗಿದೆ. ಮಾರ್ಗಸೂಚಿಯನ್ನು ನಾವೆಲ್ಲರೂ ಪಾಲಿಸೋಣ’ ಎಂದು ಹೇಳಿದ್ದಾರೆ. ಮಾಸ್ಕ್ ಬಳಕೆ ಕುರಿತ ತಮ್ಮ ಹೇಳಿಕೆಯ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದ್ದಂತೆಯೇ ಎಚ್ಚೆತ್ತು ಮಂಗಳವಾರ ಅವರು ಈ ಸ್ಪಷ್ಟನೆ ನೀಡಿದ್ದಾರೆ.

‘ಸೋಂಕು ಹರಡದಂತೆ ಮುಂಜಾಗ್ರತೆಯಾಗಿ ಮಾಸ್ಕ್ ಧರಿಸುವುದು ಬಿಡುವುದು ಅವರವರಿಗೆ ಬಿಟ್ಟಿದ್ದು. ನನಗೆ ಮನಸ್ಸಿಲ್ಲ; ಮಾಸ್ಕ್ ಹಾಕುವುದಿಲ್ಲ’ ಎಂದು ಅವರು ಇಲ್ಲಿ ಸೋಮವಾರ ರಾತ್ರಿ ಹೇಳಿದ್ದರು.

‘ಕೆಲ ನಿಯಮಗಳನ್ನು ಕೇಂದ್ರ ಸರ್ಕಾರವೇ ಸಡಿಲಿಸಿಸಿದೆ. ಮಾಸ್ಕ್ ಧರಿಸುವುದು ಅವರವರ ಆಯ್ಕೆಗೆ ಬಿಟ್ಟಿದ್ದು. ನಿಷೇಧ ವಿಧಿಸುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರೇ ಈಚೆಗೆ ಹೇಳಿದ್ದಾರೆ’ ಎಂದಿದ್ದು ವಿವಾದಕ್ಕೆ ಈಡಾಗಿತ್ತು.



ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿರುವ ಕೊಪ್ಪಳದ ಗವಿಮಠ ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಕೃಷ್ಣಾಪುರ ಮಠದ ಪರ್ಯಾಯ ಆರಂಭ

ಸರ್ವಜ್ಞ ಪೀಠವೇರಿದ ವಿದ್ಯಾಸಾಗರ ತೀರ್ಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಉಡುಪಿ: ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಮಂಗಳವಾರ ಬೆಳಗಿನ ಜಾವ 5.52ಕ್ಕೆ ಕೃಷ್ಣಮಠದಲ್ಲಿ ಸರ್ವಜ್ಞ ಪೀಠಾರೋಹಣ ಮಾಡಿದರು. ಈ ಮೂಲಕ ಅದಮಾರು ಮಠದ ಪರ್ಯಾಯ ಪೂರ್ಣಗೊಂಡು, ಕೃಷ್ಣಾಪುರ ಮಠದ ದ್ವೈವಾರ್ಷಿಕ ಪರ್ಯಾಯ ಆರಂಭವಾಯಿತು.

ಇದಕ್ಕೂ ಮುನ್ನ ಸಂಪ್ರದಾಯದಂತೆ ಕಾಪುವಿನ ದಂಡತೀರ್ಥದಲ್ಲಿ ಪವಿತ್ರ ಸ್ನಾನ ಮಾಡಿದ ಅವರು, ನಸುಕಿನ 2.30ಕ್ಕೆ ಉಡುಪಿಯ ಜೋಡುಕಟ್ಟೆ ಪ್ರವೇಶಿಸಿದರು. ಪಟ್ಟದ ದೇವರಾದ ದ್ವಿಭುಜ ಕಾಳೀಯ ಮರ್ದನ ಮೂರ್ತಿಗೆ ಪೂಜೆ ಸಲ್ಲಿಸಿ ಪರ್ಯಾಯ ಮೆರವಣಿಗೆಗೆ ಚಾಲನೆ ನೀಡಿದರು.

ಪರ್ಯಾಯ ಯತಿಗಳ ಜತೆಯಲ್ಲಿ ಅಷ್ಟಮಠಗಳ ಇತರ ಯತಿಗಳು ಜೇಷ್ಠತೆ ಆಧಾರದಲ್ಲಿ ಮೇನೆಯಲ್ಲಿ (ಪಲ್ಲಕ್ಕಿ) ಕುಳಿತು ಸಾಗಿದರು. ಪೌರಾಣಿಕ ಪ್ರಸಂಗಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಗಮನಸೆಳೆದವು. ಕೋವಿಡ್ ಕಾರಣ ನಿರ್ಬಂಧವಿದ್ದರೂ ಸಹಸ್ರಾರು ಸಂಖ್ಯೆಯ ಭಕ್ತರು, ರಸ್ತೆಯ ಇಕ್ಕೆಲಗಳಲ್ಲಿ ನಿಂತು ಮೆರವಣಿಗೆ ವೀಕ್ಷಿಸಿದರು.

ಸಾಂಪ್ರದಾಯಿಕ ಕಲಾಪ್ರಕಾರಗಳು ಉತ್ಸವದ ಮೆರುಗು ಹೆಚ್ಚಿಸಿದ್ದವು. ಮೆರವಣಿಗೆಯು ರಥಬೀದಿ ಪ್ರವೇಶಿಸುತ್ತಿದ್ದಂತೆ ಪಲ್ಲಕ್ಕಿಯಿಂದ ಇಳಿದ ಶ್ರೀಗಳು ಕನಕನ ಕಿಂಡಿಯಲ್ಲಿ ಕೃಷ್ಣನ ದರ್ಶನ ಮಾಡಿದರು. ಬಳಿಕ, ಚಂದ್ರಮೌಳೇಶ್ವರ, ಅನಂತೇಶ್ವರ ಹಾಗೂ ಮಧ್ವಾಚಾರ್ಯರ ಸನ್ನಿಧಿಯ ದರ್ಶನ ಪಡೆದರು.

ಬಳಿಕ ಕೃಷ್ಣಮಠದ ಚಂದ್ರಶಾಲೆಯಲ್ಲಿ ಅದಮಾರು ಮಠದ ಈಶಪ್ರಿಯ ತೀರ್ಥರಿಂದ ಮಧ್ವಾಚಾರ್ಯ ಕರಾರ್ಚಿತ ಅಕ್ಷಯ ಪಾತ್ರೆ, ಬೆಳ್ಳಿಯ ಸಟ್ಟುಗ, ಗರ್ಭಗುಡಿಯ ಕೀಲಿಕೈ ಪಡೆದುಕೊಂಡ ಕೃಷ್ಣಾಪುರ ಮಠದ ಶ್ರೀಗಳು ಸರ್ವಜ್ಞ ಪೀಠಾರೋಹಣ ಮಾಡಿದರು. ಇದರೊಂದಿಗೆ 251ನೇ ದ್ವೈವಾರ್ಷಿಕ ಪರ್ಯಾಯ ಪೀಠಾಧಿಪತಿಯಾಗಿ ಅಧಿಕಾರ ಸ್ವೀಕರಿಸಿದರು.

ಜ.17, 2024ರವರೆಗೂ ಕೃಷ್ಣಾಪುರ ಮಠದ ಶ್ರೀಗಳು ಪರ್ಯಾಯ ಪೀಠದಲ್ಲಿರಲಿದ್ದು, ಕೃಷ್ಣನ ಪೂಜೆ ಸಹಿತ ಕೃಷ್ಣ ಮಠದ ಸಂಪೂರ್ಣ ಆಡಳಿತವನ್ನು ನಿಭಾಯಿಸಲಿದ್ದಾರೆ. ಇದು ವಿದ್ಯಾಸಾಗರ ತೀರ್ಥ ಅವರಿಗೆ ನಾಲ್ಕನೇ ಪರ್ಯಾಯ.




ಕೃಷ್ಣಾಪುರ ಮಠದಲ್ಲಿ ಮಂಗಳವಾರ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಸರ್ವಜ್ಞ ಪೀಠಾರೋಹಣ ಮಾಡಿದರು

ಕಂಬಾರರಿಗೆ ಪತ್ನಿ ವಿಯೋಗ

ಬೆಂಗಳೂರು: ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ ಅವರ ಪತ್ನಿ ಸತ್ಯಭಾಮ (76) ಅವರು ಮಂಗಳವಾರ ಬೆಳಿಗ್ಗೆ ನಿಧನರಾದರು.

ಹೃದಯ ಸಂಬಂಧಿ ಸಮಸ್ಯೆ ಇದ್ದು, ಜಯದೇವ ಹೃದ್ರೋಗ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬೆಳಿಗ್ಗೆ 6.15ಕ್ಕೆ ಕೊನೆಯುಸಿರೆಳೆದಿದ್ದಾರೆ. ಅವರಿಗೆ ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ.

ಕತ್ರಿಗುಪ್ಪೆಯಲ್ಲಿರುವ ಅವರ ನಿವಾಸ ‘ಸಿರಿ ಸಂಪಿಗೆ’ಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಚಾಮರಾಜಪೇಟೆಯ ಟಿ.ಆರ್. ಮಿಲ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.



ಸತ್ಯಭಾಮ

ಡ್ರಗ್ಸ್: ಸಿಎಂ ಮನೆ ಭದ್ರತಾ ಸಿಬ್ಬಂದಿ ಬಂಧನ

ಒಂದನೇ ಪುಟದಿಂದ

‘ಆಡುಗೋಡಿಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯದಲ್ಲಿ ಸಂತೋಷ್ ಹಾಗೂ ಶಿವಕುಮಾರ್ ವಾಸವಿದ್ದರು. ಅವರನ್ನು ಮುಖ್ಯಮಂತ್ರಿಯವರ ಮನೆ ಬಂದೋಬಸ್ತ್‌ಗೆ ಆಗಾಗ ನಿಯೋಜಿಸಲಾಗುತ್ತಿತ್ತು. ಅದೇ ಮನೆ ಬಳಿಯೇ ಡ್ರಗ್ಸ್ ಸಾಗಿಸುವ ಸಂದರ್ಭದಲ್ಲಿ ಅವರಿಬ್ಬರು ಸಿಕ್ಕಿಬಿದ್ದಿದ್ದಾರೆ. ಅವರನ್ನು ನ್ಯಾಯಾಲಯದಿಂದ ಕಸ್ಟಡಿಗೆ ಪಡೆದು ತನಿಖೆ ಮುಂದುವರಿಸಬೇಕಿದೆ‘ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಆಟೊ ಬಗ್ಗೆ ಮಾಹಿತಿ: ‘ಆರ್.ಟಿ. ನಗರದ 80 ಅಡಿ ರಸ್ತೆಯಲ್ಲಿ ಆಟೊ ನಿಂತಿತ್ತು. ಆ ಬಗ್ಗೆ ಅನುಮಾನಗೊಂಡಿದ್ದ ಸ್ಥಳೀಯರೊಬ್ಬರು ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು’ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ಹೇಳಿದರು.

‘ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಆಟೊ ಹಾಗೂ ಅದರಲ್ಲಿದ್ದ ನಾಲ್ವರನ್ನು ಆರ್.ಟಿ.ನಗರ ಠಾಣೆಗೆ ಕರೆತಂದಿದ್ದರು. ನಾಲ್ವರ ಪೈಕಿ ಇಬ್ಬರು ಪೊಲೀಸರು ಎಂಬುದು ತಿಳಿಯಿತು’ ಎಂದೂ ತಿಳಿಸಿದರು.

‘ಆಟೊದಲ್ಲಿ ಗಾಂಜಾ ಪತ್ತೆಯಾಯಿತು. ನಾಲ್ವರ ವಿರುದ್ಧವೂ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಗಾಂಜಾ ಪೆಡ್ಲರ್ ಬೆದರಿಸಿ ಹಣ ಕಿತ್ತುಕೊಳ್ಳುವ ಸಂಚು ಪೊಲೀಸರದ್ದಾಗಿತ್ತು. ಈ ಸಂಗತಿಯನ್ನೂ ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ’ ಎಂದೂ ಹೇಳಿದರು.

ಆಟೊ ಕರೆಸಿದ್ದ ಪೊಲೀಸರು: ಸಂತೋಷ್ ಹಾಗೂ ಶಿವಕುಮಾರ್, ಆಡುಗೋಡಿ ನಿವಾಸಿ ಅಮ್ಜದ್ ಮೂಲಕ ಆಟೊವನ್ನು ಆರ್.ಟಿ.ನಗರಕ್ಕೆ ಕರೆಸಿದ್ದರು. ಅದೇ ಆಟೊದಲ್ಲೇ ಡ್ರಗ್ಸ್ ಇತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆಟೊದಲ್ಲೇ ಕುಳಿತು ಪೊಲೀಸರು, ಡ್ರಗ್ಸ್ ಸಾಗಣೆ ಬಗ್ಗೆ ಮಾತನಾಡುತ್ತಿದ್ದರು. ಅವರ ನಡೆಯಿಂದಲೇ ಸ್ಥಳೀಯರಿಗೆ ಅನುಮಾನ ಬಂದಿತ್ತು’ ಎಂದೂ ತಿಳಿಸಿವೆ.

‘15 ದಿನ, 30ಗಳಿಗೊಮ್ಮೆ ಭದ್ರತಾ ಕರ್ತವ್ಯ’

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆಯ ಭದ್ರತಾ ಜವಾಬ್ದಾರಿ ಬೆಂಗಳೂರು ಪೊಲೀಸರದ್ದು. ನಗರದ ಎಲ್ಲ ಠಾಣೆಯ ಸಿಬ್ಬಂದಿಯನ್ನು ಪಾಳಿ ಪ್ರಕಾರ 15 ದಿನ ಹಾಗೂ ತಿಂಗಳಿಗೊಮ್ಮೆ ಭದ್ರತೆಗೆ ಕಳುಹಿಸಲಾಗುತ್ತದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಹೆಡ್‌ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್ ಅವರನ್ನೂ ಭದ್ರತೆ ಕೆಲಸಕ್ಕೆ ಜನವರಿ ಆರಂಭದಲ್ಲಿ ಕಳುಹಿಸಲಾಗಿತ್ತು’ ಎಂದೂ ತಿಳಿಸಿದರು.

ಚುನಾವಣೆ ಸಂದರ್ಭದಲ್ಲಿ ಕಾರ್ಯಾಚರಣೆ: ಐದು ವರ್ಷಗಳ ಹಿಂದಿನ ಪ್ರಕರಣಕ್ಕೆ ಮರುಜೀವ

ಸಿ.ಎಂ ಚನ್ನಿ ಸಂಬಂಧಿಗೆ ಇ.ಡಿ ಶೋಧದ ಬಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಲವೇ ವಾರಗಳಲ್ಲಿ ವಿಧಾನಸಭೆಗೆ ಮತದಾನ ನಡೆಯಲಿರುವ ಪಂಜಾಬ್‌ನ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿಕರೊಬ್ಬರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ನಡೆಸಿದ ಶೋಧವು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ.

'ದೇಶದ ಏಕೈಕ ದಲಿತ ಮುಖ್ಯ-ಮಂತ್ರಿ'ಯನ್ನು ಐದು ವರ್ಷ ಹಿಂದಿನ ಪ್ರಕರಣವನ್ನು ಮುಂದಿಟ್ಟುಕೊಂಡು ಹೆದರಿಸಲು ಬಿಜೆಪಿ ಯತ್ನಿಸುತ್ತಿದೆ. ಆದರೆ, ಅದು ಫಲ ನೀಡದು ಎಂದು ಕಾಂಗ್ರೆಸ್ ಹೇಳಿದೆ.

ಪಂಜಾಬ್‌ನಲ್ಲಿ 'ಮರಳು ಮಾಫಿಯಾ' ಮತ್ತು ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಕಂಪನಿಗಳಿಗೆ ಸೇರಿದ ಚಂಡೀಗಡ ಮತ್ತು ಮೊಹಾಲಿಯ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಇ.ಡಿ ಹೇಳಿದೆ.

ಇ.ಡಿ ಶೋಧ ನಡೆಸಿದ ಸ್ಥಳಗಳಲ್ಲಿ ಭೂಪೀಂದರ್ ಸಿಂಗ್ ಅಲಿಯಾಸ್ ಹನಿ ಅವರ ಸ್ಥಳವೂ ಸೇರಿದೆ. ಭೂಪೀಂದರ್ ಅವರು ಚನ್ನಿ ಅವರ ಸಂಬಂಧಿ. ಈ ಪ್ರಕರಣಕ್ಕೂ ತಮಗೂ ಯಾವುದೇ ಸಂಬಂಧ ಇಲ್ಲ ಎಂದು ಚನ್ನಿ ಹೇಳಿದ್ದಾರೆ. ಪಂಜಾಬ್ ಪೊಲೀಸರು ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿ 2018ರಲ್ಲಿ ದಾಖಲಿಸಿಕೊಂಡಿದ್ದ ಎಫ್‌ಐಆರ್ ಆಧಾರದಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಶೋಧದಲ್ಲಿ ₹6 ಕೋಟಿ ನಗದು ವಶಕ್ಕೆ ಪಡೆಯಲಾಗಿದೆ. ಅದರಲ್ಲಿ ಭೂಪೀಂದರ್ ಅವರಿಗೆ ಸಂಬಂಧಿಸಿದ ಸ್ಥಳದಲ್ಲಿಯೇ ₹4 ಕೋಟಿ ಸಿಕ್ಕಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

> **ಗುಜರಾತ್‌ನಿಂದ ಈಶಾನ್ಯ ರಾಜ್ಯಗಳವರೆಗೆ ನಮ್ಮ ವಿರುದ್ಧ ಇ.ಡಿಯನ್ನು ಬಿಜೆಪಿ ಬಳಸಿದ ತಂತ್ರ ನೋಡಿದ್ದೇವೆ. ಆದರೆ, ನಾವು ಹೆದರುವವರಲ್ಲ, ಬಾಗುವವರಲ್ಲ**
> **ರಣದೀಪ ಸುರ್ಜೇವಾಲಾ,** ಕಾಂಗ್ರೆಸ್ ವಕ್ತಾರ

> **ಮುಖ್ಯಮಂತ್ರಿ ಅವರ ಕುಟುಂಬದವರು ಮರಳು ಅಕ್ರಮ ಗಣಿಗಾರಿಕೆಯಲ್ಲಿ ಇರುವುದು ಸ್ಪಷ್ಟ. ಇಂಥ ವ್ಯಕ್ತಿಯಿಂದ ಪಂಜಾಬ್ ಭವಿಷ್ಯಕ್ಕೆ ಏನು ನಿರೀಕ್ಷಿಸಬಹುದು?**
> **ರಾಘವ್ ಛಡ್ಡಾ,** ಎಎಪಿ ವಕ್ತಾರ

ಪಂಜಾಬ್ ವಿಧಾನಸಭೆ ಚುನಾವಣೆಯ ಮತದಾನವು ಫೆಬ್ರುವರಿ 20ರಂದು ನಡೆಯಲಿದೆ. ಇಲ್ಲಿ ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಯತ್ನಿಸುತ್ತಿದೆ. ಎಎಪಿ ಪ್ರಮುಖ ಪ್ರತಿಸ್ಪ-ರ್ಧಿಯಾಗಿದೆ. ಬಿಜೆಪಿಗೆ ಇಲ್ಲಿ ಪ್ರಬಲ ನೆಲೆ ಇಲ್ಲ. ಹಾಗಿದ್ದರೂ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರ ಹೊಸ ಪಕ್ಷ ಮತ್ತು ಅಕಾಲಿ ದಳದಿಂದ ಸಿಡಿದು ಬೇರೆಯಾದ ಇನ್ನೊಂದು ಪಕ್ಷದ ಜತೆಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ.

ಇ.ಡಿಯ ಕ್ರಮವನ್ನು ಕಾಂಗ್ರೆಸ್ ಖಂಡಿಸಿದೆ. ಇ.ಡಿ ಎಂದರೆ, ಬಿಜೆಪಿಯ 'ಎಲೆಕ್ಷನ್ ಡಿಪಾರ್ಟ್‌ಮೆಂಟ್' ಎಂದು ಕಾಂಗ್ರೆಸ್ ಹೇಳಿದೆ.

'ದೇಶದ ಏಕೈಕ ದಲಿತ ಮುಖ್ಯ-ಮಂತ್ರಿಯನ್ನು ಬೆದರಿಸುವ ಕೆಲಸ ನಡೆಯುವುದಿಲ್ಲ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಬಿಜೆಪಿಯ ಜತೆ ಶಾಮೀಲಾಗಿ ಚನ್ನಿ ಮತ್ತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆ-ಸುತ್ತಿದ್ದಾರೆ' ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಆರೋಪಿಸಿದ್ದಾರೆ.

ಚನ್ನಿ ವಿರುದ್ಧ ವಾಗ್ದಾಳಿ ನಡೆಸಿದ್ದ ಕೇಜ್ರಿವಾಲ್ ಅವರು, 'ಮುಖ್ಯಮಂತ್ರಿಯ ಸಂಬಂಧಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆದಿರುವುದು ಬೇಸರದ ಸಂಗತಿ' ಎಂದಿದ್ದಾರೆ.

2018ರ ಎಫ್‌ಐಆರ್‌ನಲ್ಲಿ ಚನ್ನಿ ಅವರ ಸಂಬಂಧಿಕರ ಹೆಸರು ಇಲ್ಲ. ಎಫ್‌ಐಆರ್‌ನಲ್ಲಿ ಇರುವ ವ್ಯಕ್ತಿಯು ಚನ್ನಿ ಸಂಬಂಧಿಯ ಗೆಳೆಯ ಎಂಬ ಕಾರಣಕ್ಕೆ ಗುರಿ ಮಾಡಲಾಗಿದೆ ಎಂದು ಸುರ್ಜೇವಾಲಾ ಹೇಳಿದ್ದಾರೆ.

'ಇವೆಲ್ಲ ಆಧಾರರಹಿತ ಆರೋಪಗಳು. ಎಎಪಿ ಮತ್ತು ಬಿಜೆಪಿ ಹೇಗೆ ಜತೆಯಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ಇದು ತೋರಿಸುತ್ತಿದೆ. ಇ.ಡಿ ಶೋಧದ ಬಗ್ಗೆ ಯಾರಿಗೂ ಗೊತ್ತೇ ಇರಲಿಲ್ಲ. ಆದರೆ, ಅದಕ್ಕೆ ಮೊದಲು ಪ್ರತಿಕ್ರಿಯೆ ಕೊಟ್ಟವರು ಕೇಜ್ರಿವಾಲ್. ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷವನ್ನು ಗೋವಾ, ಉತ್ತರಾಖಂಡ ಮತ್ತು ಸೋಲಿಸಲು ಎಎಪಿ ಮತ್ತು ಬಿಜೆಪಿ ಒಂದಾಗಿವೆ' ಎಂದು ಸುರ್ಜೇವಾಲಾ ಆಪಾದಿಸಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ದಾಳಿ ಹೊಸತಲ್ಲ

ಕೇಂದ್ರದ ತನಿಖಾ ಸಂಸ್ಥೆಗಳು ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯ ಪ್ರತಿಸ್ಪರ್ಧಿ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಈ ಹಿಂದೆಯೂ ಇಂತಹ ಶೋಧ ನಡೆಸಿವೆ ಎಂದು ವಿರೋಧ ಪಕ್ಷಗಳು ಹೇಳಿವೆ.

ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಆಪ್ತರ ಮನೆಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಇತ್ತೀಚೆಗೆ ಶೋಧ ನಡೆಸಿದ್ದರು.

ಲೋಕಸಭಾ ಚುನಾವಣೆಗೆ ಮೊದಲು, ಕರ್ನಾಟಕ, ಛತ್ತೀಸಗಡ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶದಲ್ಲಿ ಇಂತಹುದೇ ಶೋಧ ಕಾರ್ಯಾಚರ-ಣೆಗಳು ನಡೆದಿದ್ದವು. ರಾಜಕೀಯ ಬಿಕ್ಕಟ್ಟಿನ ಸಂದರ್ಭಗಳ-ಲ್ಲಿಯೂ ತನಿಖಾ ಸಂಸ್ಥೆಗಳು ದಾಳಿ ನಡೆಸಿದ ನಿದರ್ಶನಗಳು ಇವೆ.

'ಇ.ಡಿ ದಾಳಿಗಳನ್ನು ನಡೆಸುವುದು ಬಿಜೆಪಿಯ ಅತ್ಯಂತ ನೆಚ್ಚಿನ ಅಸ್ತ್ರ. ಏಕೆಂದರೆ, ಅಡಗಿಸಿಡಬೇಕಾದ ವಿಚಾರಗಳು ಅವರಲ್ಲಿಯೇ ಇವೆ. ಎಲ್ಲರೂ ನಿಮ್ಮ ಹಾಗೆ ಅಲ್ಲ. ನಮಗೆ ಭೀತಿ ಇಲ್ಲ' ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ಕೇಂದ್ರ ತನಿಖಾ ಸಂಸ್ಥೆಗಳ ಶೋಧಕ್ಕೆ ಒಳಗಾದವರಲ್ಲಿ ಎನ್‌ಸಿಪಿಯ ಶರದ್ ಪವಾರ್ ಮತ್ತು ಅಜಿತ್ ಪವಾರ್, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಕಾಂಗ್ರೆಸ್‌ನ ಕಮಲನಾಥ್ ಮತ್ತು ಡಿ.ಕೆ. ಶಿವಕುಮಾರ್, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಆಪ್ತರು, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಮಗಳು ಸೆಂತಾಮರೈ, ಡಿಎಂಕೆ ಸಂಸದೆ ಕನಿಮೊಳಿ, ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಮತ್ತು ಇತರರು ಸೇರಿದ್ದಾರೆ.

ಶೋಧಗಳು ಮತ್ತು ಚುನಾವಣೆಗೆ ಯಾವುದೇ ಸಂಬಂಧ ಇಲ್ಲ ಎಂದು ತನಿಖಾ ಸಂಸ್ಥೆಗಳು ಹೇಳಿವೆ. ಆದರೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ.

2021ರ ಏಪ್ರಿಲ್–ಮೇಯಲ್ಲಿ ವಿವಿಧ ರಾಜ್ಯಗಳ ವಿಧಾ-ನಸಭೆಗಳಿಗೆ ಚುನಾವಣೆ ನಡೆದಿತ್ತು. ಆ ಸಂದರ್ಭದಲ್ಲಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಹೆಂಡತಿ ಮತ್ತು ಅವರ ಸಹೋದರಿಗೆ ಕಲ್ಲಿದ್ದಲು ಕಳವು ಪ್ರಕರಣದಲ್ಲಿ ನೋಟಿಸ್ ಜಾರಿಗೊಳಿಸಲಾಗಿತ್ತು. ಮುಖಂಡರಾದ ಪಾರ್ಥ ಚಟರ್ಜಿ, ಮದನ್ ಮಿತ್ರಾ, ಕುನಾಲ್ ಘೋಷ್ ಮತ್ತು ವಿವೇಕ್ ಗುಪ್ತಾ ಅವರನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು.

ತಮಿಳುನಾಡು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ (2011 ಏಪ್ರಿಲ್) 'ಹಣ ಹಂಚಿಕೆಯ ದೂರು' ಆಧಾರದಲ್ಲಿ ಸೆಂತಾಮರೈ ಅವರ ಮನೆಯಲ್ಲಿ ಶೋಧ ನಡೆಸಲಾಗಿತ್ತು.

2017ರಲ್ಲಿ, ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮುಖಂಡ ಅಹ್ಮದ್ ಪಟೇಲ್ ಅವರ ಗೆಲುವನ್ನು ಖಾತರಿ-ಪಡಿಸುವುದಕ್ಕಾಗಿ ಗುಜರಾತ್ ಕಾಂಗ್ರೆಸ್ ಶಾಸಕರನ್ನು ತಮ್ಮ ಸುಪರ್ದಿಯಲ್ಲಿ ಇರಿಸಿಕೊಂಡಿದ್ದ ಕಾಂಗ್ರೆಸ್ ಮುಖಂಡ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಇ.ಡಿ ಮತ್ತು ಆದಾಯ ತೆರಿಗೆ ದಾಳಿ ಆಗಿತ್ತು. 2019ರಲ್ಲಿ ಅವರ ಬಂಧನವೂ ಆಗಿತ್ತು.

ಜಾಟ್ ಸಿಟ್ಟು ಶಮನಕ್ಕೆ ಮುಂದಾದ ಬಿಜೆಪಿ

ಪ್ರಜಾವಾಣಿ ವಾರ್ತೆ

ಲಖನೌ: ರೈತರು ಅದರಲ್ಲೂ ವಿಶೇಷವಾಗಿ ಜಾಟ್ ಸಮುದಾಯದ ಆಕ್ರೋಶವನ್ನು ತಣಿಸಲು ಬಿಜೆಪಿ ಪ್ರಯ-ತ್ನಿಸುತ್ತಿದೆ. ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಜಾಟ್ ಸಮುದಾಯವು ನಿರ್ಣಾಯಕ. ಭಾರತೀಯ ಕಿಸಾನ್ ಸಂಘದ ಮುಖಂಡರ ಜತೆ ಮಾತುಕತೆ ನಡೆಸಿ, ಸಮುದಾಯದ ಸಿಟ್ಟು ಕಡಿಮೆ ಮಾಡುವ ಕಾರ್ಯತಂತ್ರಕ್ಕೆ ಬಿಜೆಪಿ ಮುಂದಾಗಿದೆ. ಕೇಂದ್ರವು ರದ್ದು ಪಡಿಸಿದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಜಾಟ್ ಸಮುದಾಯವು ಮುಂಚೂಣಿಯಲ್ಲಿತ್ತು.

ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡರು ಮತ್ತು ರೈತರನ್ನು ಭೇಟಿಯಾಗಿ ಅವರ ಮನ ಒಲಿಸುವಂತೆ ಪಕ್ಷದಲ್ಲಿರುವ ಜಾಟ್ ಸಮುದಾಯದ ಮುಖಂಡರಿಗೆ ಬಿಜೆಪಿ ಸೂಚಿಸಿದೆ. ವಿಧಾನಸಭೆ ಚುನಾವಣೆಯಲ್ಲಿ ಆಗಬಹುದಾದ ಹಾನಿಯನ್ನು ಕನಿಷ್ಠಗೊಳಿಸುವ ಪ್ರಯತ್ನವನ್ನು ಬಿಜೆಪಿ ಆರಂಭಿಸಿದೆ.

ಬಿಕೆಯು ನಾಯಕ ನರೇಶ್ ಟಿಕಾಯತ್ ಅವರನ್ನು ಕೇಂದ್ರ ಸಚಿವ ಸಂಜೀವ್ ಬಲ್ಯಾನ್ ಅವರು ಸೋಮವಾರ ಭೇಟಿ ಆಗಿದ್ದಾರೆ. ಮುಝಫ್ಫರ್‌ನಗರದ ಸಿಸೌಲಿ ಎಂಬಲ್ಲಿರುವ ಟಿಕಾಯತ್ ಮನೆಯಲ್ಲಿ ಒಂದು ತಾಸು ಚರ್ಚಿಸಿದ್ದಾರೆ. ಬಲ್ಯಾನ್ ಅವರು ಕೂಡ ಜಾಟ್ ಸಮುದಾಯದವರು.

ಇದೊಂದು ಸೌಜನ್ಯದ ಭೇಟಿ ಎಂದು ಬಲ್ಯಾನ್ ಹೇಳಿದ್ದಾರೆ. 'ನರೇಶ್ ಟಿಕಾಯತ್ ಅವರು ನಮ್ಮ ಜಾತಿ ಪಂಚಾಯಿತಿಯ ನಾಯಕ. ಕೆಲ ದಿನಗಳ ಹಿಂದೆ ಅವರಿಗೆ ಗಾಯ ಆಗಿತ್ತು. ಆರೋಗ್ಯ ವಿಚಾರಿಸುವುದಕ್ಕಾಗಿಯೇ ಇಲ್ಲಿಗೆ ಬಂದೆ' ಎಂದು ಬಲ್ಯಾನ್ ಅವರು ಸಭೆಯ ನಂತರ ಹೇಳಿದ್ದಾರೆ.

ರಾಜಕೀಯದ ಬಗ್ಗೆ ಏನನ್ನೂ ಚರ್ಚಿಸಿಲ್ಲ ಎಂದು ಟಿಕಾಯತ್ ಅವರೂ ಹೇಳಿದ್ದಾರೆ. 'ನಮ್ಮ ಮನೆಯ ಬಾಗಿಲು ಎಲ್ಲರಿಗೂ ತೆರೆದೇ ಇದೆ. ನಾವು ಯಾವುದೇ ರಾಜಕೀಯ ಪಕ್ಷದ ಜತೆಗೆ ಸಂಬಂಧ ಇರಿಸಿಕೊಂಡಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಹೇಳಿಕೆ ನೀಡಲು ಟಿಕಾಯತ್ ನಿರಾಕರಿ-ಸಿದ್ದಾರೆ ಎಂದು ಮೂಲಗಳು ಹೇಳಿವೆ.

'ರೈತ ವಿರೋಧಿ ನೀತಿಗಳನ್ನು ನಾವು ವಿರೋಧಿಸುತ್ತೇವೆ. ರೈತರು 13 ತಿಂಗಳು ಪ್ರತಿಭಟನೆ ನಡೆಸಬೇಕಾಯಿತು. 700 ರೈತರು ಮೃತಪಟ್ಟರು. ಜನರಿಗೆ ಎಲ್ಲವೂ ಗೊತ್ತಿದೆ. ಅವರಿಗೆ ಏನನ್ನೂ ಹೇಳುವ ಅಗತ್ಯ ಇಲ್ಲ' ಎಂದು ಬಿಕೆಯುನ ಸ್ಥಳೀಯ ಮುಖಂಡರೊಬ್ಬರು ಹೇಳಿದ್ದಾರೆ. ಈ ಮೂಲಕ ರಾಜಕೀಯದಲ್ಲಿ ತಮ್ಮ ಆಯ್ಕೆ ಏನು ಎಂಬುದನ್ನು ಪರೋಕ್ಷವಾಗಿ ಸೂಚಿಸಿದ್ದಾರೆ. ಎಸ್‌ಪಿ–ಆರ್‌ಎಲ್‌ಡಿ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ಕೊಡುವಂತೆ ಟಿಕಾಯತ್ ಕರೆ ಕೊಟ್ಟ ಮರುದಿನವೇ, ಈ ಭೇಟಿ ನಡೆದಿದೆ.



ಬಿಜೆಪಿ ಸೀರೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಚಿತ್ರಗಳು ಹಾಗೂ ಬಿಜೆಪಿ ಘೋಷಣೆಗಳನ್ನು ಮುದ್ರಿಸಿರುವ ಸೀರೆಗಳನ್ನು ಸೂರತ್‌ನಲ್ಲಿ ಕಾರ್ಯಕರ್ತರು ಪ್ರದರ್ಶಿಸಿದರು

ಭಗವಂತ ಮಾನ್ ಎಎಪಿ ಸಿ.ಎಂ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಚಂಡೀಗಡ: ಈ ಬಾರಿಯ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಭಗವಂತ ಮಾನ್ (48) ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ-ಯಾಗಿದ್ದಾರೆ ಎಂದು ಆಮ್ ಆದ್ಮಿ ಪಕ್ಷ ಮಂಗಳವಾರ ಪ್ರಕಟಿಸಿದೆ. ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆಯಲ್ಲಿ ಮಾನ್ ಅವರು ಶೇ 93ರಷ್ಟು ಮತಗಳನ್ನು ಪಡೆದಿದ್ದಾರೆ ಎಂದು ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಘೋಷಿಸಿದರು. ಎಎಪಿ ಮುಂದೆ ಇದ್ದ ಏಕೈಕ ಆಯ್ಕೆ ಮಾನ್ ಅವರಾಗಿದ್ದರು.

ಮುಖ್ಯಮಂತ್ರಿ ಅಭ್ಯರ್ಥಿಯ ಹುಡುಕಾಟಕ್ಕೆ ಎಎಪಿ ಹೊಸ ವಿಧಾನ ಅಳವಡಿಸಿಕೊಂಡಿತ್ತು. ಟೆಲಿ-ವೋಟಿಂಗ್ ಮೂಲಕ ಅಭ್ಯರ್ಥಿ ಆಯ್ಕೆ ಮಾಡುವ ಪ್ರ-ಕ್ರಿಯೆಯನ್ನು ಅನುಸರಿಸಿತ್ತು. ಫೆಬ್ರುವರಿ 20ರಂದು ನಡೆಯುವ ಚುನಾವಣೆಯಲ್ಲಿ ಎಎಪಿ ನಿರ್ದಿಷ್ಟ ರಾಜಕೀಯ ಮೈಲುಗಲ್ಲು ಸಾಧಿಸುವ ಉಮೇದಿನಲ್ಲಿದೆ. ಎಎಪಿ ಹೊರತುಪಡಿಸಿದರೆ, ಪಂಜಾಬ್‌ನ ಬೇರಾವುದೇ ರಾಜಕೀಯ ಪಕ್ಷವೂ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಆಯ್ಕೆ ಮಾಡಿಲ್ಲ. ಈ ಮೂಲಕ ಎಎಪಿ ಒಂದು ಹೆಜ್ಜೆ ಮುಂದೆ ಇರಿಸಿದಂತೆ ತೋರಿದ್ದು, ಪಕ್ಷದ ಕಾರ್ಯಕರ್ತರ ವಲಯದಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ.



ಪಂಜಾಬ್‌ನಲ್ಲಿ ಎಎಪಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆಯಾದ ಭಗವಂತ್ ಮಾನ್ ಜೊತೆ ಪಕ್ಷದ ವರಿಷ್ಠ ಅರವಿಂದ ಕೇಜ್ರಿವಾಲ್

ರಾಜ್ಯದಲ್ಲಿ ದಲಿತ ಸಮುದಾಯದ ಸಂಖ್ಯೆ ಅಧಿಕವಾಗಿದೆ ಎಂಬ ಕಾರಣಕ್ಕೆ ಅದೇ ಸಮುದಾಯಕ್ಕೆ ಸೇರಿದ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಕಾಂಗ್ರೆಸ್ ವರಿಷ್ಠರು ಮುಖ್ಯ-ಮಂತ್ರಿಯಾಗಿ ಆಯ್ಕೆ ಮಾಡಿದ್ದರು. ರಾಜ್ಯದಲ್ಲಿ ಶೇ 33ರಷ್ಟು ದಲಿತರಿದ್ದಾರೆ. ಆದರೆ ದಶಕಗಳ ಕಾಲ ರಾಜ್ಯವನ್ನು ಜಾಟ್ ಸಿಖ್ ಮುಖ್ಯಮಂತ್ರಿ ಆಳಿದ್ದರು. ಎಎಪಿ ಆಯ್ಕೆ ಮಾಡಿರುವ ಭಗವಂತ್ ಮಾನ್ ಅವರು ಜಾಟ್ ಸಿಖ್ ಸಮುದಾಯಕ್ಕೆ ಸೇರಿದ್ದಾರೆ.

ಮಾನ್ ಅವರನ್ನು ಹೊರತುಪಡಿಸಿ ಬೇರೆ ಯಾರನ್ನಾದರೂ ಪಕ್ಷವು ಆಯ್ಕೆ ಮಾಡಿದ್ದರೆ ವಿವಾದಕ್ಕೆ ಎಡೆ ಮಾಡಿಕೊಡುವ ಸಾಧ್ಯತೆಯಿತ್ತು. ಮಾನ್ ಅವರನ್ನು ಆಯ್ಕೆ ಮಾಡುವ ಮೂಲಕ ಪಂಜಾಬ್‌ನಲ್ಲಿ ಪಕ್ಷದ ಗೆಲುವಿನ ಪ್ರಮಾಣವನ್ನು ಎಎಪಿ ಹೆಚ್ಚಿಸಿಕೊಂಡಿದೆ. ಎಎಪಿಗೆ ಪಂಜಾಬ್‌ನಲ್ಲಿ ಪರಿಣಾಮಕಾರಿ ಎನಿಸುವ ಸಾಕಷ್ಟು ಮುಖಂಡರಿದ್ದಾರೆ. ಆದರೆ ಮಾನ್ ಅವರು ಜನನಾಯಕ-ರಾಗಿದ್ದು, ಜನರೊಂದಿಗೆ ಬೆರೆಯುವ ಕಲೆಯು ಅವರಿಗೆ ಸಿದ್ಧಿಸಿದೆ. ಎಎಪಿ ಹಾಗೂ ಕೇಜ್ರಿವಾಲ್‌ಗೆ ನಿಷ್ಠರಾಗಿ ಇರುವುದೂ ಮಾನ್ ಅವರ ಆಯ್ಕೆ ಹಿಂದಿರುವ ಪ್ರಮುಖ ಕಾರಣವಾಗಿದೆ.

ನಾಯಕರ ಆಂತರಿಕ ಕಚ್ಚಾಟ ಮತ್ತು ಪಕ್ಷಾಂತರ ಪ್ರವೃತ್ತಿಯಿಂದ ಪಕ್ಷ ಈಗಾಗಲೇ ಸಾಕಷ್ಟು ಅನುಭವಿಸಿದೆ. ಆದರೆ ಮಾನ್ ಈ ಎಲ್ಲಾ ಗೊಂದಲಗಳ ನಡುವೆಯೇ ಪಕ್ಷದಲ್ಲಿ ಉಳಿದು, ಎಎಪಿಯ ಹೆಜ್ಜೆಗುರುತುಗಳನ್ನು ರಾಜ್ಯದಾದ್ಯಂತ ಹೆಚ್ಚಿಸಲು ತಳಮ-ಟ್ಟದಲ್ಲಿ ಕೆಲಸ ಮಾಡಿದ್ದಾರೆ. ರಾಜ್ಯದ ಮಣ್ಣಿನ ಮಗನನ್ನು ಮುಖ್ಯಮಂತ್ರಿಯಾ-ಗಿ ಹೆಸರಿಸುವ ಇಂದಿನ ಘೋಷಣೆಯು, ಕೇಜ್ರಿವಾಲ್ ಅವರು ಪಂಜಾಬ್ ಮುಖ್ಯಮಂತ್ರಿ ಆಗುತ್ತಾರೆ ಎಂಬ ಊಹಾಪೋಹಗಳಿಗೆ ತೆರೆ ಎಳೆದಿದೆ.

ಜಾಟ್ ಸಿಖ್ ಮತ ಸೆಳೆಯುವ ತಂತ್ರ

ರಾಜ್ಯದಲ್ಲಿರುವ ಜಾಟ್ ಸಿಖ್ ಸಮುದಾಯದ ಮತಗಳನ್ನು ಸೆಳೆಯುವ ಉದ್ದೇಶದಿಂದ ಎಎಪಿಯು ಮಾನ್ ಅವರನ್ನು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ ಎನ್ನಲಾಗಿದೆ. 2017ರ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು ಜಾಟ್ ಸಿಖ್ ಸಮುದಾಯದ ಶೇ 30ರಷ್ಟು ಮತಗಳನ್ನು ಪಡೆದಿತ್ತು. ಇದು ಮುಖ್ಯವಾಹಿನಿಯಲ್ಲಿರುವ ಕಾಂಗ್ರೆಸ್ ಪಕ್ಷ ಗಳಿಸಿದ್ದಕ್ಕಿಂತ ಹೆಚ್ಚು. ರಾಜ್ಯದಲ್ಲಿ ಅಕಾಲಿದಳ ಹಾಗೂ ಬಿಜೆಪಿ ಮೈತ್ರಿಕೂಟಕ್ಕೆ ಹೋಗುತ್ತಿದ್ದ ಈ ಸಮುದಾಯದ ಮತಗಳು ಕಳೆದ ಬಾರಿ ಎಎಪಿ ಪಾಲಾಗಿದ್ದವು. ಅಕಾಲಿದಳ ಹಾಗೂ ಬಿಜೆಪಿ ಮೈತ್ರಿಕೂಟವು 2012ರ ಚುನಾವಣೆಯಲ್ಲಿ ಈ ಸಮುದಾಯದ ಶೇ 57ರಷ್ಟು ಮತಗಳನ್ನು ಪಡೆದಿತ್ತು. ಈ ಪ್ರಮಾಣವು 2017ರ ಚುನಾವಣೆಯಲ್ಲಿ ಶೇ 37ಕ್ಕೆ ಕುಸಿದಿತ್ತು. ರಾಜ್ಯದ ರಾಜಕೀಯ ಪ್ರವೇಶಿಸಿದ್ದ ಎಎಪಿ, ಈ ಸಮುದಾಯದ ಹೆಚ್ಚು ಮತಗಳನ್ನು ಬುಟ್ಟಿಗೆ ಹಾಕಿಕೊಂಡಿತ್ತು.

ಚುನಾವಣಾ ಕಣದಲ್ಲಿ...

• **ಮಮತಾ ಪ್ರಚಾರ:** ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಉತ್ತರ ಪ್ರದೇಶ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಪರವಾಗಿ ಪ್ರಚಾರ ಮಾಡಲಿದ್ದಾರೆ ಎಂದು ಎಸ್‌ಪಿ ಮುಖಂಡ ಕಿರಣ್ಮಯ್ ನಂದಾ ಹೇಳಿದ್ದಾರೆ. ನಂದಾ ಅವರು ಕೋಲ್ಕತ್ತದಲ್ಲಿ ಮಮತಾ ಅವರನ್ನು ಭೇಟಿಯಾಗಿ ಪ್ರಚಾರದ ಬಗ್ಗೆ ಚರ್ಚಿಸಿದ್ದಾರೆ. ಫೆ. 8ರಂದು ಅವರು ಅಖಿಲೇಶ್ ಜತೆಗೆ ವರ್ಚುವಲ್ ಸಭೆಯಲ್ಲಿ ಭಾಗಿ ಆಗಲಿದ್ದಾರೆ. ಅಂದು ಅವರು ಜಂಟಿ ಮಾಧ್ಯಮಗೋಷ್ಠಿಯಲ್ಲಿಯೂ ಮಾತನಾಡಲಿದ್ದಾರೆ

• **ಮೋದಿ ಸಂವಾದ:** ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಯ ಬಿಜೆಪಿ ಕಾರ್ಯಕರ್ತರ ಜತೆ ಮಂಗಳವಾರ ವರ್ಚುವಲ್ ಸಂವಾದ ನಡೆಸಿದ್ದಾರೆ. ಜನರನ್ನು ತಲುಪುವ ಉದ್ದೇಶದಿಂದ ಅವರಿಂದ ಕಿರು ದೇಣಿಗೆ ಪಡೆದುಕೊಳ್ಳುವ ಅಭಿಯಾನ ನಡೆಸುವಂತೆ ಕರೆ ನೀಡಿದರು. ಕಿರು ದೇಣಿಗೆ ಸಂಗ್ರಹ ಅಭಿಯಾನದಲ್ಲಿ ಜನರು ₹5 ದೇಣಿಗೆ ನೀಡಬಹುದು ಎಂದು ಮೋದಿ ಹೇಳಿದರು. ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿ, ಮಹಿಳಾ ಸಬಲೀಕರಣ, ಮೂಲಸೌಕರ್ಯಕ್ಕೆ ಒತ್ತು ಮುಂತಾದ ವಿಚಾರಗಳನ್ನು ಅವರು ಚರ್ಚಿಸಿದರು.

ಉಚಿತ ವಿದ್ಯುತ್: ನೋಂದಣಿ ಆರಂಭಿಸಿದ ಎಸ್‌ಪಿ

ಪ್ರಜಾವಾಣಿ ವಾರ್ತೆ

ಲಖನೌ: '300 ಯೂನಿಟ್ ಉಚಿತ ವಿದ್ಯುತ್' ಪಡೆಯಲು ಆಸಕ್ತಿ ಇರುವವರ ನೋಂದಣಿಗೆ ಸಮಾಜವಾದಿ ಪಕ್ಷವು (ಎಸ್‌ಪಿ) ಮನೆ ಮನೆ ಅಭಿಯಾನವನ್ನು ಮಂಗಳವಾರ ಆರಂಭಿಸಿದೆ. ಉತ್ತರ ಪ್ರದೇಶದ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುವ 'ಸಂಕಲ್ಪ' ತೊಟ್ಟ ಮರುದಿನವೇ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಈ ಅಭಿಯಾನಕ್ಕೆ ಚಾಲನೆ ಕೊಟ್ಟಿದ್ದಾರೆ. ಎಸ್‌ಪಿ ಅಧಿಕಾರಕ್ಕೆ ಬಂದರೆ '300 ಯೂನಿಟ್ ಉಚಿತ ವಿದ್ಯುತ್ ನೀಡಲಾಗುವುದು' ಎಂಬುದು ಎಸ್‌ಪಿಯ ಭರವಸೆಗಳಲ್ಲಿ ಒಂದಾಗಿದೆ.

ವಿದ್ಯುತ್ ಬಳಸುತ್ತಿರುವ ಪ್ರತಿ ಮನೆಗೂ ಎಸ್‌ಪಿ ಕಾರ್ಯಕರ್ತರು ಭೇಟಿ ನೀಡಿ ನೋಂದಣಿ ಮಾಡಿಸಿಕೊಳ್ಳಲಿದ್ದಾ-ರೆ ಎಂದು ಅಖಿಲೇಶ್ ಹೇಳಿದ್ದಾರೆ.

'ಪಾತಕಿ'ಯೊಬ್ಬರಿಗೆ ಪಕ್ಷದ ಟಿಕೆಟ್ ನೀಡುವ ಮೂಲಕ, ಸುಪ್ರೀಂ ಕೋರ್ಟ್ ಮಾರ್ಗಸೂಚಿಯನ್ನು ಎಸ್‌ಪಿ ಉಲ್ಲಂಘಿಸಿದೆ. ಹಾಗಾಗಿ, ಆ ಪಕ್ಷದ ಮಾನ್ಯತೆ ರದ್ದುಪಡಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ಈ ಅರ್ಜಿ ಪ್ರತಿಕ್ರಿಯೆ ನೀಡಿದ ಅವರು, ಬಿಜೆಪಿಯಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಅಪರಾಧಿಗಳಿದ್ದಾರೆ. ಹಾಗಾಗಿ, ಮೊದಲಿಗೆ ಆ ಪಕ್ಷದ ಮಾನ್ಯತೆ ರದ್ದುಪಡಿಸಬೇಕು ಎಂದು ಹೇಳಿದ್ದಾರೆ.



ಅಖಿಲೇಶ್ ಯಾದವ್ ಅವರು ಲಖನೌದಲ್ಲಿ ಸುದ್ದಿಗೋಷ್ಠಿ ನಡೆಸಿದರು. ಪಕ್ಷದ ಮುಖಂಡ ಅಬ್ದುಲ್ ಅಜಂ ಖಾನ್ ಇದ್ದಾರೆ–ಪಿಟಿಐ ಚಿತ್ರ

'ಮುಖ್ಯಮಂತ್ರಿಯ ವಿರುದ್ಧ ಅಪರಾಧ ಪ್ರಕರಣ ಇದೆ. ಉಪ ಮುಖ್ಯಮಂತ್ರಿ ವಿರುದ್ಧವೂ ಅಪರಾಧ ಪ್ರಕರಣ ಇದೆ. ಹಾಗಾಗಿ, ಬಿಜೆಪಿಯ ಮಾನ್ಯತೆ ರದ್ದುಪಡಿಸಬೇಕು' ಎಂದು ಅವರು ಹೇಳಿದ್ದಾರೆ.

ರಾಂಪುರದ ಅಧಿಕಾರಿಯೊಬ್ಬ-ರಿಗೆ 'ಸರದಿ ತಪ್ಪಿಸಿ' ಬಡ್ತಿ ಬೇಕಿತ್ತು. ಹಾಗಾಗಿ, ಆ ಅಧಿಕಾರಿಯು ಎಸ್‌ಪಿ ಮುಖಂಡ ಆಜಂ ಖಾನ್ ಮತ್ತು ಅವರ ಮಗ ಅಬ್ದುಲ್ಲಾ ಆಜಂ ವಿರುದ್ಧ ಹತ್ತಾರು ಪ್ರಕರಣ ದಾಖಲಿಸಿದ್ದಾರೆ ಎಂದು ಹೇಳಿದರು.

ಭೌತಿಕ ರ್‍ಯಾಲಿ ನಿಷೇಧದ ಹಿಂದೆ ಬಿಜೆಪಿ ಇದೆ. ಆ ಪಕ್ಷದ ಚುನಾವಣಾ ಸಿದ್ಧತೆಗಳೆಲ್ಲ ಮುಗಿದಿವೆ. ಹಾಗಾಗಿ ರ್‍ಯಾಲಿಗೆ ನಿಷೇಧ ಇರುವಂತೆ ಬಿಜೆಪಿ ನೋಡಿಕೊಂಡಿದೆ. ಆದರೆ, ಎಸ್‌ಪಿ ಮತ್ತು ಅದರ ಮಿತ್ರ ಪಕ್ಷಗಳು ಡಿಜಿಟಲ್ ವೇದಿಕೆಗಳ ಮೂಲಕ ಜನರನ್ನು ತಲುಪುತ್ತಿವೆ ಎಂದು ಅಖಿಲೇಶ್ ಹೇಳಿದ್ದಾರೆ.

ರಕ್ಷಣಾ ಸಚಿವಾಲಯ ಸ್ಪಷ್ಟನೆ: ಕೇರಳ, ಪ.ಬಂಗಾಳ ಹಾಗೂ ತಮಿಳುನಾಡಿಗೆ ಸಿಗದ ಅವಕಾಶ

'ಸ್ತಬ್ಧಚಿತ್ರ ಕೈಬಿಟ್ಟ ನಿರ್ಧಾರ ಮರುಪರಿಶೀಲನೆ ಇಲ್ಲ'

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕೇರಳ, ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ರಾಜ್ಯಗಳ ಸ್ತಬ್ಧಚಿತ್ರಗಳನ್ನು ಸೇರಿಸದಿರಲು ಕೈಗೊಂಡಿರುವ ನಿರ್ಧಾರದ ಮರುಪರಿಶೀಲನೆ ಸಾಧ್ಯವಿಲ್ಲ ಎಂದು ರಕ್ಷಣಾ ಸಚಿವಾಲಯದ ಹಿರಿಯ ಅಧಿಕಾರಿಗಳು ಮಂಗಳವಾರ ಸ್ಪಷ್ಟಪ-ಡಿಸಿದ್ದಾರೆ.

ಗಣರಾಜ್ಯೋತ್ಸವ ದಿನ ನಡೆಯುವ ಪರೇಡ್‌ನಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನ-ಕ್ಕಾಗಿ 12 ರಾಜ್ಯಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ತಮ್ಮ ರಾಜ್ಯಗಳ ಸ್ತಬ್ಧಚಿತ್ರಗಳಿಗೆ ಅವಕಾಶ ನೀಡದಿರುವ ಕುರಿತು ಈ ಮೂರು ರಾಜ್ಯಗಳ ಮುಖ್ಯಮಂತ್ರಿ-ಗಳು ಆಕ್ಷೇಪಿಸಿರುವುದು ಹಾಗೂ ಈ ವಿಷಯ ಕುರಿತು ಸೃಷ್ಟಿಯಾಗಿರುವ ವಿವಾದದ ಹಿನ್ನೆಲೆಯಲ್ಲಿ ಸಚಿವಾಲಯದ ಅಧಿಕಾರಿಗಳಿಂದ ಈ ಸ್ಪಷ್ಟನೆ ಹೊರಬಿದ್ದಿದೆ.



ರಾಜನಾಥ್ ಸಿಂಗ್

ಈ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಮುಖ್ಯಮಂತ್ರಿಗಳಾದ ಮಮತಾ ಬ್ಯಾನರ್ಜಿ ಹಾಗೂ ಎಂ.ಕೆ. ಸ್ಟಾಲಿನ್ ಒತ್ತಾಯಿಸಿದ್ದರು.

ಈ ಮೂರು ರಾಜ್ಯಗಳ ಸ್ತಬ್ಧಚಿತ್ರ-ಗಳನ್ನು ಗಣರಾಜ್ಯೋತ್ಸವ ಪರೇಡ್‌ಗೆ ಪರಿಗಣಿಸದಿರುವುದು ಕೇಂದ್ರ ಸರ್ಕಾರ ಮಾಡಿರುವ 'ಅವಮಾನ' ಎಂದು ಕೆಲ ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ರಾಜ್ಯಗಳು ಆರೋಪಿಸಿವೆ.

'ಈ ಮೂರು ರಾಜ್ಯಗಳ ಮನವಿಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಸ್ತಬ್ಧಚಿತ್ರಗಳ ಆಯ್ಕೆಗೆ ಸಂಬಂಧಿಸಿ ಅನುಸರಿಸುವ ಸುದೀರ್ಘ ಪ್ರಕ್ರಿಯೆ ಕುರಿತ ವಿವರಣೆಯೊಂದಿಗೆ ಈ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಉತ್ತರವನ್ನೂ ನೀಡಲಾಗಿದೆ' ಎಂದು ಸಚಿವಾಲಯದ ಅಧಿಕಾರಿಯೊಬ್ಬರು ಹೇಳಿದರು.

'ಸ್ತಬ್ಧಚಿತ್ರಗಳ ಆಯ್ಕೆಗೆ ಸಂಬಂಧಿಸಿ ತಜ್ಞರನ್ನು ಒಳಗೊಂಡ ಸಮಿತಿ ಬಹಳ ಮುಂಚಿತವಾಗಿಯೇ ನಿರ್ಧಾರ ಕೈಗೊಂಡಿರುತ್ತದೆ. ಅಲ್ಲದೇ, ಸ್ತಬ್ಧಚಿ-ತ್ರಗಳನ್ನು ಸಿದ್ಧಪಡಿಸಲು ಸಹ ಸಾಕಷ್ಟು ಸಮಯ ಬೇಕು. ಹೀಗಾಗಿ, ಈ ಕುರಿತ ನಿರ್ಧಾರವನ್ನು ಪರಿಷ್ಕರಿಸಲು ಸಾಧ್ಯವಿಲ್ಲ' ಎಂದೂ ಹೇಳಿದರು.

12 ರಾಜ್ಯಗಳ ಮಾದರಿಗಳ ಜೊತೆಗೆ, ಸಚಿವಾಲಯಗಳು ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳ ಒಟ್ಟು 9 ಸ್ತಬ್ಧಚಿತ್ರಗಳನ್ನು ಸಹ ಈ ಬಾರಿ ಪರೇಡ್‌ನಲ್ಲಿ ಪ್ರದರ್ಶಿಸಲಾಗುವುದು ಎಂದರು.

'ಮಾರ್ಗಸೂಚಿಗಳ ಅನುಸಾರ ಆಯ್ಕೆ'

'ನಿಗದಿ ಮಾಡಿದ ಮಾರ್ಗಸೂಚಿಗಳ ಅನುಸಾರವೇ ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ಗೆ ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡಲಾಗಿದೆ. ತಮಿಳುನಾಡಿನ ಪ್ರಸ್ತಾವನೆ ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆಯಲಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ಮಂಗಳವಾರ ಹೇಳಿದ್ದಾರೆ.

ಈ ಕುರಿತು ಸ್ಟಾಲಿನ್ ಅವರಿಗೆ ಪತ್ರ ಬರೆದಿರುವ ಅವರು, 'ಆಯಾ ಕ್ಷೇತ್ರ-ಗಳಲ್ಲಿ ಗಣನೀಯ ಸಾಧನೆ ಮಾಡಿರುವವರನ್ನು ಒಳಗೊಂಡ ಸಮಿತಿ ಸರಣಿ ಸಭೆಗಳನ್ನು ನಡೆಸುತ್ತದೆ. ಸ್ತಬ್ಧಚಿತ್ರದ ಪರಿಕಲ್ಪನೆ, ವಿನ್ಯಾಸ ಮತ್ತಿತರ ಅಂಶಗಳ ಆಧಾರದ ಮೇಲೆ ಸಮಿತಿಯು ರಾಜ್ಯಗಳು ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಶಿಫಾರಸು ಮಾಡುತ್ತದೆ' ಎಂದೂ ಪತ್ರದಲ್ಲಿ ವಿವರಿಸಿದ್ದಾರೆ.


ಇದೇ ವಿಷಯವಾಗಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೂ ಸಚಿವ ರಾಜನಾಥ್ ಸಿಂಗ್ ಪತ್ರ ಬರೆದು, ರಾಜ್ಯದ ಸ್ತಬ್ಧಚಿತ್ರ ಆಯ್ಕೆಯಾಗದಿರುವ ಕುರಿತು ವಿವರಿಸಿದ್ದಾರೆ. 'ನೇತಾಜಿ ಸುಭಾಷ್ಚಂದ್ರ ಬೋಸ್ ಕುರಿತ ಸ್ತಬ್ಧಚಿತ್ರವನ್ನು ಕೇಂದ್ರೀಯ ಲೋಕೋಪಯೋಗಿ ಇಲಾಖೆ ಸಲ್ಲಿಸಿತ್ತು. ಹೀಗಾಗಿ ನೇತಾಜಿ ಅವರಿಗೆ ಸಂಬಂಧಿಸಿದ್ದ ಸ್ತಬ್ಧಚಿತ್ರ ಒಳಗೊಂಡಿದ್ದ ಪಶ್ಚಿಮ ಬಂಗಾಳದ ಪ್ರಸ್ತಾವನೆಯನ್ನು ಪರೇಡ್‌ಗೆ ಪರಿಗಣಿಸಲಿಲ್ಲ' ಎಂದು ಪತ್ರದಲ್ಲಿ ಹೇಳಿದ್ದಾರೆ.

ನುಡಿ–ಕಿಡಿ




ಬಿಜೆಪಿಯ ಗೆಲುವನ್ನು ತಡೆಯುವುದಕ್ಕಾಗಿ ಮೈತ್ರಿಗೆ ನಾನು ಸಂಪರ್ಕಿಸಿದ ವ್ಯಕ್ತಿಗೆ ಮಂಗಳವಾರದ ವರೆಗೆ ಸಮಯ ಕೊಡಲಾಗಿತ್ತು. ಇನ್ನು ಮುಂದೆ ನಾವು ಅವರ (ಎಸ್‌ಪಿ) ಜತೆಗೆ ಹೋಗುವುದಿಲ್ಲ. ನಮಗೆ ನೂರು ಕ್ಷೇತ್ರ ಬಿಟ್ಟುಕೊ-ಡುತ್ತೇವೆ ಎಂದರೂ ಹೋಗುವುದಿಲ್ಲ. ಏಕೆಂದರೆ ಇದು ಆತ್ಮಗೌರವದ ಪ್ರಶ್ನೆ

ಚಂದ್ರಶೇಖರ ಆಜಾದ್, ಆಜಾದ್ ಸಮಾಜ ಪಾರ್ಟಿಯ ಮುಖ್ಯಸ್ಥ



70 ವರ್ಷಗಳಲ್ಲಿ ಕಾಂಗ್ರೆಸ್ ಮಾಡಿದ್ದೇನು ಎಂದು ಬಿಜೆಪಿ ಪ್ರಶ್ನಿಸುತ್ತಿದೆ. ಸಾಕಷ್ಟು ಸಾಧನೆಗಳು ಇವೆ. ದೇಶ ಈಗ ಇರುವ ಸ್ಥಿತಿಗೆ ತಲುಪಲು ಬೇಕಾದಷ್ಟು ಕೆಲಸ ಮಾಡಲಾಗಿದೆ. ಏಮ್ಸ್, ಐಐಟಿಯತಹ ಸಂಸ್ಥೆಗಳನ್ನು ಕಟ್ಟಲಾಗಿದೆ. ಪೋಲಿಯೊ ಲಸಿಕೆ ಅಭಿವೃದ್ಧಿ ಕೂಡ ಕಾಂಗ್ರೆಸ್ ಆಳ್ವಿಕೆಯ ಅವಧಿಯಲ್ಲಿಯೇ ಆರಂಭ ಆಯಿತು. ನಮ್ಮದು ಗಟ್ಟಿಯಾದ ಕೆಲಸವೇ ಹೊರತು ಪ್ರಚಾರದ ಹುಚ್ಚು ಅಲ್ಲ

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ನನ್ನ ಮಗ (ಮಯಾಂಕ್ ಜೋಶಿ) ಪಕ್ಷದ ಟಿಕೆಟ್ ಕೇಳಿದ್ದರೆ ಅದು ಅವನ ಹಕ್ಕು. ಆದರೆ, ನಾನು ಮಗನ ಪರವಾಗಿ ಲಾಬಿ ಮಾಡುತ್ತಿಲ್ಲ. ಪಕ್ಷದ ಬಳಿ ನನ್ನ ಮಗನ ವಿವರಗಳು ಇವೆ. ಪಕ್ಷವು ನಿರ್ಧಾರ ಕೈಗೊಳ್ಳಲಿದೆ. ನಾನು ಇನ್ನು ಮುಂದೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ

ರೀಟಾ ಬಹುಗುಣ ಜೋಶಿ, ಬಿಜೆಪಿ ಸಂಸದೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಎನ್‌ಡಿಎ: 19 ಮಹಿಳೆಯರಿಗೆ ಮಾತ್ರ ಪ್ರವೇಶ ವಿಚಾರ

ವಿವರಣೆ ನೀಡುವಂತೆ ಕೇಂದ್ರಕ್ಕೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷ ರಾಷ್ಟ್ರೀಯ ರಕ್ಷಣಾ ಅಕಾಡೆಮಿಗೆ (ಎನ್‌ಡಿಎ) 19 ಮಹಿಳಾ ಅಭ್ಯರ್ಥಿ-ಗಳಿಗೆ ಮಾತ್ರ ಪ್ರವೇಶ ನೀಡುವುದಾಗಿ ನಿರ್ಬಂಧ ವಿಧಿಸಿರುವುದಕ್ಕೆ ಮೂರು ವಾರಗಳ ಒಳಗಾಗಿ ವಿವರಣೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಮಂಗಳವಾರ ಸೂಚಿಸಿತು.

ನ್ಯಾಯಮೂರ್ತಿಗಳಾದ ಸಂಜಯಕಿಶನ್ ಕೌಲ್ ಹಾಗೂ ಎಂ.ಎಂ. ಸುಂದ್ರೇಶ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್ (ಆರ್‌ಐಎಂಸಿ) ಹಾಗೂ ರಾಷ್ಟ್ರೀಯ ಮಿಲಿಟರಿ ಸ್ಕೂಲ್ (ಆರ್‌ಎಂಎಸ್) ಪ್ರವೇಶಕ್ಕೆ ಕಳೆದ ವರ್ಷ ನಡೆದ ಪ್ರವೇಶ ಪರೀಕ್ಷೆಗೆ ಮಹಿಳೆಯರು ಸೇರಿದಂತೆ ಹಾಜರಾಗಿದ್ದ ಅಭ್ಯರ್ಥಿಗಳ ಸಂಖ್ಯೆಯನ್ನು ತಿಳಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ನ್ಯಾಯಪೀಠ ಸೂಚಿಸಿತು.

'2022ನೇ ಸಾಲಿಗೆ 19 ಮಹಿಳೆಯರಿಗೆ ಮಾತ್ರ ಎನ್‌ಡಿಎಗೆ ಪ್ರವೇಶ ನೀಡುವುದಾಗಿ ಯುಪಿಎಸ್‌ಸಿ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. 19 ಮಹಿಳೆಯರಿಗೆ ಮಾತ್ರ ಪ್ರವೇಶ ಎಂಬುದಾಗಿ ನಿಗದಿ ಮಾಡಿದ್ದು ಏಕೆ ಎಂಬ ಬಗ್ಗೆ ವಿವರಣೆ ನೀಡಬೇಕು' ಎಂದು ನ್ಯಾಯಪೀಠ ಸೂಚಿಸಿತು.



ಸುಪ್ರೀಂಕೋರ್ಟ್

'ಮೂಲಸೌಕರ್ಯಗಳ ಕೊರತೆ ಕಾರಣ ನೀಡಿ, 2021ರಲ್ಲಿ 19 ಮಹಿಳೆಯರಿಗೆ ಪ್ರವೇಶ ನೀಡಲಾಗಿತ್ತು. ಈಗ, ಈ ವರ್ಷವೂ ಅಷ್ಟೇ ಸಂಖ್ಯೆಯಷ್ಟು ಮಹಿಳೆಯರಿಗೆ ಪ್ರವೇಶ ನೀಡಲು ನಿರ್ಧರಿಸಿದ್ದು ಏಕೆ' ಎಂದು ಪ್ರಶ್ನಿಸಿದ ನ್ಯಾಯಪೀಠ, 'ಕಳೆದ ವರ್ಷ ಅಭ್ಯರ್ಥಿಗಳ ಸಂಖ್ಯೆಯನ್ನು 19ಕ್ಕೆ ನಿಗದಿ ಮಾಡಿದ್ದು ತಾತ್ಕಾಲಿಕ ಕ್ರಮವಾಗಿತ್ತು. ಆ ಕ್ರಮ ಎಲ್ಲ ಕಾಲಕ್ಕೂ ಅನ್ವಯವಾಗದು' ಎಂದು ಹೇಳಿತು.

ಅರ್ಜಿ ವಿಚಾರಣೆಯನ್ನು ಮಾರ್ಚ್ 6ಕ್ಕೆ ಮುಂದೂಡಲಾಯಿತು.

ಕೋವಿಡ್ ಹಿನ್ನೆಲೆ ಸೀಮಿತ ಜನರಿಗೆ ಅವಕಾಶ

ಪಥಸಂಚಲನಕ್ಕೆ ಹೊಸ ಮೆರುಗು, ರಾಜಪಥಕ್ಕೆ ಸಿಂಗಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ವಾತಂತ್ರ್ಯದ 75ನೇ ಅಮೃತ ಮಹೋತ್ಸವದ ಸಂಭ್ರಮಾಚ-ರಣೆಗೆ ಈ ಬಾರಿ ಗಣರಾಜ್ಯೋತ್ಸವವನ್ನು ವಿಶೇಷ ರೀತಿಯಲ್ಲಿ ಆಚರಿಸಲಾಗುತ್ತಿದೆ.

ರಾಜಪಥದ ಇಬ್ಬದಿಗಳಲ್ಲೂ 750 ಮೀ. ಉದ್ದದ ಕೈಯಿಂದ ಬಿಡಿಸಿದ ಸುರುಳಿಗಳು, ಕೇಂದ್ರ ರಾಜ ಮಾರ್ಗದಲ್ಲಿ ವೈಮಾನಿಕ ಪ್ರದರ್ಶನ-ಕ್ಕೆ ಸಜ್ಜಾಗಿರುವ 75 ವಿಮಾನಗಳು, ವಿಜಯ ಚೌಕದ ಸುತ್ತ ಹಾರಲಿರುವ 1000 ಡ್ರೋನ್‌ಗಳು. ಇದರೊಂದಿಗೆ ಜರುಗುವ ಪಥಸಂಚಲನ ಭಾರತದ ಸ್ವಾತಂತ್ರ್ಯದ 75ನೇ ವರ್ಷಾಚರಣೆಗೆ ಹೊಸ ಮೆರಗನ್ನು ನೀಡಲಿದೆ.

ಆದರೆ ಗಣರಾಜ್ಯ ಸಮಾರಂಭವನ್ನು ಕೋವಿಡ್ ಕರಿನೆರಳು ಆವರಿಸಿದೆ. ಭವ್ಯ ಸಮಾರಂಭವು ಕೋವಿಡ್ ಹರಡಲು ಒಂದು ವೇದಿಕೆಯಾಗಬಾರದು ಎಂಬ ಮುನ್ನೆಚ್ಚರಿಕೆಯಿಂದ ಇದರಲ್ಲಿ ಭಾಗವಹಿಸುವ ಜನಸಂಖ್ಯೆಯಲ್ಲಿ ಕಡಿ-ತಗೊಳಿಸಲಾಗಿದೆ. ಪಥಸಂಚಲನದ ಕಾರ್ಯಕ್ರಮದಲ್ಲಿ ಭೌತಿಕ ಜಾಜರಾತಿಗೆ 5–8 ಸಾವಿರ ಜನರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಸಾರ್ವಜನಿಕರು ಪಥಸಂಚಲನ-ವನ್ನು ತಮ್ಮ ವಾಹಿನಿಗಳಲ್ಲಿ ಇಲ್ಲವೇ ಆನ್‌ಲೈನ್‌ನಲ್ಲಿ ವೀಕ್ಷಿಸುವಂತೆಯೂ ಸಚಿವಾಲಯ ಸೂಚಿಸಿದೆ.

ದೆಹಲಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಯಿಂದ ಅಭಿವೃದ್ಧಿ ಹೊಂದಿದ ಬಾಟ್‌ಲ್ಯಾಬ್ ಸಂಸ್ಥೆಯು ಜನವರಿ 29ರಂದು ಜರುಗುವ 1000 ಡ್ರೋನ್‌ಗಳ ಹಾರಾಟ ನಿರ್ವಹಿಸುವ ಹೊಣೆ ಹೊತ್ತುಕೊಂಡಿದೆ.

75 ವಿಮಾನಗಳ ಹಾರಾಟ ಸ್ಪಷ್ಟವಾಗಿ ಗೋಚರಿಸುವ ಸಲುವಾಗಿ ಈ ಮೊದಲು ಪ್ರಾರಂಭವಾಗುತ್ತಿದ್ದ ಬೆಳಿಗ್ಗೆ 10 ಗಂಟೆ ಬದಲಿಗೆ 10.30ಕ್ಕೆ ಪಥಸಂಚಲನ ಆರಂಭವಾಗಲಿದೆ. ಭಾರತೀಯ ವಾಯುದಳ ಇತ್ತೀಚೆಗೆ ತನ್ನ ಬತ್ತಳಿಕೆಗೆ ಸೇರಿಸಿಕೊಂಡ ರಫೇಲ್ ಯುದ್ಧ ವಿಮಾನಗಳು ವೈಮಾನಿಕ ಪ್ರದರ್ಶನದ ಭಾಗವಾಗಲಿವೆ. ಇದೇ ಮೊದಲ ಬಾರಿಗೆ ಸೆಂಟ್ರಲ್ ವಿಸ್ತಾ ಯೋಜನೆಯು ಸಾರ್ವಜನಿಕರ ಮುಂದೆ ಬಿತ್ತರಗೊಳ್ಳಲಿದೆ.



ಸೇನೆ ವಿಶೇಷ ಪಡೆ ಕಮಾಂಡೋಗಳು ಗಣರಾಜ್ಯೋತ್ಸವ ಪಥಸಂಚಲನಕ್ಕಾಗಿ ದೆಹಲಿಯಲ್ಲಿ ಮಂಗಳವಾರ ತಾಲೀಮು ನಡೆಸಿದವು–ಪಿಟಿಐ ಚಿತ್ರ

ವೈಮಾನಿಕ ಸಾಧನಗಳ ಹಾರಾಟ ನಿಷೇಧ

ಗಣರಾಜ್ಯೋತ್ಸವ ಕಾರಣದಿಂದಾಗಿ ರಾಷ್ಟ್ರ ರಾಜಧಾನಿಯಲ್ಲಿ ಜ.20ರಿಂದ 'ಮಾನವ ರಹಿತ ವೈಮಾನಿಕ ವಾಹನಗಳು' (ಯುಎವಿ), ಪ್ಯಾರಾಗ್ಲೈಡ-ರ್ಸ್ ಹಾಗೂ ಹಾಟ್ ಏರ್ ಬಲೂನ್‌ಗಳಂತಹ ವೈಮಾನಿಕ ಸಾಧನಗಳ ಹಾರಾಟ ನಡೆಸುವುದನ್ನು ನಿರ್ಬಂಧಿಸಲಾಗಿದೆ ಎಂದು ದೆಹಲಿ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಕೆಲ ದುಷ್ಕರ್ಮಿಗಳು, ಸಮಾಜಘಾತುಕ ಶಕ್ತಿಗಳು ಅಥವಾ ಉಗ್ರರಿಂದ ದಾಳಿಯ ಸಾಧ್ಯತೆ ಇದ್ದು, ಇದರಿಂದ ಸಾರ್ವಜನಿಕರು, ಗಣ್ಯರು ಹಾಗೂ ಆಸ್ತಿಗಳ ಸುರಕ್ಷತೆಗೆ ಅಪಾಯವಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಆಯುಕ್ತರ ಆದೇಶದಲ್ಲಿ ವಿವರಿಸಲಾಗಿದೆ.

ಷೇರುಪೇಟೆ ವಹಿವಾಟು

554

ಹಿಂದಿನ ಅಂತ್ಯ 61,308 — ಇಂದಿನ ಅಂತ್ಯ 60,754

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,308
ಇಂದಿನ ಅಂತ್ಯ	18,113
▼	195
ದಿನದ ಗರಿಷ್ಠ	18,350

ವಿನಿಮಯ ದರ

$ ಡಾಲರ್	74.58
£ ಪೌಂಡ್	101.63
€ ಯುರೊ	84.99
¥ ಯೆನ್ (100ಕ್ಕೆ)	65.07

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1205 (1205)
ಸೂರ್ಯಕಾಂತಿ (ರಿಫೈನ್ಡ್)	₹1230 (1230)
ಪಾಮೋಲಿನ್	₹1162 (1162)

ಕೊಬ್ಬರಿ ಧಾರಣೆ

ಪುತ್ತೂರು(ಇತರ)	₹4500-11500
ತುಮಕೂರು(ಇತರ)	₹7800-9200

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹18000-20000

2ನೇ ದರ್ಜೆ ₹10000-16000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹2600-2800
ಮಧ್ಯಮ	₹2000-2600
ಸಣ್ಣ	₹1000-2000

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 450- 500
ನಡುಗೋಲು 550-600
ರಾಶಿ 650-700
ರಾಶಿ ಉತ್ತಮ 800-850
ಜರಡಿ 900 -950
ಹೆರಕಿದ್ದು 1100-1200
ಹಸಿರು ಸಾಧಾರಣ 750-800
ಹಸಿರು ಉತ್ತಮ 900-1000
ಹಸಿರು ಅತಿ ಉತ್ತಮ 1300-1450
ಕಾಳು ಮೆಣಸು - 490
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಭದ್ರಾವತಿ
ರಾಶಿ 43399-46099
ಚನ್ನಗಿರಿ
ರಾಶಿ 45099-46500
ಕುಂದಾಪುರ
ಹಳೆಚಾಲಿ 51500-52500
ಹೊಸಚಾಲಿ 43500-44500
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ರಾಶಿ 45199-45939
ಸಿಪ್ಪೆಗೋಟು 16389-22232
ಶಿವಮೊಗ್ಗ
ಬೆಟ್ಟೆ 48189-53219
ಗೊರಬಲು 17250-34109
ರಾಶಿ 44009-46419
ಸರಕು 52610-73600
ಸಿದ್ದಾಪುರ
ಬಿಳಿಗೋಟು 25699-37799
ಚಾಲಿ 42099-48099
ಕೋಕ 22199-29412
ಹೊಸಚಾಲಿ 32899-46099
ಕೆಂಪುಗೋಟು 29869-34269
ರಾಶಿ 43009-46969
ತಟ್ಟಿಬೆಟ್ಟೆ 35009-46089
ಶಿರಸಿ
ಬೆಟ್ಟೆ 23018-46261
ಬಿಳಿಗೋಟು 20299-43313
ಚಾಲಿ 31899-49312
ರಾಶಿ 26899-47681
ಯಲ್ಲಾಪುರ
ಆಪಿ 51689-52369
ಬಿಳಿಗೋಟು 27699-34699
ಕೋಕ 21899-31661
ಹಳೆಚಾಲಿ 43599-48801
ಹೊಸಚಾಲಿ 35899-42211
ಕೆಂಪುಗೋಟು 28919-36210
ರಾಶಿ 42119-50329
ತಟ್ಟಿಬೆಟ್ಟೆ 36899-41969
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: ₹412-638
ದ್ವಿತಳಿ; ₹231-833

ಕಾಫಿ ಧಾರಣೆ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15,600	15,750	239.65
ಎಸಿ	7335	7,000	7,100	
ಆರ್‌ಪಿ	6800	6,900	7,150	ಲಂಡನ್ (ಡಾಲರ್)
ಆರ್‌ಸಿ	3820	3,850	3,900	2218

ಕೋವಿಡ್ ರೋಗಿಗಳಲ್ಲಿ 3 ವಾರಗಳಿಗಿಂತ ಹೆಚ್ಚು ಕಾಲ ಕೆಮ್ಮು

ಟಿ.ಬಿ ಪರೀಕ್ಷೆಗೆ ಕೇಂದ್ರ ಸಲಹೆ

ನವದೆಹಲಿ(ಪಿಟಿಐ): ಕೋವಿಡ್‌-19 ರೋಗಿಗಳಲ್ಲಿ ಸತತವಾಗಿ 2-3 ವಾರಗಳಿಗಿಂತ ಹೆಚ್ಚು ಕಾಲ ಕೆಮ್ಮು ಕಂಡುಬಂದರೆ ಅವರನ್ನು ಕ್ಷಯರೋಗ(ಟಿ.ಬಿ) ಪರೀಕ್ಷೆಗೆ ಒಳಪಡಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಮಂಗಳವಾರ ಸಲಹೆ ನೀಡಿದೆ.

ಸಚಿವಾಲಯವು 'ವಯಸ್ಕ ಕೋವಿಡ್‌-19 ರೋಗಿಗಳ ನಿರ್ವಹಣೆಗಾಗಿ ವೈದ್ಯಕೀಯ ಮಾರ್ಗಸೂಚಿ'ಯನ್ನು ಪರಿಷ್ಕರಿಸಿದ್ದು, ಹಲವು ವಿಷಯಗಳ ಕುರಿತು ಎಚ್ಚರಿಕೆ-ಸಲಹೆಗಳನ್ನು ನೀಡಿದೆ.

ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್), ಐಸಿಎಂಆರ್‌-ಕೋವಿಡ್‌-19 ರಾಷ್ಟ್ರೀಯ ಕಾರ್ಯಪಡೆ ಹಾಗೂ ಜಂಟಿ ಮೇಲ್ವಿಚಾರಣಾ ತಂಡ (ಡಿಜಿಎಚ್‌ಎಸ್) ನೀಡಿರುವ ಸಲಹೆಯಂತೆ ಮಾರ್ಗಸೂಚಿಗಳನ್ನು ಸಚಿವಾಲಯ ಪರಿಷ್ಕರಿಸಿದೆ.

'ಸಾಧಾರಣದಿಂದ ತೀವ್ರ' ಸ್ವರೂಪದ ಕೋವಿಡ್ ಇರುವವರು ಹಾಗೂ ಕೋವಿಡ್‌-19 ಲಕ್ಷಣಗಳು ಕಂಡುಬಂದ 10 ದಿನಗಳ ಒಳಗೆ ಮೂತ್ರಪಿಂಡಗಳ ಸಮಸ್ಯೆ ಕಾಣಿಸದವರಿಗೆ 'ತುರ್ತು ಬಳಕೆಯಾಗಿ' ರೆಮ್‌ಡಿಸಿವಿರ್ ನೀಡಬಹುದು' ಎಂದು ಪರಿಷ್ಕೃತ ಮಾರ್ಗಸೂಚಿಯಲ್ಲಿ ಶಿಫಾರಸು ಮಾಡಲಾಗಿದೆ.

ಸ್ಟಿರಾಯ್ಡ್‌ಗಳನ್ನು ನೀಡುವುದರಿಂದ ಕೋವಿಡ್ ರೋಗಿಗಳಿಗೆ ಆಮ್ಲಜನಕ ನೀಡಬೇಕಾದ ಸಂದರ್ಭ ಉದ್ಭವಿಸುವುದಿಲ್ಲ ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ ಎಂಬ ಅಂಶದ ಬಗ್ಗೆ ಮಾರ್ಗಸೂಚಿಯಲ್ಲಿ ಗಮನ ಸೆಳೆಯಲಾಗಿದೆ.

ಅಗತ್ಯಕ್ಕಿಂತ ಮೊದಲೇ ಸ್ಟಿರಾಯ್ಡ್‌ಗಳ ಅಧಿಕ ಡೋಸ್‌ಗಳನ್ನು ನೀಡಿದರೆ ಅಥವಾ ಅಗತ್ಯಕ್ಕಿಂತಲೂ ಹೆಚ್ಚು ಕಾಲ ನೀಡಿದರೆ ಕಪ್ಪುಶಿಲೀಂಧ್ರದಂತಹ ತೀವ್ರಸ್ವರೂಪದ ಸೋಂಕು ತಗುಲುವ ಅಪಾಯ ಹೆಚ್ಚು ಎಂದೂ ಸಚಿವಾಲಯ ಎಚ್ಚರಿಸಿದೆ.

5 ಬಾರಿ ಕೋವಿಡ್ ಲಸಿಕೆ ಪಡೆದ ವೈದ್ಯೆ?

ಪಟ್ನಾ: ವೈದ್ಯೆಯೊಬ್ಬರು ಐದು ಬಾರಿ ಕೋವಿಡ್ ಲಸಿಕೆ ಪಡೆದಿರುವುದಾಗಿ ದಾಖಲೆಗಳಲ್ಲಿ ಉಲ್ಲೇಖವಾಗಿದ್ದು, ಈ ಕುರಿತು ಬಿಹಾರ ಸರ್ಕಾರ ತನಿಖೆಗೆ ಆದೇಶಿಸಿದೆ.

ಪಟ್ನಾ ಮೂಲದ ಸಿವಿಲ್ ಸರ್ಜನ್ ಡಾ. ವಿಭಾ ಕುಮಾರಿ ಸಿಂಗ್ ಐದು ಬಾರಿ ಲಸಿಕೆ ಪಡೆದಿರುವುದಾಗಿ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ಇದನ್ನು ನಿರಾಕರಿಸಿರುವ ಅವರು, ನಿಯಮಗಳಿಗೆ ಅನುಸಾರವಾಗಿ ಮೂರು ಡೋಸ್ ಲಸಿಕೆ ಪಡೆದಿರುವುದಾಗಿ ಹೇಳಿದ್ದಾರೆ.

ತಮ್ಮ ಪ್ಯಾನ್ ಕಾರ್ಡ್ ವಿವರಗಳನ್ನು ಪಡೆದುಕೊಂಡು ಬೇರೆ ಯಾರೋ ಲಸಿಕೆ ಪಡೆದಿದ್ದಾರೆ ಎಂದು ಆರೋಪಿಸಿರುವ ಅವರು, ತನಿಖೆಗೆ ಮನವಿ ಮಾಡಿದ್ದಾರೆ.

ಈ ಕುರಿತು ತನಿಖೆ ಆರಂಭಿಸಲಾಗಿದೆ ಎಂದು ಪಟ್ನಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಚಂದ್ರಶೇಖರ್ ಸಿಂಗ್ ತಿಳಿಸಿದ್ದಾರೆ.



ಅಬ್ಬಾ ಚಳಿ..! ಆಗ್ರಾದಲ್ಲಿ ಮಂಗಳವಾರ ಚಳಿಯಲ್ಲೇ ತಾಜ್‌ಮಹಲ್ ನೋಡಲು ಬಂದ ಜನ –ಪಿಟಿಐ ಚಿತ್ರ

ಮುಂಬೈ ಧಾರಣೆ

ಶೇಂಗಾ

18-01-2022

ಜಾವಾ 70/80(ಹೊಸ)	10250-10600
ಜಾವಾ 80/90(ಹೊಸ)	10450-1500
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	9000-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1495)
ಸೋಯಾ ಕಚ್ಚಾ	1140(1140)
ಪಾಮ್ ವಾರದ ಡೆಲಿವರಿ	1160 (1160)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1175)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,950 (47,950)
ಬೆಳ್ಳಿ ಕೆ.ಜಿ
61,650 (61,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟಾಟಾ ವಾಹನಗಳ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಬುಧವಾರದಿಂದ ಜಾರಿಗೆ ಬರುವಂತೆ ತನ್ನ ಪ್ರಯಾಣಿಕ ವಾಹನಗಳ ಬೆಲೆಯನ್ನು ಸರಾಸರಿ ಶೇಕಡ 0.9ರಷ್ಟು ಹೆಚ್ಚಿಸಲಾಗುವುದು ಎಂದು ಟಾಟಾ ಮೋಟರ್ಸ್ ಮಂಗಳವಾರ ತಿಳಿಸಿದೆ. ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿರುವ ಕಾರಣ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಂಪನಿ ಹೇಳಿದೆ.

ಮಾದರಿಯಿಂದ ಮಾದರಿಗೆ ಬೆಲೆ ಹೆಚ್ಚಳದಲ್ಲಿ ವ್ಯತ್ಯಾಸ ಇರಲಿದೆ. ಕೆಲವು ಮಾದರಿಗಳ ಮೇಲಿನ ಬೆಲೆಯನ್ನು ಕಂಪನಿಯು ₹ 10 ಸಾವಿರದವರೆಗೆ ಇಳಿಕೆ ಕೂಡ ಮಾಡಲಿದೆ.

ಜನವರಿ 18ಕ್ಕಿಂತಲೂ ಮೊದಲು ಕಾರು ಬುಕ್ ಮಾಡಿದ್ದರೆ, ಬೆಲೆ ಹೆಚ್ಚಳವು ಅದಕ್ಕೆ ಅನ್ವಯ ಆಗುವುದಿಲ್ಲ. ಮಾರುತಿ ಸುಜುಕಿ ಕಂಪನಿಯು ತನ್ನ ಕಾರುಗಳ ಬೆಲೆಯನ್ನು ಹಿಂದಿನ ವಾರ ಗರಿಷ್ಠ ಶೇ 4.3ರವರೆಗೆ ಹೆಚ್ಚಿಸಿದೆ.

'ಆ್ಯಂಟ್ರಿಕ್ಸ್–ದೇವಾಸ್ ಒಪ್ಪಂದ: ಕಾಂಗ್ರೆಸ್‌ನಿಂದ ಅಕ್ರಮ'

ನವದೆಹಲಿ (ಪಿಟಿಐ): ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ದೇವಾಸ್ ಮಲ್ಟಿಮೀಡಿಯಾ ಕಂಪನಿ ಜೊತೆ ಅಕ್ರಮ ಒಪ್ಪಂದ ಮಾಡಿಕೊಂಡಿತ್ತು, ರಕ್ಷಣಾ ಉದ್ದೇಶಕ್ಕೆ ಮಾತ್ರ ಮೀಸಲಾಗಿರುವ ಎಸ್‌-ಬ್ಯಾಂಡ್ ತರಂಗಾಂತರವನ್ನು ಬಹಳ ಕಡಿಮೆ ಬೆಲೆಗೆ ಆ ಕಂಪನಿಗೆ ಹಂಚಿಕೆ ಮಾಡಲಾಗಿತ್ತು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರೋಪಿಸಿದರು.

ದೇವಾಸ್ ಮಲ್ಟಿಮೀಡಿಯಾ ಕಂಪನಿಯು ಜನ್ಮತಾಳಿದ್ದೇ ವಂಚನೆಯ ಉದ್ದೇಶದಿಂದ. ಹಾಗಾಗಿ, ಈ ಕಂಪನಿಯನ್ನು ಪರಿಸಮಾಪ್ತಿಗೊಳಿಸುವುದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ ಎಂದು ಕೂಡ ನಿರ್ಮಲಾ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ನಿರ್ಮಲಾ ಸೀತಾರಾಮನ್

2005ರಲ್ಲಿ ದೇವಾಸ್ ಜೊತೆ ಮಾಡಿಕೊಂಡ ಒಪ್ಪಂದವು 'ದೇಶದ ಜನರನ್ನು ವಂಚಿಸಿದ್ದಕ್ಕೆ ಸಮವಾಗಿತ್ತು' ಎಂದು ನಿರ್ಮಲಾ ದೂರಿದರು. ದೇವಾಸ್ ಕಂಪನಿಯು ಆ್ಯಂಟ್ರಿಕ್ಸ್ ಜೊತೆ ಒಪ್ಪಂದ ಮಾಡಿಕೊಂಡಿತು. ಆ್ಯಂಟ್ರಿಕ್ಸ್ ಕಂಪನಿಯು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ವಾಣಿಜ್ಯ ವಿಭಾಗ. ಮೊಬೈಲ್ ಬಳಕೆದಾರರಿಗೆ ಎಸ್‌-ಬ್ಯಾಂಡ್ ಉಪಗ್ರಹ ತರಂಗಾಂತರ ಬಳಸಿ ಬಹುಮಾಧ್ಯಮ ಸೇವೆಗಳನ್ನು ಒದಗಿಸುವುದು ಒಪ್ಪಂದದ ಭಾಗವಾಗಿತ್ತು.

ಈ ಒಪ್ಪಂದವನ್ನು 2011ರಲ್ಲಿ ರದ್ದುಪಡಿಸಲಾಯಿತು. ತರಂಗಾಂತರ ಹರಾಜು ಪ್ರಕ್ರಿಯೆಯಲ್ಲಿ ವಂಚನೆ ನಡೆದಿದೆ ಮತ್ತು ಎಸ್‌-ಬ್ಯಾಂಡ್ ಉಪಗ್ರಹ ತರಂಗಾಂತರವು ಸರ್ಕಾರಕ್ಕೆ ರಕ್ಷಣಾ ಉದ್ದೇಶಗಳಿಗೆ ಮತ್ತು ಇತರ ಸಾಮಾಜಿಕ ಉದ್ದೇಶಗಳಿಗೆ ಬೇಕಿದೆ ಎಂಬುದೂ ಒಪ್ಪಂದ ರದ್ದುಪಡಿಸುವುದಕ್ಕೆ ಒಂದು ಕಾರಣವಾಗಿತ್ತು.

ಒಪ್ಪಂದ ರದ್ದುಮಾಡಿದ್ದನ್ನು ದೇವಾಸ್ ಮಲ್ಟಿಮೀಡಿಯಾ ಕಂಪನಿಯು ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿಯಲ್ಲಿ (ಐಸಿಸಿ) ಪ್ರಶ್ನಿಸಿತು. ಇದಲ್ಲದೆ, ಇನ್ನೂ ಎರಡು ಮಧ್ಯಸ್ಥಿಕೆ ಪ್ರಕರಣಗಳು ನಡೆದವು. ಕೇಂದ್ರ ಸರ್ಕಾರವು ಮೂರೂ ಪ್ರಕರಣಗಳಲ್ಲಿ ಸೋಲು ಕಂಡಿತು. ಕೇಂದ್ರವು ಈಗ ಒಟ್ಟು ಸರಿಸುಮಾರು ₹ 9,600 ಕೋಟಿಯನ್ನು ಪಾವತಿಸಬೇಕಿದೆ.

ಕೇಂದ್ರವು ಈಗ ಸಾರ್ವಜನಿಕರ ಹಣವನ್ನು ಉಳಿಸಲು ಎಲ್ಲ ನ್ಯಾಯಾಲಯಗಳಲ್ಲಿಯೂ ಹೋರಾಟ ನಡೆಸುತ್ತಿದೆ ಎಂದು ನಿರ್ಮಲಾ ಅವರು ತಿಳಿಸಿದರು.

ಅನಿಲ್ ದೇಶ್‌ಮುಖ್ ಜಾಮೀನು ಅರ್ಜಿ ತಿರಸ್ಕಾರ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಂಧಿತ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ಅವರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿಯ ವಿಶೇಷ ನ್ಯಾಯಾಲಯ ಮಂಗಳವಾರ ತಿರಸ್ಕರಿಸಿದೆ.

ಎನ್‌ಸಿಪಿಯ ಒಬ್ಬ ಮುಖಂಡರಾಗಿರುವ ದೇಶ್‌ಮುಖ್ ಅವರನ್ನು ಪ್ರಕರಣದ ಸಂಬಂಧ ಜಾರಿ ನಿರ್ದೇಶನಾಲಯ (ಇಡಿ) ಕಳೆದ ವರ್ಷ ನವೆಂಬರ್ 2 ರಂದು ಬಂಧಿಸಿತ್ತು.

ಅಕ್ರಮ ಹಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯವು ತನಗೆ ಮತ್ತೆ ನ್ಯಾಯಾಂಗ ಬಂಧನ ವಿಧಿಸಲು ಇಡಿ ಸಲ್ಲಿಸಿದ ದೋಷಾರೋಪ ಪಟ್ಟಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಹಿಮಪಾತ; 30 ನಾಗರಿಕರ ರಕ್ಷಿಸಿದ ಸೇನೆ

ಶ್ರೀನಗರ: ಉತ್ತರ ಕಾಶ್ಮೀರದ ಕುಪ್ವಾರ ಜಿಲ್ಲೆಯ ತಂಘ್ದಾರ್‌–ಚೌಕಿಬಲ್ ರಾಷ್ಟ್ರೀಯ ಹೆದ್ದಾರಿ(ಎನ್‌ಎಚ್‌-701) ಯಲ್ಲಿ ಮಂಗಳವಾರ ಎರಡು ಕಡೆ ಸಂಭವಿಸಿದ ಹಿಮಪಾತದಲ್ಲಿ ಮಗು ಸೇರಿ 30 ನಾಗರಿಕರು ಸಿಲುಕಿದ್ದು, ಎಲ್ಲರನ್ನೂ ಭಾರತೀಯ ಸೇನೆ ರಕ್ಷಿಸಿದೆ.

ತಂಘ್ದಾರ್‌–ಚೌಕಿಬಲ್ ಹೆದ್ದಾರಿಯ ಖೂನಿನಾಲಾ ಹಾಗೂ ಎಸ್‌ಎಂ ಬೆಟ್ಟದ ಬಳಿ ಸೋಮವಾರ ತಡರಾತ್ರಿ ಈ ಅವಘಡ ಸಂಭವಿಸಿದ್ದು, ಹಿಮದಿಂದ ಮುಚ್ಚಿಹೋಗಿದ್ದ ಸುಮಾರು 12 ವಾಹನಗಳನ್ನು ಕ್ಯಾಪ್ಟನ್ ಕುಲ್‌ಜೋತ್ ಸಿಂಗ್ ನೇತೃತ್ವದ ಭಾರತೀಯ ಸೇನೆಯ ಹಿಮಪಾತ ರಕ್ಷಣಾ ತಂಡ ಹಾಗೂ ರಕ್ಷಣಾ ಇಲಾಖೆಯ ಜಿಆರ್‌ಇಎಫ್ ಪಡೆಯು ರಕ್ಷಿಸಿದೆ.

'ಮಾಹಿತಿ ತಿಳಿದು ತಕ್ಷಣವೇ ಕಾರ್ಯಪ್ರವೃತ್ತರಾದ ರಕ್ಷಣಾ ತಂಡವು ಸಿಲುಕಿದ್ದ ನಾಗರಿಕರೆಲ್ಲರನ್ನೂ ಹತ್ತಿರದ ಸೇನಾ ಶಿಬಿರಕ್ಕೆ ಸ್ಥಳಾಂತರಿಸಿ ಆಹಾರ, ವೈದ್ಯಕೀಯ ಆರೈಕೆ ಮತ್ತು ಆಶ್ರಯವನ್ನು ಒದಗಿಸಿದೆ. ನಂತರ ಅವರೆಲ್ಲರನ್ನೂ ಸುರಕ್ಷಿತ ಸ್ಥಳಕ್ಕೆ ಬಿಡಲಾಯಿತು. ಅಪಾಯಕಾರಿ ಪರಿಸ್ಥಿತಿಗಳ ನಡುವೆ ಹಿಮ ತೆರವು ಕಾರ್ಯವು ಸೇನಾ ಹಾಗೂ ರಕ್ಷಣಾ ಸಿಬ್ಬಂದಿಗೆ ಐದರಿಂದ ಆರು ಗಂಟೆಗಳನ್ನು ತೆಗೆದುಕೊಂಡಿತು' ಎಂದು ರಕ್ಷಣಾ ಇಲಾಖೆಯ ಮಾಹಿತಿ ಅಧಿಕಾರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ತಂಘ್ದಾರ್‌–ಚೌಕಿಬಲ್ ಹೆದ್ದಾರಿಯಲ್ಲಿ ಮಂಗಳವಾರ ಹಿಮಪಾತದಲ್ಲಿ ಸಿಲುಕಿದ್ದ ನಾಗರಿಕರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ರಕ್ಷಣಾ ಪಡೆ ಸಿಬ್ಬಂದಿ

ಮುಂಬೈ ಷೇರುಪೇಟೆ: ಸೆನ್ಸೆಕ್ಸ್, ನಿಫ್ಟಿ ಶೇ 1ರಷ್ಟು ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಮಂಗಳವಾರ ತಲಾ ಶೇ 1ರಷ್ಟು ಇಳಿಕೆ ಕಂಡವು. ಆಟೊಮೊಬೈಲ್, ಲೋಹ ಮತ್ತು ರಿಯಲ್ ಎಸ್ಟೇಟ್ ವಲಯದ ಷೇರುಗಳ ಮೌಲ್ಯ ಇಳಿಕೆಯು ಸೂಚ್ಯಂಕಗಳ ಕುಸಿತಕ್ಕೆ ಕಾರಣವಾಯಿತು. ಇದರ ಜೊತೆಗೆ ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಕಂಡುಬಂದ ಕುಸಿತದ ಪ್ರಭಾವವೂ ಇತ್ತು.

ಸೆನ್ಸೆಕ್ಸ್ 554 ಅಂಶ ಇಳಿಕೆ ಕಂಡಿತು. ನಿಫ್ಟಿ 195 ಅಂಶ ಕುಸಿಯಿತು. 'ತೈಲ ಬೆಲೆ ಹೆಚ್ಚಾಗಿದ್ದು, ವಿದೇಶಿ ಹೂಡಿಕೆದಾರರು ಷೇರುಗಳ ಮಾರಾಟದಲ್ಲಿ ತೊಡಗಿದ್ದುದು ದೇಶಿ ಷೇರುಪೇಟೆಗಳಲ್ಲಿ ಅಸ್ಥಿರ ವಹಿವಾಟಿಗೆ ಕಾರಣವಾದವು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

'ಷೇರು ವರ್ತಕರು ಲಾಭ ಗಳಿಕೆಯ ವಹಿವಾಟಿನಲ್ಲಿ ತೊಡಗಿಕೊಂಡಿದ್ದು ಕೂಡ ಸೂಚ್ಯಂಕಗಳ ಇಳಿಕೆಗೆ ಕಾರಣವಾಯಿತು' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ರಿಟೇಲ್ ಸಂಶೋಧನಾ ವಿಭಾಗದ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 1.13ರಷ್ಟು ಹೆಚ್ಚಳ ಆಗಿದ್ದು ಪ್ರತಿ ಬ್ಯಾರೆಲ್‌ಗೆ 87.46 ಡಾಲರ್‌ಗೆ ತಲುಪಿದೆ.

18 ವರ್ಷಗಳ ವಿವಾಹ ಅಂತ್ಯ

ಧನುಷ್ - ಐಶ್ವರ್ಯಾ ಜೋಡಿ ವಿಚ್ಛೇದನಕ್ಕೆ ನಿರ್ಧಾರ

ಮುಂಬೈ (ಪಿಟಿಐ): ದಕ್ಷಿಣ ಚಿತ್ರರಂಗದ ಹೆಸರಾಂತ ನಟ ಧನುಷ್ ಹಾಗೂ ಚಿತ್ರ ನಿರ್ಮಾಪಕಿ, ಪತ್ನಿ ಐಶ್ವರ್ಯಾ ರಜನಿಕಾಂತ್ ಅವರು 18 ವರ್ಷಗಳ ವೈವಾಹಿಕ ಜೀವನದಿಂದ ವಿಚ್ಛೇದನ ಪಡೆಯಲು ಮುಂದಾಗಿದ್ದಾರೆ. ನಟ ಧನುಷ್ ಅವರು ಸೋಮವಾರ ಟ್ವಿಟರ್‌ನಲ್ಲಿ ದಾಂಪತ್ಯ ಜೀವನದಿಂದ ಪರಸ್ಪರ ಪ್ರತ್ಯೇಕಗೊಳ್ಳುತ್ತಿರುವುದಾಗಿ ಘೋಷಿಸಿದ್ದಾರೆ.

ಸೂಪರ್‌ಸ್ಟಾರ್ ರಜನಿಕಾಂತ್ ಅವರ ಪುತ್ರಿ ಐಶ್ವರ್ಯಾ ರಜನಿಕಾಂತ್ ಅವರನ್ನು ಧನುಷ್ ಅವರು 2004ರಲ್ಲಿ ವಿವಾಹವಾಗಿದ್ದರು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. 2006ರಲ್ಲಿ ಯಾತ್ರ ಮತ್ತು 2010ರಲ್ಲಿ ಲಿಂಗ ಜನಿಸಿದ್ದಾರೆ.



ಧನುಷ್

38 ವರ್ಷದ ಧನುಷ್ ಹಾಗೂ 40 ವರ್ಷದ ಐಶ್ವರ್ಯ ವಿಚ್ಛೇದನ ಪಡೆಯುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದಾರೆ.

'18 ವರ್ಷ ಸ್ನೇಹಿತರಾಗಿ, ದಂಪತಿಗಳಾಗಿ, ಪೋಷಕರಾಗಿ ಪರಸ್ಪರ ಹಿತೈಷಿಗಳಾಗಿ ಕಳೆದಿದ್ದೇವೆ. ಬೆಳೆಯುತ್ತ, ಅರ್ಥೈಸಿಕೊಳ್ಳುತ್ತ, ಹೊಂದಿಸಿಕೊಳ್ಳುತ್ತ, ಸರಿದೂಗಿಸಿಕೊಳ್ಳುತ್ತ ನಮ್ಮ ದಾಂಪತ್ಯ ಜೀವನ ಸಾಗಿತು. ಪರಸ್ಪರರ ದಾರಿಗಳು ಪ್ರತ್ಯೇಕಗೊಂಡಿರುವ ಸ್ಥಳದಲ್ಲಿ ನಾವಿಂದು ಇದ್ದೇವೆ. ಐಶ್ವರ್ಯಾ ಮತ್ತು ನಾನು ವೈವಾಹಿಕ ಜೀವನದಿಂದ ಪ್ರತ್ಯೇಕಗೊಳ್ಳಲು ನಿರ್ಧರಿಸಿದ್ದೇವೆ. ಸಮಯ ತೆಗೆದುಕೊಂಡು ಈ ನಿರ್ಧಾರಕ್ಕೆ ಬಂದಿದ್ದೇವೆ' ಎಂದು ಪೋಸ್ಟ್‌ನಲ್ಲಿ ವಿವರಿಸಿದ್ದಾರೆ.

'ದಯವಿಟ್ಟು ನಮ್ಮ ನಿರ್ಧಾರಗಳನ್ನು ಗೌರವಿಸಿ ಮತ್ತು ಇದಕ್ಕಾಗಿ ನಮಗೆ ಅಗತ್ಯವಿರುವ ಏಕಾಂತತೆಯನ್ನು ಕೊಡಿ. ಓಂ ನಮ ಶಿವಾಯ! ಪ್ರೀತಿಯನ್ನು ಹಂಚಿ, ಡಿ' ಎಂದು ಧನುಷ್ ಟ್ವಿಟರ್‌ನಲ್ಲಿ ಮನವಿ ಮಾಡಿದ್ದಾರೆ.

ಐಶ್ವರ್ಯಾ ಅವರು ಇದೇ ಒಕ್ಕಣೆಯನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. 'ತಲೆಬರಹದ ಅಗತ್ಯವಿಲ್ಲ... ನಿಮ್ಮಿಂದ ಕೇವಲ ಅರ್ಥೈಸಿಕೊಳ್ಳುವ ಮನಸ್ಸು ಮತ್ತು ಪ್ರೀತಿ ಬೇಕಾಗಿದೆ' ಎಂದು ಐಶ್ವರ್ಯಾ ಪೋಸ್ಟ್ ಮಾಡಿದ್ದಾರೆ.

ಐಶ್ವರ್ಯಾ ಅವರು ತಮಿಳಿನ '3' ಎಂಬ ರೋಮ್ಯಾಂಟಿಕ್ ಥ್ರಿಲ್ಲರ್ ಮತ್ತು 'ವಾಯ್ ರಾಜಾ ವಾಯ್' ಎಂಬ ಬ್ಲಾಕ್ ಕಾಮಿಡಿ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕರ್ಣನ್, ಅಸುರನ್ ಚಿತ್ರಗಳಲ್ಲಿನ ಧನುಷ್ ಅವರ ನಟನೆಗೆ ರಾಷ್ಟ್ರದೆಲ್ಲೆಡೆ ಪ್ರಶಂಸೆ ಸಿಕ್ಕಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿ ಇಂದಿನಿಂದ: ಭಾರತ ತಂಡಕ್ಕೆ ಕನ್ನಡಿಗ ರಾಹುಲ್ ಸಾರಥ್ಯ

ವಿರಾಟ್ ಬ್ಯಾಟಿಂಗ್‌ನತ್ತ ಎಲ್ಲರ ಕಣ್ಣು

ಪಾರ್ಲ್, ದಕ್ಷಿಣ ಆಫ್ರಿಕಾ(ಪಿಟಿಐ): ಬುಧವಾರ ಇಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಪಂದ್ಯದ ಮೂಲಕ ವಿರಾಟ್ ಕೊಹ್ಲಿಯ ವೃತ್ತಿಜೀವನದ ಮಹತ್ವದ ಘಟ್ಟ ಆರಂಭವಾಗಲಿದೆ.

ವಿರಾಟ್ ಮೂರು ಮಾದರಿಯ ಕ್ರಿಕೆಟ್ ತಂಡಗಳ ನಾಯಕತ್ವದಿಂದ ಕೆಳಗಿಳಿದ ನಂತರ ಬ್ಯಾಟರ್ ಆಗಿ ಕಣಕ್ಕಿಳಿಯುತ್ತಿರುವ ಮೊದಲ ಪಂದ್ಯ ಇದು. ಆದ್ದರಿಂದಲೇ ಎಲ್ಲರ ಕುತೂಹಲದ ಕಣ್ಣುಗಳು ಅವರತ್ತ ನೆಟ್ಟಿವೆ. ಕನ್ನಡಿಗ ಕೆ.ಎಲ್. ರಾಹುಲ್ ಮೊದಲ ಬಾರಿಗೆ ಸೀಮಿತ ಓವರ್‌ಗಳ ಕ್ರಿಕೆಟ್‌ನ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಆದರೆ ನಾಲ್ಕು ದಿನಗಳ ಹಿಂದಷ್ಟೇ ಟೆಸ್ಟ್ ಕ್ರಿಕೆಟ್ ತಂಡದ ನಾಯಕತ್ವಕ್ಕೆ ದಿಢೀರ್ ರಾಜೀನಾಮೆ ನೀಡಿರುವ ವಿರಾಟ್ ಕುರಿತ ಚರ್ಚೆಗಳು ನಡೆಯುತ್ತಿವೆ. ತಂಡವು ದಕ್ಷಿಣ ಆಫ್ರಿಕಾಕ್ಕೆ ಬರುವ ಮುನ್ನ ಏಕದಿನ ಕ್ರಿಕೆಟ್ ತಂಡದ ನಾಯಕತ್ವದಿಂದ ವಿರಾಟ್ ಅವರನ್ನು ಕೆಳಗಿಳಿಸಲಾಗಿತ್ತು.

ಅಲ್ಲದೇ ಕಳೆದೆರಡು ವರ್ಷಗಳಿಂದ ತಮ್ಮ ಬ್ಯಾಟಿಂಗ್‌ನಲ್ಲಿಯೂ ಅವರು ಮಿಂಚಿಲ್ಲ. ಈ ಅವಧಿಯಲ್ಲಿ ಅವರು ಒಂದೂ ಶತಕ ಬಾರಿಸಿಲ್ಲ. ಆದ್ದರಿಂದ ಬೋಲ್ಯಾಂಡ್ ಪಾರ್ಕ್‌ನಲ್ಲಿ ಆರಂಭವಾಗಲಿರುವ ಏಕದಿನ ಸರಣಿಯಲ್ಲಿ ಅವರ ಮೇಲೆ ಹಲವು ನಿರೀಕ್ಷೆಗಳು ಇವೆ. 254 ಏಕದಿನ ಪಂದ್ಯಗಳನ್ನು ಆಡಿರುವ ದೆಹಲಿಯ ಬ್ಯಾಟರ್ ತಂಡದ ಗೆಲುವಿಗೆ ಯಾವ ರೀತಿಯ ಕಾಣಿಕೆ ಕೊಡಲಿದ್ದಾರೆಂಬ ಕುತೂಹಲ ಗರಿಗೆದರಿದೆ.

ಈ ಸರಣಿಯಲ್ಲಿ ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸಬೇಕಿತ್ತು. ಆದರೆ ಗಾಯಗೊಂಡಿರುವ ಅವರು ದಕ್ಷಿಣ ಆಫ್ರಿಕಾಕ್ಕೆ ತೆರಳಿಲ್ಲ. ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿಯ ಪೂರ್ವಸಿದ್ಧತೆಯ ಭಾಗವಾಗಿಯೂ ಈ ಸರಣಿ ಮಹತ್ವ ಪಡೆದುಕೊಂಡಿದೆ. ಹೋದ ಮಾರ್ಚ್ ತಿಂಗಳಲ್ಲಿ ಭಾರತದಲ್ಲಿ ಇಂಗ್ಲೆಂಡ್ ವಿರುದ್ಧ ನಡೆದಿದ್ದ ಏಕದಿನ ಸರಣಿಯಲ್ಲಿ ಭಾರತ ತಂಡವು ಆಡಿತ್ತು.

ತಂಡದ ಆಯ್ಕೆಯ ಕಸರತ್ತು: ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನಾಯಕ ರಾಹುಲ್ ಮುಂದೆ ಅಂತಿಮ ಹನ್ನೊಂದು ಆಟಗಾರರನ್ನು ಆಯ್ಕೆ ಮಾಡುವ ಸವಾಲು ಇದೆ.

ದೇಶಿ ಟೂರ್ನಿಗಳು ಮತ್ತು ಐಪಿಎಲ್‌ನಲ್ಲಿ ಮಿಂಚಿರುವ ಬ್ಯಾಟರ್ ಋತುರಾಜ್ ಗಾಯಕವಾಡ್, ವೆಂಕಟೇಶ್ ಅಯ್ಯರ್ ಅವರಿಗೆ ಪದಾರ್ಪಣೆ ಅವಕಾಶ ಸಿಗುವುದು ಖಚಿತವಿಲ್ಲ. ಏಕೆಂದರೆ, ರಾಹುಲ್ ಜೊತೆಗೆ ಇನಿಂಗ್ಸ್ ಆರಂಭಿಸಲು ಅನುಭವಿ ಶಿಖರ್ ಧವನ್ ಇದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್ ಇದ್ದಾರೆ. ವೇಗಿಗಳಿಗೆ ಹೆಚ್ಚು ನೆರವು ನೀಡುವ ಇಲ್ಲಿಯ ಪಿಚ್‌ಗಳಲ್ಲಿ ಬೌಲಿಂಗ್ ಆಲ್‌ರೌಂಡರ್ ಆಡುವುದು ಅಗತ್ಯವಾದರೆ, ವೆಂಕಟೇಶ್ ಅಯ್ಯರ್ ಮತ್ತು ಶಾರ್ದೂಲ್ ಠಾಕೂರ್ ಅವರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಬಹುದು. ಅನುಭವಿ ಜಸ್‌ಪ್ರೀತ್ ಬೂಮ್ರಾ ಮೇಲೆ ಬೌಲಿಂಗ್ ವಿಭಾಗದ ಹೊಣೆ ಬೀಳಲಿದೆ. ಕಳೆದ ಬಾರಿ ಭಾರತವು ದಕ್ಷಿಣ ಆಫ್ರಿಕಾ ತಂಡವನ್ನು 5–1ರಿಂದ ಸೋಲಿಸಿತ್ತು.

ಆದರೆ, ಈಚೆಗೆ 1–2ರಿಂದ ಟೆಸ್ಟ್ ಸರಣಿಯಲ್ಲಿ ಸೋತಿರುವ ಭಾರತಕ್ಕೆ ಆತಿಥೇಯ ತಂಡದ ಮಾರ್ಕೊ ಜ್ಯಾನ್ಸೆನ್, ಲುಂಗಿ ಗಿಡಿ ಅವರ ಸವಾಲು ಎದುರಾಗಲಿದೆ. ನಾಯಕ ತೆಂಬಾ ಬವುಮಾ, ಜುಬೇರ್ ಹಮ್ಜಾ, ಕ್ವಿಂಟನ್ ಡಿಕಾಕ್ ಮತ್ತು ಏಡನ್ ಮರ್ಕರಂ ಅವರಿಂದಾಗಿ ಬ್ಯಾಟಿಂಗ್ ಕ್ರಮಾಂಕವು ಬಲಿಷ್ಠವಾಗಿದೆ.

ತಂಡಗಳು

ಭಾರತ: ಕೆ.ಎಲ್. ರಾಹುಲ್ (ನಾಯಕ), ಜಸ್‌ಪ್ರೀತ್ ಬೂಮ್ರಾ, ಶಿಖರ್ ಧವನ್, ಋತುರಾಜ್ ಗಾಯಕವಾಡ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ವೆಂಕಟೇಶ್ ಅಯ್ಯರ್, ರಿಷಭ್ ಪಂತ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಜಯಂತ್ ಯಾದವ್, ನವದೀಪ್ ಸೈನಿ.

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಕೇಶವ್ ಮಹಾರಾಜ, ಕ್ವಿಂಟನ್ ಡಿ ಕಾಕ್ (ವಿಕೆಟ್‌ಕೀಪರ್), ಜುಬೇರ್ ಹಮ್ಜಾ, ಮಾರ್ಕೊ ಜ್ಯಾನ್ಸೆನ್, ಜೆನ್‌ಮನ್ ಮಲಾನ್, ಸಿಸಾಂದಾ ಮಗಾಲ, ಏಡನ್ ಮರ್ಕರಮ್, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ವೇಯ್ನ ಪಾರ್ನೆಲ್, ಆ್ಯಂಡಿಲ್ ಪಿಶುವಾಯೊ, ಡ್ವೇನ್ ಪ್ರಿಟೋರಿಯಸ್, ತಬ್ರೇಜ್ ಶಮ್ಸಿ, ರಸಿ ವ್ಯಾನ್ ಡರ್ ಡಸೆನ್, ಕೈಲ್ ವೆರೆಯನ್

ಪಂದ್ಯ ಆರಂಭ: ಮಧ್ಯಾಹ್ನ 2ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ	
ಪಂದ್ಯಗಳು	84
ಭಾರತ ಜಯ	35
ದಕ್ಷಿಣ ಆಫ್ರಿಕಾ ಜಯ	46
ಫಲಿತಾಂಶವಿಲ್ಲ	3



ತೆಂಬಾ ಬವುಮಾ —ಎಎಫ್‌ಪಿ ಚಿತ್ರ



ವಿರಾಟ್ ಕೊಹ್ಲಿ

ಟೆಸ್ಟ್ ತಂಡ ಮುನ್ನಡೆಸುವುದು ದೊಡ್ಡ ಜವಾಬ್ದಾರಿ: ರಾಹುಲ್

ಜೋಹಾನ್ಸ್‌ಬರ್ಗ್: ಭಾರತದ ಟೆಸ್ಟ್ ಕ್ರಿಕೆಟ್ ತಂಡವನ್ನು ಮುನ್ನಡೆಸುವುದು ದೊಡ್ಡ ಜವಾಬ್ದಾರಿ ಎಂದು ಏಕದಿನ ಮತ್ತು ಟಿ20 ಕ್ರಿಕೆಟ್ ತಂಡಗಳ ಉಪನಾಯಕ ಕೆ.ಎಲ್. ರಾಹುಲ್ ಹೇಳಿದ್ದಾರೆ.

ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಮೂರು ಪಂದ್ಯಗಳ ಟೆಸ್ಟ್ ಸರಣಿ ಮುಕ್ತಾಯವಾದ ಬಳಿಕ ವಿರಾಟ್ ಕೊಹ್ಲಿ, ಟೆಸ್ಟ್ ತಂಡದ ನಾಯಕತ್ವವನ್ನು ತೊರೆದಿದ್ದಾರೆ. ಹೀಗಾಗಿ ಈ ಮಾದರಿಯಲ್ಲಿ ತಂಡದ ಹೊಸ ನಾಯಕನ ಆಯ್ಕೆ ಬಗ್ಗೆ ಚರ್ಚೆ ನಡೆಯುತ್ತಿದೆ. ವಿಕೆಟ್ ಕೀಪರ್ ಬ್ಯಾಟರ್‌ಗಳಾದ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಅವರು ಭಾರತ ಟೆಸ್ಟ್ ತಂಡವನ್ನು ಮುನ್ನಡೆಸಬಲ್ಲರು ಎಂದು ಹಲವು ಕ್ರಿಕೆಟಿಗರು ಅಭಿಪ್ರಾಯಪಟ್ಟಿದ್ದಾರೆ.

ದಕ್ಷಿಣ ಆಫಿಕಾ ವಿರುದ್ಧದ ಸರಣಿಯನ್ನು ಭಾರತ 1-2 ಅಂತರ ದಿಂದ ಸೋತಿತ್ತು. ಸರಣಿಯ ಎರಡನೇ ಪಂದ್ಯಕ್ಕೂ ಮುನ್ನ ವಿರಾಟ್ ಕೊಹ್ಲಿ ಗಾಯಗೊಂಡಿದ್ದರಿಂದ, ಆ ಪಂದ್ಯವನ್ನು ರಾಹುಲ್ ಮುನ್ನಡೆಸಿದ್ದರು. ಆ ಪಂದ್ಯದಲ್ಲಿ ಭಾರತ ಸೋಲು ಅನುಭವಿಸಿತ್ತು.

ಟೆಸ್ಟ್ ತಂಡದ ನಾಯಕತ್ವದ ಬಗ್ಗೆ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ರಾಹುಲ್, 'ನಾನು ಈವರೆಗೆ ಆ ಬಗ್ಗೆ ಯೋಚಿಸಿಲ್ಲ. ಈತನಕ ಕೇವಲ ಸುದ್ದಿಗಳು ಮತ್ತು ಲೇಖನಗಳು ಪ್ರಕಟವಾಗುತ್ತಿವೆ. ಜೋಹಾನ್ಸ್‌ಬರ್ಗ್‌ನಲ್ಲಿ ಟೆಸ್ಟ್ ತಂಡದ ನಾಯಕನಾಗುವ ಅವಕಾಶ ನನಗೆ ಸಿಕ್ಕಿತ್ತು. ಅದೊಂದು ವಿಶೇಷ ಕ್ಷಣ. ಫಲಿತಾಂಶ ನಮ್ಮ ಪರವಾಗಿರಲಿಲ್ಲ. ಆದರೆ, ಅದು ನನ್ನ ಪಾಲಿಗೆ ದೊಡ್ಡ ಕಲಿಕಾ ಅನುಭವ. ಅದು ನಾನು ಯಾವಾಗಲೂ ಹೆಮ್ಮೆ ಪಡುವಂತಹ ಕ್ಷಣ' ಎಂದಿದ್ದಾರೆ.

'ದೇಶದ ತಂಡ ಮುನ್ನಡೆಸುವುದು ಪ್ರತಿಯೊಬ್ಬರ ಪಾಲಿಗೂ ವಿಶೇಷವಾದದ್ದು ಮತ್ತು ಅದಕ್ಕೆ ನಾನೇನು ಹೊರತಲ್ಲ. ನನಗೆ ಆ ಹೊಣೆ ವಹಿಸಿಕೊಟ್ಟರೆ, ಖಂಡಿತಾ ಅದೊಂದು ದೊಡ್ಡ ಜವಾಬ್ದಾರಿಯಾಗಲಿದೆ. ಅದು ಉತ್ಸುಕಗೊಳ್ಳುವ ಸಂಗತಿ. ನಾನು ಭವಿಷ್ಯದ ಬಗ್ಗೆ ಯೋಚಿಸುವುದಿಲ್ಲ. ವರ್ತಮಾನದ ಬಗ್ಗೆ ಮಾತ್ರವೇ ಗಮನಹರಿಸುತ್ತೇನೆ' ಎಂದು ಸ್ಪಷ್ಟಪಡಿಸಿದ್ದಾರೆ.



ಕೆ.ಎಲ್.ರಾಹುಲ್– ರಾಯಿಟರ್ಸ್ ಚಿತ್ರ

ಈ ಕ್ರಿಕೆಟ್ ಟೂರ್ನಿಯಲ್ಲಿ ಸಂಸ್ಕೃತ ಕಾಮೆಂಟ್ರಿ!

ಭೋಪಾಲ್ (ಪಿಟಿಐ): ಅಚ್ಚ ಬಿಳಿ ಬಣ್ಣದ ಧೋತಿ ಮತ್ತು ಕುರ್ತಾ ಧರಿಸಿದ್ದ ಅವರಿಬ್ಬರೂ ಪಿಚ್ ಮೇಲೆ ವೇಗವಾಗಿ ಓಡುತ್ತಿದ್ದರು.

ಅಂತಹದೇ ದಿರಿಸಿನ ವ್ಯಕ್ತಿ ಚೆಂಡನ್ನು ಸ್ಟಂಪ್‌ನತ್ತ ಎಸೆಯುವಲ್ಲಿ ಮಗ್ನನಾಗಿದ್ದ. ಸ್ಪೀಕರ್‌ನಲ್ಲಿ ಸಂಸ್ಕೃತ ಭಾಷೆಯಲ್ಲಿ ವೀಕ್ಷಕ ವಿವರಣೆ ಹೊರಹೊಮ್ಮುತ್ತಿತ್ತು.

ಇವು ಭೋಪಾಲ್‌ನಲ್ಲಿ ವೈದಿಕ ಪಂಡಿತರಿಗಾಗಿ ಆಯೋಜಿಸಿದ ಕ್ರಿಕೆಟ್ ಟೂರ್ನಿಯಲ್ಲಿ ಕಂಡುಬಂದ ದೃಶ್ಯಗಳು.

‘ಮಹರ್ಷಿ ಮಹೇಶ್ ಯೋಗಿ ಜನ್ಮದಿನದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸತತ 2ನೇ ವರ್ಷ ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ. ನಮ್ಮ ಸಾಂಪ್ರದಾಯಿಕ ಉಡುಗೆ–ತೊಡುಗೆಗಳಲ್ಲಿಯೇ ಕ್ರಿಕೆಟ್ ಆಡಲಾಗುತ್ತದೆ. ಆಟಗಾರರೆಲ್ಲರೂ ಸಂಸ್ಕೃತದಲ್ಲಿಯೇ ಸಂವಹನ ನಡೆಸುತ್ತಾರೆ. ಸಂಸ್ಕೃತವನ್ನು ಬೆಳೆಸಲು ಇದು ಸಹಕಾರಿ’ ಎಂದು ಕಾರ್ಯಕ್ರಮ ಆಯೋಜಿಸಿರುವ ಸಂಸ್ಕೃತಿ ಬಚಾವೋ ಮಂಚ್ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ತಿವಾರಿ ಹೇಳಿದರು.

19 ವರ್ಷದೊಳಗಿನವರ ವಿಶ್ವಕಪ್: ಲಯದಲ್ಲಿ ವಿಕ್ಕಿ

ಯಶ್ ಬಳಗಕ್ಕೆ ಐರ್ಲೆಂಡ್ ಸವಾಲು

ತರೌಬಾ, ವೆಸ್ಟ್ ಇಂಡೀಸ್ (ಪಿಟಿಐ): ಮೊದಲ ಪಂದ್ಯದ ಜಯದೊಂದಿಗೆ ಭರ್ತಿ ಆತ್ಮವಿಶ್ವಾಸದಲ್ಲಿರುವ ಯಶ್ ಧುಳ್ ನಾಯಕತ್ವದ ತಂಡವು ಬುಧವಾರ 19 ವರ್ಷದೊಳಗಿವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಐರ್ಲೆಂಡ್ ಎದುರು ಕಣಕ್ಕಿಳಿಯಲಿದೆ.

ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ನಡೆಯಲಿರುವ ಬಿ ಗುಂಪಿನ ಪಂದ್ಯದಲ್ಲಿ ಯಶ್ ಧುಳ್ ತಂಡವು ಬ್ಯಾಟಿಂಗ್‌ನಲ್ಲಿ ಸುಧಾರಣೆಯತ್ತ ಚಿತ್ತ ನೆಟ್ಟಿದೆ. ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಜಯದಲ್ಲಿ ಯಶ್ ಮಿಂಚಿದ್ದರು. ಆದರೆ, ಆರಂಭಿಕ ಜೋಡಿಯು ವೈಫಲ್ಯ ಅನುಭವಿಸಿತ್ತು. ಆದರೆ ಪ್ರತಿಭಾವಂತ ಬ್ಯಾಟರ್ ಹರ್ನೂರ್ ಸಿಂಗ್ ಉತ್ತಮ ಆರಂಭ ನೀಡುವಲ್ಲಿ ಸಫಲರಾದರೆ ತಂಡಕ್ಕೆ ಹೆಚ್ಚಿನ ಬಲ ಲಭಿಸುತ್ತದೆ.

ಎಡಗೈ ಸ್ಪಿನ್ನರ್ ವಿಕ್ಕಿ ಓಸ್ವಾಲ್ ಆ ಪಂದ್ಯದಲ್ಲಿ ಐದು ವಿಕೆಟ್ ಗಳಿಸಿದ್ದರು. ಅವರೊಂದಿಗೆ ಮಧ್ಯಮವೇಗಿ ರಾಜ್ ಭಾವಾ ಕೂಡ ಮಿಂಚಿದ್ದರು. ಆಲ್‌ರೌಂಡರ್ ರಾಜವರ್ಧನ್ ಹಂಗರಗೇಕರ್, ಕನ್ನಡಿಗ ಅನೀಶ್ವರ್ ಗೌತಮ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ತಂಡದ ಜಯದ ಹಾದಿ ಸುಗಮವಾಗುವುದರಲ್ಲಿ ಸಂಶಯವಿಲ್ಲ. ಐರ್ಲೆಂಡ್ ತಂಡವು ತನ್ನ ಮೊದಲ ಪಂದ್ಯದಲ್ಲಿ ಉಗಾಂಡಾ ಎದುರು 39 ರನ್‌ಗಳಿಂದ ಜಯಿಸಿದೆ. ತಂಡದ ನಾಯಕ ಟಿಮ್ ಟೆಕ್ಟರ್ ತಮ್ಮ ಆಲ್‌ರೌಂಡ್ ಆಟದ ಮೂಲಕ ಎದುರಾಳಿಗಳಿಗೆ ಸವಾಲೊಡ್ಡಬಲ್ಲರು.

ಪಂದ್ಯ ಆರಂಭ: ಸಂಜೆ 6.30

ಎರಡನೇ ಪಂದ್ಯ: ಆಸ್ಟ್ರೇಲಿಯಾ–ಸ್ಕಾಟ್ಲೆಂಡ್ (ಡಿ ಗುಂಪು)

ಸ್ಥಳ: ಕಾನರಿ ಸ್ಪೋರ್ಟ್ಸ್ ಕ್ಲಬ್. ಸೇಂಟ್ ಕಿಟ್ಸ್



ಯಶ್ ಧುಳ್

ಮೆಡ್ವೆಡೆವ್, ಮುಗುರುಜಾ ಮುನ್ನಡೆ

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಯುವ ಪ್ರತಿಭೆ ಲೇಲಾಗೆ ಸೋಲು

ಮೆಲ್ಬರ್ನ್ (ಎಪಿ): ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರರಲ್ಲಿ ಒಬ್ಬರಾದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಹಾಗೂ ಸ್ಪೇನ್‌ನ ಗಾರ್ಬೈನ್ ಮುಗುರುಜಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ರಾಡ್ ಲೇವರ್ ಅರೆನಾದಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಮೆಡ್ವೆಡೆವ್ 6-1, 6-4, 7-6 (3) ರಿಂದ ಸ್ವಿಟ್ಜರ್ಲೆಂಡ್‌ನ ಹೆನ್ರಿ ಲಾಕ್ಸೊನೆನ್ ಅವರನ್ನು ಮಣಿಸಿದರು.

ಲಸಿಕೆ ಹಾಗೂ ವೀಸಾ ಪ್ರಕರಣದಲ್ಲಿ ಹಿನ್ನಡೆ ಅನುಭವಿಸಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಟೂರ್ನಿಯಲ್ಲಿ ಆಡಲು ಅವಕಾಶ ಸಿಗದೆ ಈಗಾಗಲೇ ತವರಿಗೆ ಮರಳಿದ್ದಾರೆ. ಮೆಲ್ಬರ್ನ್ ಪಾರ್ಕ್‌ನಲ್ಲಿ ನೊವಾಕ್ ಸಾಧಿಸಿದಷ್ಟು ಯಶಸ್ಸು ಯಾರೂ ಸಾಧಿಸಿಲ್ಲ. ಒಂಬತ್ತು ಬಾರಿ ಫೈನಲ್ ತಲುಪಿದ್ದ ಅವರು ಒಂದು ಬಾರಿಯೂ ಸೋತಿರಲಿಲ್ಲ. ಅವರ ವಿರುದ್ಧ ಪ್ರಶಸ್ತಿ ಸುತ್ತಿನಲ್ಲಿ ನಿರಾಸೆ ಅನುಭವಿಸಿದವರಲ್ಲಿ ಮೆಡ್ವೆಡೆವ್ ಕೂಡ ಒಬ್ಬರು. ಕಳೆದ ವರ್ಷದ ಚಾಂಪಿಯನ್‌ಷಿಪ್‌ನಲ್ಲಿ ರಷ್ಯಾ ಆಟಗಾರ ಸೋಲನುಭವಿಸಿದ್ದರು. ಆದರೆ ಅಮೆರಿಕ ಓಪನ್ ಟೂರ್ನಿಯಲ್ಲಿ ಮುಯ್ಯಿ ತೀರಿಸಿದ್ದರು ಮೆಡ್ವೆಡೆವ್.

ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಮುಗುರುಜಾ ಅವರು 6-3, 6-4ರಿಂದ ಫ್ರಾನ್ಸ್‌ನ ಕ್ಲಾರಾ ಬ್ಲರೆಲ್ ಎದುರು ಗೆದ್ದರು. 2020ರ ಆವೃತ್ತಿಯಲ್ಲಿ ಸ್ಪೇನ್ ಆಟಗಾರ್ತಿ, ಅಮೆರಿಕದ ಸೋಫಿಯಾ ಕೆನಿನ್ ಎದುರು ಮಣಿದು ರನ್ನರ್ ಅಪ್ ಆಗಿದ್ದರು.

ಲೇಲಾಗೆ ನಿರಾಸೆ: ಕೆನಡಾದ 19 ವರ್ಷದ ಪ್ರತಿಭೆ ಲೇಲಾ ಫರ್ನಾಂಡೀಸ್ ಅವರು ಮೊದಲ ಸುತ್ತಿನ ಹಣಾಹಣಿಯಲ್ಲೇ ನಿರಾಸೆ ಅನುಭವಿಸಿದರು. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಆಸ್ಟ್ರೇಲಿಯಾ ಆಟಗಾರ್ತಿ ಮ್ಯಾಡಿಸನ್ ಇಂಗ್ಲಿಸ್ 6-2, 6-4ರಿಂದ ಲೇಲಾ ಮೇಲೆ ಗೆದ್ದರು. ಅಮೆರಿಕ ಓಪನ್ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ಲೇಲಾ, ಅದರ ನಂತರ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 133ನೇ ಸ್ಥಾನದಲ್ಲಿರುವ ಮ್ಯಾಡಿಸನ್ ಎದುರು ಲೇಲಾ 30 ಸ್ವಯಂಕೃತ ತಪ್ಪುಗಳನ್ನು ಎಸಗಿದರು. ಮ್ಯಾಡಿಸನ್, ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೊದಲ ಜಯದ ಸಂಭ್ರಮ ಆಚರಿಸಿದರು.

ಮಹಿಳಾ ಸಿಂಗಲ್ಸ್ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಆರನೇ ಶ್ರೇಯಾಂಕದ ಅನೆಟ್ ಕೊಂಟಾವೀಟ್ 6-2, 6-3ರಿಂದ ಕ್ಯಾತರಿನಾ ಸಿನಿಯಾಕೊವಾ ಎದುರು, 2020ರ ಫ್ರೆಂಚ್ ಓಪನ್ ಚಾಂಪಿಯನ್ ಇಗಾ ಸ್ವೆಟೆಕ್ 6-3 6-0ರಿಂದ ಹ್ಯಾರಿಯಟ್ ಡಾರ್ಟ್ ಎದುರು ಗೆದ್ದರು.

ಅನಸ್ತಾಸಿಯಾ ಪಾವ್ಲಿಚೆಂಕೊವಾ 6–2, 6–1ರಿಂದ ಅನ್ನಾ ಬೊಂದಾರ್, ಸಿಮೊನಾ ಹಲೆಪ್ 6–4, 6–3ರಿಂದ ಮ್ಯಾಗ್ಡಾಲಿನಾ ಫ್ರೇಕ್ ವಿರುದ್ಧ ಗೆದ್ದು ಎರಡನೇ ಸುತ್ತಿಗೆ ಮುನ್ನಡೆದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆ್ಯಂಡ್ರೆ ರುಬ್ಲೆವ್ 6-3, 6-2, 6-2ರಿಂದ ಗಿಯಾನ್ಲುಕಾ ಮೇಜರ್ ಎದುರು, ಜಾನಿಕ್ ಸಿನ್ನರ್ 6-4, 7-5, 6-1ರಿಂದ ಜೋವಾ ಸೌಸಾ ವಿರುದ್ಧ, ಡಿಗೊ ಸ್ವಾರ್ಟ್ಜ್‌ಮನ್ 6-3, 6-4, 7-5ರಿಂದ ಫಿಲಿಪ್ ಕ್ರಾಜಿನೊವಿಚ್ ಎದುರು ಗೆದ್ದು ಎರಡನೇ ಸುತ್ತು ಪ್ರವೇಶಿಸಿದರು.



ಡ್ಯಾನಿಲ್ ಮೆಡ್ವೆಡೆವ್ ಆಟದ ವೈಖರಿ– ರಾಯಿಟರ್ಸ್ ಚಿತ್ರ

ಲಖನೌನಲ್ಲಿ ಪ್ಯಾರಾ ಬ್ಯಾಡ್ಮಿಂಟನ್ ಅಕಾಡೆಮಿ ಆರಂಭ

ಲಖನೌ: ದೇಶದ ಮೊದಲ ಪ್ಯಾರಾ ಬ್ಯಾಡ್ಮಿಂಟನ್ ಅಕಾಡೆಮಿಯು ಏಜಿಸ್ ಫೆಡರಲ್ ಲೈಫ್ ಇನ್ಶುರೆನ್ಸ್ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ, ಭಾರತದ ಪ್ಯಾರಾ-ಬ್ಯಾಡ್ಮಿಂಟನ್ ತಂಡದ ಮುಖ್ಯ ತರಬೇತುದಾರ ಗೌರವ್ ಖನ್ನಾ ಅವರ ಸಹಯೋಗದೊಂದಿಗೆ ಇಲ್ಲಿ ಆರಂಭಗೊಂಡಿದೆ.

ಸುಧಾರಿತ ಉಪಕರಣಗಳನ್ನೊಳಗೊಂಡ, ಹೈ ಪರ್ಫಾಮೆನ್ಸ್ ಸೆಂಟರ್ ಉಳ್ಳ ಪ್ಯಾರಾ ಬ್ಯಾಡ್ಮಿಂಟನ್ ಅಕಾಡೆಮಿ ಇದಾಗಿದೆ. ಇದೇ ಸಂದರ್ಭದಲ್ಲಿ ಗೌರವ್ ಖನ್ನಾ ಏಜಿಸ್ ಫೆಡರಲ್ ‘ಫೆಸ್ಟ್ ಫಾರ್ ಫಿಯರ್ಲೆಸ್ ಶಟ್ಲರ್ಸ್‘ ಕಾರ್ಯಕ್ರಮವನ್ನು ಉದ್ಘಾಟಿಸಿದರು. 2028 ಮತ್ತು 2032ರ ಪ್ಯಾರಾಲಿಂಪಿಕ್ಸ್ ಅನ್ನು ಗುರಿಯಾಗಿಸಿಕೊಂಡು ಹೊಸ ಪ್ರತಿಭೆಗಳನ್ನು ಗುರುತಿಸುವ ಮತ್ತು ಪೋಷಿಸುವ ಕಾರ್ಯಕ್ರಮ ಇದಾಗಿದೆ.

ಪ್ಯಾರಾ ಬ್ಯಾಡ್ಮಿಂಟನ್ ಅಕಾಡೆಮಿಯ ಹೈ ಪರ್ಫಾಮೆನ್ಸ್ ಕೇಂದ್ರ, ನಾಲ್ಕು ಅಂಗಣಗಳು, ಬಿಡಬ್ಲ್ಯುಎಫ್ ಅನುಮೋದಿತ ಎರಡು ಸಿಂಥೆಟಿಕ್ ಮ್ಯಾಟ್ಸ್ ಮತ್ತು ವೀಲ್ ಚೇರ್ ಅಥ್ಲೀಟ್‌ಗಳಿಗಾಗಿ ಎರಡು ವುಡನ್ ಕೋರ್ಟ್‌ಗಳನ್ನು ಒಳಗೊಂಡಿದೆ. ಈ ಅಕಾಡೆಮಿ ಸಂಪೂರ್ಣ ಸುಸಜ್ಜಿತ ಜಿಮ್, ಐಸ್ ಸ್ನಾನ, ಹಬೆ ಸ್ನಾನ, ಹೈಡ್ರೋಥೆರಪಿ ಸೇರಿದಂತೆ ಅಥ್ಲೀಟ್‌ಗಳಿಗೆ ಅಗತ್ಯವಿರುವ ಎಲ್ಲಾ ಆಧುನಿಕ ಸೌಲಭ್ಯಗಳ ಜೊತೆಗೆ, ಕ್ರೀಡಾಪಟುಗಳ ವಾಸ್ತವ್ಯಕ್ಕೆ ಸುಸಜ್ಜಿತ ಕೊಠಡಿಗಳನ್ನು ಹೊಂದಿದೆ.

ಅಕಾಡೆಮಿಯ ಉದ್ಘಾಟನಾ ಸಮಾರಂಭದಲ್ಲಿ ಪ್ಯಾರಾ ಬ್ಯಾಡ್ಮಿಂಟನ್ ಪಟುಗಳಾದ ಪ್ರಮೋದ್ ಭಗತ್, ಮನೋಜ್ ಸರ್ಕಾರ್, ನಿತೇಶ್ ಕುಮಾರ್, ಕೃಷ್ಣ ನಗರ್, ನಿತ್ಯಾಶ್ರೀ ಮತ್ತು ಪಲಕ್ ಕೊಹ್ಲಿ ಪಾಲ್ಗೊಂಡಿದ್ದರು. ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪ್ರಮೋದ್ ಭಗತ್ ಮತ್ತು ಕೃಷ್ಣ ನಗರ್ ಚಿನ್ನದ ಪದಕ, ಸುಹಾಸ್ ಯತಿರಾಜ್ ಮತ್ತು ಮನೋಜ್ ಸರ್ಕಾರ್ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದಿದ್ದರು.

ಪ್ರೊ ಕಬಡ್ಡಿ: ಡೆಲ್ಲಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಲ್‌ರೌಂಡರ್ ವಿಜಯ್ ಮತ್ತು ಸಂದೀಪ್ ನರ್ವಾಲ್ ಅವರ ಆಟದ ಬಲದಿಂದ ದಬಂಗ್ ಡೆಲ್ಲಿ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಜಯಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟನ್ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 32–29ರಿಂದ ಪಟ್ನಾ ಪೈರೆಟ್ಸ್ ವಿರುದ್ಧ ಜಯಿಸಿತು.

ಪಂದ್ಯದ ಆರಂಭದಿಂದಲೇ ಡೆಲ್ಲಿ ತಂಡವು ಮೇಲುಗೈ ಸಾಧಿಸಿತು. ಅರ್ಧವಿರಾಮದ ವೇಳೆಗೆ 19–10ರ ಮುನ್ನಡೆ ಸಾಧಿಸಿತು. ಆದರೆ, ವಿರಾಮದ ನಂತರ ಪಟ್ನಾ ತಂಡವು 19–13ರಿಂದ ಮುನ್ನಡೆ ಸಾಧಿಸಿತು. ಆದರೆ ಅಂತಿಮವಾಗಿ ಡೆಲ್ಲಿ ವಿಜಯ ಸಾಧಿಸುವಲ್ಲಿ ಯಶಸ್ವಿಯಾಯಿತು. ಪ್ರಥಮಾರ್ಧದಲ್ಲಿ ಸಾಧಿಸಿದ್ದ ಮುನ್ನಡೆಯು ಕಾಪಾಡಿತು. ಮೂರು ಪಾಯಿಂಟ್‌ಗಳ ಅಂತರದಿಂದ ಡೆಲ್ಲಿ ತಂಡ ಗೆದ್ದಿತು.

ವಿಜಯ್ ಒಂಬತ್ತು ಮತ್ತು ಸಂದೀಪ್ ಎಂಟು ಅಂಕಗಳನ್ನು ಗಳಿಸಿದರು. ಪಟ್ನಾ ತಂಡದ ತಂಡದ ಪ್ರಶಾಂತ್ ಕುಮಾರ್ (6) ಅಂಕ ಗಳಿಸಿದರು.

ರೋಚಕ ಟೈ: ಅಜಿತ್ ಮತ್ತು ರಿಂಕು ಸಿಂಗ್ ಅವರ ಹೋರಾಟದ ಬಲದಿಂದ ಯು ಮುಂಬಾ ತಂಡವು ಗುಜರಾತ್ ಜೈಂಟ್ಸ್ ತಂಡದ ಎದುರಿನ ಪಂದ್ಯದಲ್ಲಿ ರೋಚಕ ಟೈ ಸಾಧಿಸಿತು.

ಮೊದಲಾರ್ಧದದಲ್ಲಿ ಗುಜರಾತ್ ತಂಡವು 13–10ರಿಂದ ಮುಂದಿತ್ತು. ಆದರೆ ವಿರಾಮದ ನಂತರದ ಅವಧಿಯಲ್ಲಿ ಮುಂಬಾ ತಂಡವು ತಿರುಗೇಟು ನೀಡಿತು. ಇದರಿಂದಾಗಿ ಪಂದ್ಯವು 24–24ರಿಂದ ಟೈ ಆಯಿತು.

ಇಂದಿನ ಪಂದ್ಯ (ರಾತ್ರಿ)

ಹರಿಯಾಣ ಸ್ಟೀಲರ್ಸ್ Vs ಪುಣೇರಿ ಪಲ್ಟನ್ – 7.30

ಜೈಪುರ ಪಿಂಕ್ ಪ್ಯಾಂಥರ್ಸ್ – ತೆಲುಗು ಟೈಟನ್ಸ್ – 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	11	7	2	2	42
ಪಟ್ನಾ ಪೈರೇಟ್ಸ್	11	7	3	1	40
ಬೆಂಗಳೂರು ಬುಲ್ಸ್	11	7	3	1	39
ಯುಪಿ ಯೋಧಾ	11	4	4	3	33
ಜೈಪುರ್ ಪಿಂಕ್ ಪ್ಯಾಂಥರ್ಸ್	10	5	4	1	31
ಯು ಮುಂಬಾ	11	3	3	5	31
ತಮಿಳ್ ತಲೈವಾಸ್	10	3	2	5	30
ಬೆಂಗಾಲ್ ವಾರಿಯರ್ಸ್	11	5	5	1	30
ಹರಿಯಾಣ ಸ್ಟೀಲರ್ಸ್	10	3	5	2	24
ಗುಜರಾತ್ ಜೈಂಟ್ಸ್	10	2	5	3	23
ಪುಣೇರಿ ಪಲ್ಟನ್	10	4	6	-	21
ತೆಲುಗು ಟೈಟನ್ಸ್	10	-	8	2	12

(ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ)

ಫಿಫಾ ವರ್ಷದ ಆಟಗಾರ ರಾಬರ್ಟ್ ಲೆವಾಂಡೊವ್ಸ್ಕಿ

ಜುರಿಚ್ (ಎಪಿ): ಪೋಲೆಂಡ್ ತಂಡದ ನಾಯಕ ರಾಬರ್ಟ್ ಲೆವಾಂಡೊವ್ಸ್ಕಿ ಅವರು ದಿಗ್ಗಜ ಲಯೊನೆಲ್ ಮೆಸ್ಸಿ ಅವರನ್ನು ಹಿಂದಿಕ್ಕಿ ಫಿಫಾ ವರ್ಷದ ಫುಟ್‌ಬಾಲ್ ಆಟಗಾರ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಬಾಯರ್ನ್ ಮ್ಯೂನಿಕ್ ಕ್ಲಬ್ ಪ್ರತಿನಿಧಿಸುವ ಲೆವಾಂಡೊವ್ಸ್ಕಿ ಅವರು ಕಳೆದ ತಿಂಗಳು ‘ಬ್ಯಾಲನ್ ಡಿ ಒರ್‘ ಪ್ರಶಸ್ತಿ ರೇಸ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದರು. ಆಗ ಅರ್ಜೆಂಟೀನಾದ ಮೆಸ್ಸಿ ಅವರಿಗೆ ಪ್ರಶಸ್ತಿ ಒಲಿದಿತ್ತು.

ಕಳೆದ ವರ್ಷವೂ ರಾಬರ್ಟ್ ‘ವರ್ಷದ ಆಟಗಾರ‘ ಎನಿಸಿಕೊಂಡಿದ್ದರು. ಈ ಬಾರಿ ಈಜಿಪ್ಟ್ ಆಟಗಾರ, ಲಿವರ್‌ಪೂಲ್ ಕ್ಲಬ್‌ನಲ್ಲಿ ಆಡುವ ಮೊಹಮ್ಮದ್ ಸಲಾಹ್ ಮೂರನೇ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದ ಪ್ರಶಸ್ತಿಯು ಸ್ಪೇನ್‌ನ ಅಲೆಕ್ಸಿಯಾ ಪುಟೆಲ್ಲಾಸ್ ಅವರ ಪಾಲಾಯಿತು. ಈ ಬಾರಿಯ ‘ಬ್ಯಾಲನ್ ಡಿ ಒರ್’ ಪ್ರಶಸ್ತಿಯನ್ನೂ ಅವರು ತಮ್ಮದಾಗಿಸಿಕೊಂಡಿದ್ದರು.



ರಾಬರ್ಟ್ ಲೆವಾಂಡೊವ್ಸ್ಕಿ



ಅಲೆಕ್ಸಿಯಾ ಪುಟೆಲ್ಲಾಸ್

ಸಂಕ್ಷಿಪ್ತ ಸುದ್ದಿ

ಅಬುಧಾಬಿಗೆ ತೆರಳಲು ಬೂಸ್ಟರ್ ಡೋಸ್ ಕಡ್ಡಾಯ

ದುಬೈ (ಎಪಿ): ಸಂಯುಕ್ತ ಅರಬ್ ಎಮಿರೇಟ್ಸ್‌ನ ರಾಜಧಾನಿಯಾಗಿರುವ ಅಬುಧಾಬಿಗೆ ತೆರಳಬೇಕಿದ್ದರೆ ಇನ್ನು ಮುಂದೆ ಬೂಸ್ಟರ್ ಡೋಸ್ ಕೋವಿಡ್ ಲಸಿಕೆ ಹಾಕಿಸಿರುವುದು ಕಡ್ಡಾಯವಾಗಿದೆ.

ಪಕ್ಕದ ದುಬೈ ನಗರದಲ್ಲಿ ಈ ನಿಯಮ ಇಲ್ಲ. ಆದರೆ ಅಬುಧಾಬಿಯಲ್ಲಿ ಇದನ್ನು ಕಡ್ಡಾಯಗೊಳಿಸಿದ್ದು, ಎರಡು ಲಸಿಕೆಯ ಜತೆಗೆ ಎರಡನೇ ಲಸಿಕೆ ಪಡೆದ ಆರು ತಿಂಗಳ ಬಳಿಕ ಬೂಸ್ಟರ್ ಡೋಸ್ ಲಸಿಕೆ ಪಡೆದವರಿಗಷ್ಟೇ ಇನ್ನು ಮುಂದೆ ನಗರದೊಳಗಿನ ಸಾರ್ವಜನಿಕ ಸ್ಥಳಗಳು, ಸರ್ಕಾರಿ ಕಚೇರಿಗಳಿಗೆ ಪ್ರವೇಶಿಸಲು ಅವಕಾಶ ನೀಡಲಾಗುತ್ತದೆ ಎಂದು ಸರ್ಕಾರದ ಆರೋಗ್ಯ ಆ್ಯಪ್‌ನಲ್ಲಿ ಮಾಹಿತಿ ನೀಡಲಾಗಿದೆ.

ಅಬುಧಾಬಿಗೆ ಪ್ರವೇಶಿಸುವುದಕ್ಕೆ ಮೊದಲಾಗಿ ಎರಡು ವಾರಗಳೊಳಗೆ ಮಾಡಿಸಿದ ಕೋವಿಡ್ ನೆಗೆಟಿವ್ ವರದಿ ಅಗತ್ಯವಾಗಿದೆ. ಇಂತಹ ನೆಗೆಟಿವ್ ವರದಿ ಇದ್ದರೆ ಮಾತ್ರ ‘ಗ್ರೀನ್ ಕಾರ್ಡ್‘ ಸ್ಥಾನಮಾನ ಉಳಿದಿರುತ್ತದೆ.

ಯುಎಇಯ ಶೇ 90ಕ್ಕಿಂತ ಅಧಿಕ ಜನಸಂಖ್ಯೆಗೆ ಲಸಿಕೆ ಹಾಕಿಸುವ ಮೂಲಕ ಎಲ್ಲ ಅರ್ಹರಿಗೂ ಶೇ 100ರಷ್ಟು ಲಸಿಕೆ ಹಾಕಿಸಿದ ಸಾಧನೆ ಮಾಡಲಾಗಿದೆ. ದೇಶದಲ್ಲಿ ಈಚಿನ ದಿನಗಳಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಜಾಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಇದೀಗ ಬೂಸ್ಟರ್ ಡೋಸ್ ಪಡೆಯುವುದನ್ನು ಕಡ್ಡಾಯಗೊಳಿಸಲಾಗುತ್ತಿದೆ.

ಅಫ್ಗಾನಿಸ್ತಾನದಲ್ಲಿ ಭೂಕಂಪ: 22 ಸಾವು

ಕಾಬೂಲ್ (ಎಪಿ): ಅಫ್ಗಾನಿಸ್ತಾನ ಪಶ್ಚಿಮ ಭಾಗದ ಬಗ್ದೀಸ್ ಪ್ರಾಂತ್ಯದ ತುರ್ಕ್‌ಮೆನಿಸ್ತಾನ ಗಡಿ ಭಾಗದಲ್ಲಿ ಸೋಮವಾರ ಸಂಜೆ ಅವಳಿ ಭೂಕಂಪಗಳು ಸಂಭವಿಸಿದ್ದು, ಕನಿಷ್ಠ 22 ಮಂದಿ ಮೃತಪಟ್ಟಿದ್ದಾರೆ.

ಅಫ್ಗಾನಿಸ್ತಾನದ ಅತ್ಯಂತ ಹಿಂದುಳಿದ ಪ್ರದೇಶದಲ್ಲಿ ಈ ಕಂಪನ ಸಂಭವಿಸಿದ್ದು, ಒಂದು ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.3ರಷ್ಟು ಮತ್ತು ಇನ್ನೊಂದು ಕಂಪನದ ತೀವ್ರತೆ 4.9ರಷ್ಟಿತ್ತು. ದುರ್ಗಮ ಪ್ರದೇಶಗಳಲ್ಲಿ ಕುಸಿದು ಬಿದ್ದ ಮನೆಗಳ ಅಡಿಯಿಂದ ಮೃತದೇಹಗಳನ್ನು ಹೊರತೆಗೆಯುವ ಕಾರ್ಯ ನಿಧಾನವಾಗಿ ನಡೆಯುತ್ತಿದ್ದು, ಸಾವಿನ ಸಂಖ್ಯೆ ಹೆಚ್ಚುವ ಆತಂಕ ಇದೆ.

ಅಬುಧಾಬಿ ದಾಳಿ: ಮೃತ ಭಾರತೀಯರ ಗುರುತು ಪತ್ತೆ

ದುಬೈ (ಪಿಟಿಐ): ಅಬುಧಾಬಿಯಲ್ಲಿ ಸೋಮವಾರ ಶಂಕಿತ ಡ್ರೋನ್ ದಾಳಿಯಿಂದ ಸ್ಫೋಟ ಸಂಭವಿಸಿ ಮೃತಪಟ್ಟ ಇಬ್ಬರು ಭಾರತೀಯರ ಗುರುತು ಪತ್ತೆಯಾಗಿದ್ದು, ಗಾಯಗೊಂಡ ಆರು ಮಂದಿಯಲ್ಲಿ ಇಬ್ಬರು ಭಾರತೀಯರು ಎಂಬುದು ತಿಳಿದುಬಂದಿದೆ.

ಗಾಯಗೊಂಡ ಈ ಇಬ್ಬರು ಭಾರತೀಯರನ್ನು ಚಿಕಿತ್ಸೆ ನೀಡಿ ಸೋಮವಾರ ರಾತ್ರಿಯೇ ಮನೆಗೆ ಕಳುಹಿಸಿಕೊಡಲಾಗಿದೆ ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

‘ಮೃತಪಟ್ಟಿರುವ ಇಬ್ಬರು ಭಾರತೀಯರ ಗುರುತನ್ನು ಪತ್ತೆಹಚ್ಚಲಾಗಿದೆ. ಅವರ ಕುಟುಂಬದವರೊಂದಿಗೆ ನಿಕಟ ಸಂಪರ್ಕದಲ್ಲಿದ್ದೇವೆ. ಮೃತದೇಹವನ್ನು ಭಾರತಕ್ಕೆ ತರುವ ನಿಟ್ಟಿನಲ್ಲಿ ಯುಎಇ ಅಧಿಕಾರಿಗಳು ಹಾಗೂ ಎಡಿಎನ್‌ಒಸಿ ತೈಲ ಕಂಪನಿ ಜತೆಗೆ ಸಂಪರ್ಕದಲ್ಲಿದ್ದೇವೆ’ ಎಂದು ಭಾರತೀಯ ರಾಯಭಾರ ಕಚೇರಿ ಟ್ವೀಟ್ ಮಾಡಿದೆ. ಆದರೆ ಮೃತರ ಹೆಸರು, ಅವರ ಊರನ್ನು ಮಾತ್ರ ಇನ್ನೂ ಬಹಿರಂಗಪಡಿಸಿಲ್ಲ.

ಅಗತ್ಯದ ನೆರವು: ‘ಮೃತಪಟ್ಟ ಭಾರತೀಯರ ಕುಟುಂಬಗಳಿಗೆ ಸಾಧ್ಯವಿರುವ ಎಲ್ಲಾ ನೆರವನ್ನೂ ನೀಡಲಾಗುವುದು’ ಎಂದು ಯುಎಇಯಲ್ಲಿರುವ ಭಾರತದ ರಾಯಭಾರಿ ಸಂಜಯ್ ಸುಧೀರ್ ಅವರು ‘ದಿ ನ್ಯಾಷನಲ್’ ಪತ್ರಿಕೆಗೆ ತಿಳಿಸಿದ್ದಾರೆ.

ದಾಳಿ ಬಳಿಕದ ಉಪಗ್ರಹ ಚಿತ್ರ ಬಿಡುಗಡೆ: ಶಂಕಿತ ಹೂತಿ ಬಂಡುಕೋರರು ದಾಳಿ ನಡೆಸಿದ ನಂತರದ ಉಪಗ್ರಹ ಚಿತ್ರವನ್ನು ಪ್ಲಾನೆಟ್ ಲ್ಯಾಬ್ಸ್ ಪಿಬಿಸಿ ತೆಗೆದಿದ್ದು, ಎಪಿ ಸುದ್ದಿಸಂಸ್ಥೆ ಅದನ್ನು ಪಡೆದುಕೊಂಡು ಪ್ರಕಟಿಸಿದೆ. ಅಬುಧಾಬಿ ಹೊರವಲಯದ ಮುಸಾಫಾದಲ್ಲಿರುವ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯ ತೈಲ ಸಂಗ್ರಹಾಗಾರದ ಬಳಿ ದಟ್ಟ ಹೊಗೆ ಮೇಲೇಳುತ್ತಿರುವುದು ಈ ಚಿತ್ರದಲ್ಲಿ ದಾಖಲಾಗಿದೆ.

ದಾಳಿಯಿಂದ ಎಂತಹ ಹಾನಿ ಆಗಿದೆ ಎಂಬ ಬಗ್ಗೆ ಕಂಪನಿಯ ಇದುವರೆಗೆ ಯಾವುದೇ ಹೇಳಿಕೆ ಬಿಡುಗಡೆ ಮಾಡಿಲ್ಲ.

ಈ ಮಧ್ಯೆ, ಹೂತಿ ಬಂಡುಕೋರರ ವಿರುದ್ಧ ಪ್ರತೀಕಾರ ಕ್ರಮಗಳು ಸೋಮವಾರ ರಾತ್ರಿಯಿಂದಲೇ ಆರಂಭವಾಗಿದ್ದು, ಯೆಮನ್‌ನ ರಾಜಧಾನಿ ಸಾನಾದಲ್ಲಿ ಬಂಡುಕೋರರ ನೆಲೆಗಳನ್ನೇ ಗುರಿಯಾಗಿ ಇಟ್ಟುಕೊಂಡು ಬಾಂಬ್ ದಾಳಿ ನಡೆದಿದೆ. ಈ ದಾಳಿಗಳಲ್ಲಿ ಕನಿಷ್ಠ 12 ಮಂದಿ ಮೃತಪಟ್ಟಿದ್ದಾರೆ ಎಂದು ಬಂಡುಕೋರರು ಹೇಳಿದ್ದಾರೆ. ಈ ದಾಳಿಯ ವಿಡಿಯೊ ದೃಶ್ಯಗಳನ್ನು ಸಹ ಬಿಡುಗಡೆ ಮಾಡಲಾಗಿದೆ.



ಅಬುಧಾಬಿಯ ಮುಸಾಫಾ ಪ್ರದೇಶದಲ್ಲಿ ಶಂಕಿತ ಡ್ರೋನ್ ದಾಳಿಯಿಂದ ತೈಲ ಟ್ಯಾಂಕರ್‌ಗಳು ಸ್ಫೋಟಿಸಿ ಹೊಗೆ ಮೇಲೇಳುತ್ತಿರುವ ಉಪಗ್ರಹ ಚಿತ್ರವನ್ನು ಪ್ಲಾನೆಟ್ ಲ್ಯಾಬ್ಸ್ ಪಿಬಿಸಿ ಬಿಡುಗಡೆ ಮಾಡಿದೆ –ಎಪಿ/ಪಿಟಿಐ ಚಿತ್ರ

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ಒಡಿಶಾ ಎಫ್‌ಸಿಗೆ ಮಣಿದ ನಾರ್ತ್‌ಈಸ್ಟ್

ಮಡಗಾಂವ್: ಡೇನಿಯಲ್ ಲಾಲಿಂಪುನಿಯಾ ಮತ್ತು ಅರಿದಾಯಿ ಸುರೇಜ್ ಗಳಿಸಿದ ಗೋಲುಗಳ ನೆರವಿನಿಂದ ಒಡಿಶಾ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ 2–0ಯಿಂದ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು. ಡೇನಿಯಲ್ 17ನೇ ನಿಮಿಷ ಮತ್ತು ಸುರೇಜ್ 22ನೇ ನಿಮಿಷಗಳಲ್ಲಿ ತಂಡಕ್ಕೆ ಗೋಲು ದಾಖಲಿಸಿದರು.

ಬ್ಯಾಂಬೊಲಿಮ್‌ನಲ್ಲಿ ಬುಧವಾರ ನಡೆಯುವ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವು ಎಸ್‌ಸಿ ಈಸ್ಟ್ ಬೆಂಗಾಲ್ ಸವಾಲು ಎದುರಿಸಲಿದೆ.

ಈ ಪಂದ್ಯ ಗೆದ್ದು ಪಾಯಿಂಟ್ಸ್ ಪಟ್ಟಿಯಲ್ಲಿ ಮೇಲೇರುವ ತವಕದಲ್ಲಿ ಆತಿಥೇಯ ಗೋವಾ ತಂಡವಿದೆ. ಕಳೆದ ಪಂದ್ಯದಲ್ಲಿ ತಂಡವು ನಾರ್ತ್‌ಈಸ್ಟ್ ಎಫ್‌ಸಿಯೊಡನೆ 1–1ರ ಡ್ರಾ ಸಾಧಿಸಿತ್ತು.

ಎಸ್‌ಸಿ ಈಸ್ಟ್ ಬೆಂಗಾಲ್ ತಂಡವು ಡಿಫೆನ್ಸ್‌ನಲ್ಲಿ ಬಲಿಷ್ಠವಾಗಿದೆ. ಈ ಪಂದ್ಯದಲ್ಲಿ ಗೋವಾ ತಂಡವನ್ನು ಮಣಿಸುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ

ಪ್ರಣಯ್‌ಗೆ ಜಯದ ಆರಂಭ

ಲಖನೌ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ಭಾರತದ ಎಚ್.ಎಸ್. ಪ್ರಣಯ್ ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದ್ದಾರೆ.

ಮಂಗಳವಾರ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ಮೊದಲ ಪಂದ್ಯದಲ್ಲಿ ಅವರು ನೇರ ಸೆಟ್‌ಗಳಿಂದ ಉಕ್ರೇನ್‌ನ ಡ್ಯಾನಿಲೊ ಬೋಸ್ನಿಕ್ ಅವರನ್ನು ಪರಾಭವಗೊಳಿಸಿದರು. ಕೇವಲ 36 ನಿಮಿಷಗಳ ಈ ಹಣಾಹಣಿಯಲ್ಲಿ ಭಾರತದ ಆಟಗಾರನಿಗೆ 21-14, 21-18ರಿಂದ ಗೆಲುವು ಒಲಿಯಿತು.

ಇತ್ತೀಚೆಗೆ ಕೊನೆಗೊಂಡ ಇಂಡಿಯಾ ಓಪನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಲಕ್ಷ್ಯ ಸೇನ್ ಅವರಿಗೆ ಮಣಿದಿದ್ದ ಪ್ರಣಯ್, ಮುಂದಿನ ಸುತ್ತಿನ ಪಂದ್ಯದಲ್ಲಿ ಭಾರತದ ಪ್ರಿಯಾಂಶು ರಾಜಾವತ್ ಅವರನ್ನು ಎದುರಿಸಲಿದ್ದಾರೆ. ಪ್ರಿಯಾಂಶು ಮೊದಲ ಸುತ್ತಿನಲ್ಲಿ ವಾಕ್‌ಓವರ್ ಪಡೆದಿದ್ದಾರೆ.

ನಾಲ್ಕನೇ ಶ್ರೇಯಾಂಕದ ಸಮೀರ್ ವರ್ಮಾ ಅವರು ಐರ್ಲೆಂಡ್‌ನ ನಹತ್ ಗುಯೆನ್ ಎದುರಿನ ಮೊದಲ ಸುತ್ತಿನ ಪಂದ್ಯದ ವೇಳೆ ಗಾಯಗೊಂಡು ನಿವೃತ್ತರಾದರು. ಮೊದಲ ಗೇಮ್‌ನಲ್ಲಿ 2–7ರಿಂದ ಹಿನ್ನಡೆಯಲ್ಲಿದ್ದಾಗ ಸಮೀರ್ ಕಾಲುನೋವಿನಿಂದಾಗಿ ಹಿಂದೆ ಸರಿದರು.


ಎಚ್.ಎಸ್. ಪ್ರಣಯ್– ಪಿಟಿಐ ಚಿತ್ರ

ಶುಭಂಕರ್ ಡೇ ಕೂಡ ಕಾರ್ತಿಕೇಯ ಗುಲ್ಶನ್ ಕುಮಾರ್ ಎದುರಿನ ಪಂದ್ಯದಲ್ಲಿ 2–9ರಲ್ಲಿ ಹಿಂದುಳಿದಿದ್ದಾಗ ಗಾಯದ ಕಾರಣ ಆಟ ಮುಂದುವರಿಸಲಿಲ್ಲ.

ಸೌರಭ್‌ಗೆ ಅನಿರೀಕ್ಷಿತ ಸೋಲು: ಭಾರತದ ಸೌರಭ್ ವರ್ಮಾ ಅವರು 21-15, 19-21, 18-21ರಿಂದ ಅಜರ್‌ಬೈಜಾನ್‌ನ ಅದೆ ರೆಸ್ಕಿ ಡ್ವಿಚಾಯೊ ಎದುರು ಸೋಲುಂಡರು.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಅಸ್ಮಿತಾ ಚಲಿಹಾ ಅವರು ಮಾಳವಿಕಾ ಬಾನ್ಸೋದ್ ಅವರಿಗೆ ವಾಕ್‌ಓವರ್ ನೀಡಿದರೆ, ಆಕರ್ಷಿ ಕಶ್ಯಪ್ 21-13, 21-14ರಿಂದ ಮುಗ್ಧಾ ಅಗ್ರೆ ಎದುರು ಗೆದ್ದರು. ಅನುಪಮಾ ಉಪಾಧ್ಯಾಯ ಅವರು ಋತುಪರ್ಣಾ ದಾಸ್ ಸವಾಲು ಮೀರಿದರು.

ಕ್ರಿಕೆಟ್ ಆಟಗಾರರ ಪಾನಗೋಷ್ಠಿ: ತನಿಖೆ ಬಿಸಿ

ಹೋಬರ್ಟ್ (ಪಿಟಿಐ): ಆ್ಯಷಸ್ ಸರಣಿಯ ಬಳಿಕ ತಡರಾತ್ರಿಯವರೆಗೆ ಪಾನೀಯ ಗೋಷ್ಠಿ ನಡೆಸಿದ ಆಟಗಾರರ ವಿರುದ್ಧ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯು (ಇಸಿಬಿ) ತನಿಖೆ ಆರಂಭಿಸಿದೆ. ಪೊಲೀಸರು ನಿಲ್ಲಿಸುವ ಸೂಚನೆ ನೀಡಿದ್ದರೂ ನಾಯಕ ಜೊ ರೂಟ್ ಸೇರಿದಂತೆ ಆಟಗಾರರು ತಂಡದ ಹೋಟೇಲ್‌ನಲ್ಲಿ ಪಾನಗೋಷ್ಠಿ ಮುಂದುವರಿಸಿದ್ದರು ಎನ್ನಲಾಗಿದೆ.

ಇಂಗ್ಲೆಂಡ್ ತಂಡದ ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್ ಮತ್ತು ಆಸ್ಟ್ರೇಲಿಯಾದ ಅಲೆಕ್ಸ್ ಕ್ಯಾರಿ, ಟ್ರಾವಿಸ್ ಹೆಡ್ ಮತ್ತು ನೇಥನ್ ಲಯನ್ ಕೂಡ ಆ್ಯಷಸ್ ಸರಣಿ ಮುಗಿದ ಬಳಿಕ ಪಾನಗೋಷ್ಠಿಗೆ ಹೋಬರ್ಟ್ ಹೋಟೇಲ್‌ನಲ್ಲಿ ಸೇರಿದ್ದು ವಿಡಿಯೊದಲ್ಲಿ ದಾಖಲಾಗಿದೆ ಎಂದು ವರದಿಯಾಗಿದೆ.



ಕಥಕ್‌ನ ಹಿರಿಯನಿಗೆ ಗೌರವ ನಮನ...

ಬಿಡಬ್ಲ್ಯುಎಫ್ ರ‍್ಯಾಂಕಿಂಗ್: ಲಕ್ಷ್ಯ ಉತ್ತಮ ಸಾಧನೆ

ನವದೆಹಲಿ (ಪಿಟಿಐ): ಭಾರತದ ಯುವ ಆಟಗಾರ ಲಕ್ಷ್ಯ ಸೇನ್ ಅವರು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ 13ನೇ ಸ್ಥಾನಕ್ಕೇರಿದ್ದಾರೆ. ಇತ್ತೀಚೆಗೆ ಅವರು ಇಂಡಿಯಾ ಓಪನ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದರು.


ಲಕ್ಷ್ಯ ಸೇನ್– ಪಿಟಿಐ ಚಿತ್ರ

ಇಂಡಿಯಾ ಓಪನ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಕೂಡ ಎಂಟನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಸ್ಥಾನ ಮತ್ತು ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ 10ನೇ ಸ್ಥಾನಗಳಲ್ಲಿ ಮುಂದುವರಿದಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಚೀನಾ ತೈಪೆಯ ತೈ ಜು ಯಿಂಗ್ ಅಗ್ರಸ್ಥಾನದಲ್ಲಿದ್ದಾರೆ. ಪುರುಷರ ವಿಭಾಗದಲ್ಲಿ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸೆನ್ ಮೊದಲ ಕ್ರಮಾಂಕದಲ್ಲಿದ್ದಾರೆ.


ಚಿರಾಗ್ ಶೆಟ್ಟಿ (ಎಡ) ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಎಎಫ್‌ಪಿ

ಲಕ್ಷ್ಯ ಸೇನ್ ಈ ಮೊದಲು 17ನೇ ಸ್ಥಾನದಲ್ಲಿದ್ದರು. ಸದ್ಯ ಅವರ ಬಳಿ 66,470 ಪಾಯಿಂಟ್‌ಗಳಿವೆ. ಹಾಲಿ ವಿಶ್ವ ಚಾಂಪಿಯನ್ ಸಿಂಗಪುರದ ಲೋಹ್ ಕೀನ್ ಯಿವ್ 12ನೇ ಸ್ಥಾನದಲ್ಲಿದ್ದಾರೆ. ಬಿ.ಸಾಯಿ ಪ್ರಣೀತ್ 18ನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅರವಿಂದ ಶಾಸ್ತ್ರಿ ಕರ್ನಾಟಕದ ಫಿಡೆ ಮಾಸ್ಟರ್


ಅರವಿಂದ ಶಾಸ್ತ್ರಿ

ಬೆಂಗಳೂರು: ಹಲವು ಬಾರಿ ಕರ್ನಾಟಕ ರಾಜ್ಯ ಚೆಸ್ ಚಾಂಪಿಯನ್ ಆಗಿರುವ, ಕೆಎಸ್‌ಸಿಎ ಗೌರವ ಕಾರ್ಯದರ್ಶಿ ಅರವಿಂದ ಶಾಸ್ತ್ರಿ ಅವರು ಕರ್ನಾಟಕದ ಫಿಡೆ ಮಾಸ್ಟರ್ ಆಗಿದ್ದಾರೆ.

ಅನುಭವಿ ಕೋಚ್ ಕೂಡ ಆಗಿರುವ ಅರವಿಂದ ಅವರಿಗೆ ಪೋಲೆಂಡ್‌ನ ವಾರ್ಸಾದಲ್ಲಿ ಇತ್ತೀಚೆಗೆ ನಡೆದ ಫಿಡೆ ಸಾಮಾನ್ಯ ಸಭೆಯಲ್ಲಿ ಈ ಗೌರವ ನೀಡಲಾಯಿತು.

ಮೈಸೂರು ರೇಸ್

ರೈಸಿಂಗ್ ಸನ್ ಗೆಲ್ಲುವ ನಿರೀಕ್ಷೆ

ಇಂಡಸ್ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೈಸಿಂಗ್ ಸನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಿವಿಟವೆಚ್ಚಿಯಾ 1, ಟೈಮ್ ಆಲ್ವೇಸ್ 2, ವಿಂಡ್ ಸ್ಟ್ರೈಕರ್ 8
2ನೇ ರೇಸ್: ಗೋಲ್ಡ್ ಕ್ರೆಸ್ಟ್ 2, ನೇವಲ್ ರೆಸ್ಲರ್ 5, ಸ್ಕಾರ್ಲೆಟ್ ಪ್ರಿನ್ಸೆಸ್ 12
3ನೇ ರೇಸ್: ಸೋ ಫಾರ್ 5, ಸ್ಕಾರ್ಪಿನ್ 7, ಲಕಿ ಒನ್ 6
4ನೇ ರೇಸ್: ದಿ ಡಾರ್ಲಿಂಗ್ 8, ರಾಯಲ್ ಡಿಸೈನ್ 10, ಟಾಪ್ ಸ್ಟ್ರೈಕರ್ 1
5ನೇ ರೇಸ್: ಓಕರ್ 2, ಜೆಮಿನಿ 3, ಸೂಪರ್ ಸೆಕ್ಸಿ 8
6ನೇ ರೇಸ್: ಫ್ಲಾಶ್ ಬಾಂಡ್ 5, ಮಿಸ್ಟರ್ ಶಾಂಫಾಯ್ 4. ಕ್ರೆಸೆಂಡೊ 1
7ನೇ ರೇಸ್: ರೈಸಿಂಗ್ ಸನ್ 11, ಲಾರ್ಡ್ ಕಮಾಂಡರ್ 9, ಕ್ರಿಮ್‌ಸನ್ ಫೈರ್ 6
8ನೇ ರೇಸ್: ಲಿಯೋಪಾರ್ಡ್ 3, ಟ್ರೇಸರ್ ಬುಲೆಟ್ 4, ಪರ್ಫೆಕ್ಟ್ ಲೆಗಸಿ 2

ಉತ್ತಮ ಬೆಟ್: ಫ್ಲಾಶ್ ಬಾಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8